



ತಾತ್ಯಾ-ಬಾಪು ಅವರ ಲಾವಣಿಗಳು

ಸಂಪಾದಕ

ಡಾ. ಹರಿಲಾಲ ಪವಾರ



ತಾತ್ಯಾ–ಬಾಪು ಅವರ ಲಾವಣಿಗಳು

ಸಂಪಾದಕರು

ಡಾ. ಹರಿಲಾಲ ಪವಾರ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ - ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

TATYA-BAPU AVARA LAAVANIGALU
(A Collection of Laavani's)

Edited by
Dr. Harilal Pawar
Director
Prasaaraanga, Karnatak University
Dharwada-580 003.

Published by
Prof. S.C. Ramesh
Director
Centre for Extension and Consultancy
Karantaka Jaanapada University
Gotagodi - 581 197
Shiggavi Taluk, Haveri Dist, Karnataka
Phone: 0836 - 2255180

Pages: xviii + 94 = 112 **Price:** ₹ 80/-
www.janapadauni.in
First Impression : 2014
ISBN- 978-93-83149-25-4

ಬೆಲೆ : ೮೦/-
ಮುಖಪುಟ: **ಕೆ.ಕೆ. ಮಕಾಳಿ**

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂರವಾಣಿ : ೦೮೦-೨೨೨೩೪೦೬೬

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು

ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ

ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಜನಪದ ಸಾಹಿತ್ಯ ಚರಿತ್ರೆಯಲ್ಲಿ ಮೌಖಿಕ ಪರಂಪರೆಗೆ ಮಹತ್ವದ ಸ್ಥಾನವಿದೆ. ಮೌಖಿಕ ಸಾಹಿತ್ಯವು ಅನೇಕ ಕವಲುಗಳಲ್ಲಿ ಟಿಸಿಲೊಡೆದಿದೆ. ಅದು ಶಿಷ್ಟ ಸಾಹಿತ್ಯ ಪ್ರಕಾರದಂತೆ ವ್ಯಾಕರಣದ ದೀಕ್ಷೆಯನ್ನು ಪಡೆದುಕೊಂಡು ಅಭಿವ್ಯಕ್ತಿ ಪಡೆಯದಿದ್ದರೂ, ಅನುಭವಜನ್ಯ ಕಾವ್ಯವಾಗಿ ಹೊರಹೊಮ್ಮಿದ್ದು ಅದರ ಅನನ್ಯತೆಗೆ ಸಾಕ್ಷಿಯಾಗಿದೆ. ಜನಪದರು ಸಮಕಾಲೀನ ಸಂಗತಿಗಳಿಗೆ ಸ್ಪಂದಿಸುತ್ತ ಚರಿತ್ರೆಯನ್ನು ಹಾಡಿನ ಮೂಲಕ ಕಟ್ಟಿಕೊಟ್ಟಿರುವುದು ಗಮನಾರ್ಹ. ನಿರೂಪಣಾತ್ಮಕ ಜನಪದ ಪದ್ಯ ಪ್ರಕಾರಗಳಲ್ಲಿ 'ಲಾವಣಿ' ಒಂದು ಮುಖ್ಯ ಪ್ರಕಾರ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದ ಘಟನಾವಳಿಗಳನ್ನು ಪ್ರಮುಖ ವಿಷಯವಸ್ತುವನ್ನಾಗಿಸಿಕೊಂಡ 'ಲಾವಣಿ ಸಾಹಿತ್ಯ' ಚರಿತ್ರೆಯನ್ನು ಅರಿತುಕೊಳ್ಳಲು ಇರುವ ಮೌಖಿಕಮಾರ್ಗ ಎಂಬುದನ್ನು ಯಾರೂ ಬಲ್ಲರು. ಈ ಹಿನ್ನೆಲೆಯಲ್ಲಿ ಲಾವಣಿಕಾರರು ಹಾಡುವ ಲಾವಣಿ ಸಾಹಿತ್ಯವು ಚಾರಿತ್ರಿಕ, ಸಾಹಿತ್ಯಿಕ, ಸಾಮಾಜಿಕ ಅಧ್ಯಯನದ ಅನೇಕ ಸಾಧ್ಯತೆಗಳನ್ನು ಒಳಗೊಂಡಿರುವ ಕಾರಣಕ್ಕೆ ಅವುಗಳ ಸಂಗ್ರಹ, ಸಂಪಾದನೆ, ಅಧ್ಯಯನ ಇತ್ಯಾದಿ ಕಾರ್ಯಗಳು ಮುಖ್ಯವೆನಿಸುತ್ತವೆ. ವಿಜಾಪುರದ ಗಡಿ ಭಾಗದಲ್ಲಿರುವ 'ಸಂಖ' ಗ್ರಾಮದ 'ತಾತ್ಯಾ–ಬಾಪು' ಎಂಬ ಲಾವಣಿಕಾರರು ರಚಿಸಿ, ಹಾಡಿದ ಲಾವಣಿಗಳನ್ನು ಡಾ. ಹರಿಲಾಲ ಪವಾರ ಅವರು 'ತಾತ್ಯಾ–ಬಾಪು ಅವರ ಲಾವಣಿಗಳು' ಸಂಕಲನದಲ್ಲಿ ಸಂಗ್ರಹಿಸಿ ಕೊಟ್ಟಿರುವರು. ಅಧ್ಯಯನಪೂರ್ಣ ಪ್ರಸ್ತಾವನೆಯನ್ನು ಬರೆದಿರುವ ಸಂಪಾದಕರು, ಲಾವಣಿ ಸಾಹಿತ್ಯದ ಸಂಗ್ರಹಕಾರ್ಯ, ಅದು ಬೆಳೆದು ಬಂದ ಬಗೆ, ಅದನ್ನು ಹಾಡುವ ಶೈಲಿ, ನಿರೂಪಿಸುವ ವಿಧಾನ, ಹರದೇಶಿ–ನಾಗೇಶಿ ಲಾವಣಿ ಪ್ರಕಾರ ಇತ್ಯಾದಿ ಅಂಶಗಳನ್ನು ದಾಖಲಿಸಿದ್ದಾರೆ. ಪ್ರಕೃತ ಶೀರ್ಷಿಕೆ ಲಾವಣಿ ಸಾಹಿತ್ಯ ಸಂಗ್ರಹಕ್ಕೆ ಹೊಸ ಸೇರ್ಪಡೆಯಾಗಿದೆ. ಡಾ. ಪವಾರ ಅವರು ಈ ಸಂಕಲನದ ಮೂಲಕ ಲಾವಣಿ ಸಾಹಿತ್ಯಕ್ಕೆ ಮತ್ತೊಂದು ಕೊಡುಗೆಯನ್ನು ನೀಡಿದ್ದಾರೆ. ಅಮೂಲ್ಯ ಕೃತಿಯನ್ನು ಸಂಪಾದಿಸಿಕೊಟ್ಟಿರುವ ಡಾ. ಹರಿಲಾಲ ಪವಾರ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ದತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ–ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಭಾರತೀಯ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ಇರುವ ಮಹತ್ವದ ಆಕರಗಳಲ್ಲಿ ಮೌಖಿಕ ಸಾಹಿತ್ಯವೂ ಒಂದು. ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಗೀ ಗೀ ಪದಗಳು, ಲಾವಣಿ ಪದಗಳು ಹೆಚ್ಚು ಜನಪ್ರಿಯವಾಗಿವೆ. ಲಾವಣಿಗಳು ಜನಪ್ರಿಯತೆ ಪಡೆದುಕೊಳ್ಳುವುದರ ಜೊತೆಗೆ ಜನಪದರ ಕಾವ್ಯಪ್ರತಿಭಾ ಶಕ್ತಿಯನ್ನೂ ಲೋಕಕ್ಕೆ ಅರಹುತ್ತವೆ. ಘಟನೆ, ಕಥಾವಸ್ತು, ಸನ್ನಿವೇಶದ ವರ್ಣನೆ, ವ್ಯಕ್ತಿ ಪರಿಚಯ, ಇಲ್ಲವೆ ತತ್ತ್ವ ಹೇಳುವುದು ಇವು ಲಾವಣಿ ಪ್ರಕಾರದ ಮೂಲದ್ರವ್ಯ. ಲಾವಣಿಕಾರರು ಬಳಸುವ ಪದಗಳು, ನುಡಿಗಟ್ಟುಗಳು, ನಾಣ್ಣುಡಿ, ಶೃಂಗಾರ ವರ್ಣನೆ ಮುಂತಾದ ಅಂಶಗಳು ಅನನ್ಯತೆಯಿಂದ ಕೂಡಿರುತ್ತವೆ. ಲಾವಣಿಗಳು ವ್ಯಕ್ತಿಗತ ರಚನೆಗಳಾದರೂ, ಅವು ಸಮಷ್ಟಿಪ್ರಜ್ಞೆಯನ್ನು ಬಿಂಬಿಸುತ್ತವೆ. ಲಾವಣಿಕಾರರ ಅಭಿವ್ಯಕ್ತಿಯು ಒಂದು ಕಾಲಘಟ್ಟದ ಚರಿತ್ರೆಗೆ ಕನ್ನಡಿ ಹಿಡಿಯುವುದರಿಂದ ವರ್ತಮಾನದ ನೆಲೆಯ ಅಧ್ಯಯನದ ದೃಷ್ಟಿಯಿಂದಲೂ ಅವು ಮುಖ್ಯವೆನಿಸುತ್ತವೆ. ಈ ಹಿನ್ನೆಲೆಯಲ್ಲಿ 'ತಾತ್ಯಾ-ಬಾಪು ಅವರ ಲಾವಣಿಗಳು' ಗಮನಾರ್ಹವಾದುದು. ಡಾ. ಹರಿಲಾಲ ಪವಾರ ಅವರ ಕ್ಷೇತ್ರಕಾರ್ಯಾಧಾರಿತ ಈ ಸಂಕಲನ ಜನಪದ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ. ಅಮೂಲ್ಯವಾದ ಸಂಕಲನವನ್ನು ಸಂಪಾದಿಸಿಕೊಟ್ಟಿರುವ ಡಾ. ಹರಿಲಾಲ ಪವಾರ ಅವರಿಗೆ ಅಭಿನಂದನೆಗಳು ಸಲ್ಲಬೇಕು.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಅನ್ವಯಿಕ ಜಾನಪದ ನಿಕಾಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸಗಳಲ್ಲಿ ಸಹಕರಿಸಿದ ಶ್ರೀ ಸಂಗಮೇಶ ಎಸ್. ಗಣಿ, ಶ್ರೀ ವಿಶ್ವ ಗುಜ್ಜರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಅವರಿಗೆ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಅರಿಕೆ

ಉತ್ತರ ಕರ್ನಾಟಕದಲ್ಲಿ ಲಾವಣಿ, ಗೀ ಗೀ ಹಾಡುಗಳು ಇವತ್ತಿಗೂ ಬಹಳಷ್ಟು ಪ್ರಸಿದ್ಧಿ ಪಡೆದಿವೆ. ಜನಸಾಮಾನ್ಯರ ಸಂಸ್ಕೃತಿಯ ಮೇಲೆ ಅತೀವ ಪ್ರಭಾವ ಬೀರಿವೆ. ಏಕಕಾಲಕ್ಕೆ ನೆರೆದಂಥ ಸಾವಿರಾರು ಜನರನ್ನು ಮಂತ್ರಮುಗ್ಧರನ್ನಾಗಿ ಸೆರೆ ಹಿಡಿದು ಅವರ ಬುದ್ಧಿ ಮನಸ್ಸು ಹೃದಯಗಳನ್ನು ಮುಟ್ಟುತ್ತವೆ. ಹಬ್ಬ ಹರಿದಿನಗಳಲ್ಲಿ, ಜಾತ್ರೆ-ಉತ್ಸವಗಳಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಈ ಹಾಡುಗಳನ್ನು ಕೇಳುವುದೆಂದರೆ ಒಂದು ಬಗೆಯ ಮನರಂಜನೆ, ಸಮೀಪದ ಯಾವುದಾದರೊಂದು ಊರಲ್ಲಿ ಲಾವಣಿ, ಗೀ ಗೀ (ಹಾಡಕಿ) ಮೇಳಗಳು ಜರುಗಿದರೆ ಸಾಕು ಜನರು ಚಕ್ಕಡಿಗಳನ್ನು ಕಟ್ಟಿಕೊಂಡು ಹಾಡು ಕೇಳಲು ಹೋಗುತ್ತಾರೆ. ಈ ಮೇಳಗಳು ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ಜಿಲ್ಲೆಗಳಾದ ಸಾಂಗಲಿ, ಸೊಲಾಪುರ, ಬೆಳಗಾವಿ, ವಿಜಾಪುರ, ಗುಲ್ಬರ್ಗಾ ಮತ್ತು ಬೀದರ ಮುಂತಾದ ಕಡೆ (ಭೀಮಾ ಮತ್ತು ಕೃಷ್ಣಾ ತೀರದ ಪ್ರದೇಶ)ಗಳಲ್ಲಿ ಹುಟ್ಟಿ ಜನಪ್ರಿಯವಾಗಿವೆ. 'ಪೊವಾಡಾ' ಮರಾಠಿ ಶಬ್ದವೇ ಲಾವಣಿಗೆ ಮೂಲವೆಂದು ಹೇಳುತ್ತಾರೆ. ಇದು ಪೇಶ್ವೆಯವರ ಕಾಲ (೧೮ನೇ ಶತಮಾನ)ದಲ್ಲಿ ಕನ್ನಡದಿಂದಲೇ ಮರಾಠಿಗೆ ಹೋಗಿರಬಹುದೆಂದು ಕೆಲವರ ವಾದ. ಅದೇನೇ ಇರಲಿ ಈ ಹಾಡುಗಳ ಗತ್ತುಗಾರಿಕೆಯನ್ನು ನೋಡಿದರೆ 'ಪೊವಾಡಾ' ಮಾದರಿಯೇ ಕನ್ನಡದ ('ಖ್ಯಾಲಿ, 'ಸಖಿ'ಬಿಟ್ಟು) ಎಲ್ಲ ಪ್ರಕಾರದ ಗತ್ತುಗಾರಿಕೆ ಅಂದರೆ ಪಲ್ಲ, ಚಾಲ, ಕೂಡಪಲ್ಲ ಇವುಗಳ ಎರಡರಲ್ಲಿಯೂ ಸರಿಸಮಾನವಾಗಿರುವುದನ್ನು ಗಮನಿಸಬಹುದು. ಕನ್ನಡ ಡಪ್ಪಿನ ಪದದ ಹರವು ಮರಾಠಿ ಪೊವಾಡಾಕ್ಕಿಂತ ವಿಸ್ತಾರವಾಗಿರುವುದು ಮೇಲುನೋಟಕ್ಕೆ ಕಂಡುಬರುತ್ತದೆ. ಕನ್ನಡದ 'ಲಾವಣಿ' ಮರಾಠಿಯ 'ಪೊವಾಡಾ' ಇವೆರಡು ಪದಗಳು ಸಮಾನವೆನ್ನಬಹುದು.

ಸ್ವಾತಂತ್ರ್ಯ ಪೂರ್ವದಿಂದಲೂ ನಮ್ಮಲ್ಲಿ ಲಾವಣಿ ಹಾಡುಗಳು ಪ್ರಚಲಿತದಲ್ಲಿವೆ. ಲಾವಣಿಗಳನ್ನು ರಚಿಸಿದವರಲ್ಲಿ ಹಿಂದೂ-ಮುಸ್ಲಿಂರ ಪಾತ್ರ ಮಹತ್ವದ್ದು. ದಿಲ್ಲಿ ಬಾದಶಾಹಾನ ಕಾಲದಲ್ಲಿ (೧೫೫೬-೧೬೦೫), ಶಾಹಾಅಲಿ ಮತ್ತು ತುಕನಗೀರ್ (೧೫೫೦-೧೬೪೫), ಇವರಿಬ್ಬರೂ ಪ್ರಸಿದ್ಧ ಲಾವಣಿಕಾರರಿದ್ದರು. ಇವರ ಹಾಡುಗಳಿಗೆ ಮನಸೋತ ಬಾದಶಾಹಾ ಅಕ್ಬರನು ತನ್ನ ಕಿರೀಟದಲ್ಲಿದ್ದ ಕಲ್ಗಿ (ಹಕ್ಕಿಯ ಗರಿ, ಪುಂಚ) ಯನ್ನು ತುಕನ್‌ಗೀರನಿಗೆ, ಬಲದ್ದ ಕಿರೀಟದಲ್ಲಿ ಪುಷ್ಪಗುಚ್ಛವನ್ನು (ತುರಾಯಿ) ಶಾಹಾಅಲಿಗೆ ಪಾರಿತೋಷಕವಾಗಿ ಕೊಟ್ಟನಂತೆ. ಅಂದಿನಿಂದ ಇವರಿಬ್ಬರೂ 'ಕಲ್ಗಿ' ಮತ್ತು 'ತುರಾ' ಸಂಪ್ರದಾಯಕ್ಕೆ ಆದ್ಯರೆನಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಲಾವಣಿಗಳನ್ನು ರಚಿಸಿ ಜನಪ್ರಿಯರಾದವರಲ್ಲಿ **ಬೆಳಗಾವಿ ಜಿಲ್ಲೆಯ ಸಂಗೊಳ್ಳಿಯ** ಬಡಿಗೇರ (೧೭೮೦-೧೮೫೦), ಮೋದಿನಸಾಹೇಬ

(೧೭೮೦-೧೮೭೦), **ಬೈಲಹೊಂಗಲದ** ಬಸವ (೧೭೮೦-೧೮೭೦), ಶಾಮರಾಯ (೧೮೦೦-೧೮೮೦), ಅಪ್ಪು (೧೮೨೦-೧೯೦೦), **ಗೋಕಾಕದ** ಸಿದ್ಧಸೇವಕ (೧೮೦೦-೧೮೮೦), ಮಲ್ಲೇಶಪ್ಪಾ (೧೮೩೨-೧೯೧೭), ಯಲ್ಲಪ್ಪ (೧೮೫೦-೧೯೦೦), **ಹುಲಕುಂದದ** ಗುರುಪಾದಪ್ಪ (೧೮೫೨-೧೯೩೨), ಪ್ಯಾಟಿಶೆಟ್ರು (೧೮೭೭-೧೯೩೩), ಬಸಪ್ಪ ಭೀಮಕವಿ (೧೯೦೯-೧೯೭೦), **ವಿಜಾಪುರ ಜಿಲ್ಲೆ ತೇರದಾಳದ** ಗೋಪಾಳ ದುರದುಂಡಿ (೧೮೦೦-೧೮೭೦), (ಇದು ಕವಿಗಳ ಗುಂಪಿನ ಹೆಸರು. ಆರೇರ ರಾಮಣ್ಣ, ಉಪ್ಪಾರ ವೆಂಕಣ್ಣ, ತುಕಾರಾಮ, ಮಾಲಗಾರ, ಜ್ಯೋತೆಪ್ಪ, ನ್ಯಾಮಣ್ಣ) **ಜನವಾಡ** ನಾನಾಸಾಹೇಬ (೧೮೦೦-೧೮೭೦),**ಬನಹಟ್ಟಿಯ** ತುಕಾರಾಮ (೧೮೮೦-೧೯೬೦), ಸಿದ್ರಾಮಪ್ಪ (೧೮೮೮-೧೯೫೭), **ಮಹಾಲಿಂಗಪುರದ** ಮಲಿಕ್ ಸಾಹೇಬ ೧೯೦೨, **ಹಲಸಂಗಿಯ** ಸಂಗೂರಾಯಪ್ಪ (೧೯೨೦-೧೯೦೦), ಖಾಜಾಭಾಯಿ (೧೮೪೭-೧೯೦೭), ಸಿದ್ಧು ಶಿವಲಿಂಗ (೧೮೫೦-೧೯೧೦), **ಬೀಬೀ ಇಂಗಳಗಿಯ** ಹಸನಸಾಹೇಬ/ಮಲ್ಲಾಹಸನ್ (೧೮೫೮-೧೯೧೮), ಕಾಶೀಮ್, ಇಮಾಮಶಾ, ಲಾಳೇಸಾ **ಕೋರಳ್ಳಿಯ** ಮೌಲಾಲಿ (೧೮೮೪-೧೯೫೪), **ಚಾಂದಕೋಟಿ ಗುಡುಲಾಲ (೧೯೦೬-೧೯೫೬), ಕಡ್ನಿಯ** ಕಲ್ಲಪ್ಪ (೧೮೧೦-೧೯೭೫), **ಹದ್ರಿ** ಬಡೇಸಾ, **ಸಾಲೋಟಗಿಯ** ನಿಂಗಪ್ಪ **ಜತ್ತ ತಾಲೂಕಿನ** ಸಂಖದ ತಾತ್ಯಾ (೧೮೯೦-೧೯೬೦), ಬಾಪು (೧೯೦೦-೧೯೭೫), ಬಸಯ್ಯ (೧೯೦೦-೧೯೭೫), **ಗುಲ್ಬರ್ಗಾ ಜಿಲ್ಲೆಯ ದೇಗಾಂವದ** ಮಹಾಲಿಂಗ ಮಹಾರುದ್ರ (೧೮೪೨-೧೯೩೨), ಗುಂಡಪ್ಪ ೧೮೭೭-೧೯೨೭), **ಮಹಾಗಾಂವದ ಮೀರಾಸಾಹೇಬ (೧೯೧೭-೧೯೭೫), ಅಂಬಲಗಿ** ಜಗದೇವಪ್ಪ (೧೮೮೦-೧೯೩೭), **ಬೀದರ ಜಿಲ್ಲೆಯ ಹುಮ್ನಾಬಾದದ** ನರಸಣ್ಣ (೧೮೬೦-೧೯೪೪), **ಚಿಟಗುಪ್ಪಾದ** ನಾಗಪ್ಪ (೧೮೭೦-೧೯೪೦), ಇನ್ನೂ ಹಲವಾರು ಜನ ಪ್ರಥಮ ಲಾವಣಿಕಾರರ ಪರಂಪರೆಯಲ್ಲಿ ಪ್ರಸಿದ್ಧಿ ಪಡೆದ ಲಾವಣಿಕಾರರು ಆಗಿ ಹೋಗಿದ್ದಾರೆ. ಉದಾಹರಣೆಗಾಗಿ ಇಲ್ಲಿ ಕೆಲವು ಪ್ರಮುಖ ಲಾವಣಿಕಾರರ ಹೆಸರುಗಳನ್ನು ಮಾತ್ರ ಹೇಳಲಾಗಿದೆ.

"ಹರದೇಶಿ ನಾಗೇಶಿ ವಾದ-ವಿವಾದ ಸರಣಿ ಬಹು ಜನಪ್ರಿಯವಸ್ತುವಾಗಿ ಪರಿಣಮಿಸಿದ ಪ್ರಯುಕ್ತ ಲಾವಣಿ ಸಾಹಿತ್ಯದ ಚರಿತ್ರಾತ್ಮಕ ಮತ್ತು ಸಾಮಾನ್ಯ ನೀತಿ ಬೋಧಕ ಹಾಡುಗಳ ಜನಪ್ರಿಯತೆ ಕೆಲಮಟ್ಟಿಗೆ ತಗ್ಗಿತು; ಇಲ್ಲವೆ ಅವು ಈ ಹಾಡುಗಾರಿಕೆಯಲ್ಲಿಯೆ ದೃಷ್ಟಾಂತರೂಪವಾಗಿ ಅಂತರ್ಗತವಾದವು. ಹೆಣ್ಣು-ಗಂಡಿನ ವಸ್ತು, ಈ ಲಾವಣಿ ಪ್ರಭಾವದಿಂದಲೇ, ಉತ್ತರ ಕರ್ನಾಟಕದ ಸಣ್ಣಾಟಗಳಲ್ಲಿ ಒಂದಿಲ್ಲೊಂದು ವ್ಯಾಜ್ಯದಿಂದ ಸ್ಥಾನ ಪಡೆದುದನ್ನು ಕಾಣುತ್ತೇವೆ. ಒಂದು ದೃಷ್ಟಿಯಿಂದ ಈ ವಸ್ತು ಉತ್ತರ ಕರ್ನಾಟಕದ ಗ್ರಾಮೀಣ ಜನಸಾಮಾನ್ಯರ ವೇದಾಂತವಾಗಿ ಪರಿಣಮಿಸಿದ್ದಿತೆಂದರೂ ಸರಿಯೆ. ಇಲ್ಲಿರುವ ಲೋಕಾನುಭವ, ಪುರಾಣ, ಬ್ರಹ್ಮಾಂಡ-ಪಿಂಡಾಂಡಾದಿ ತಾತ್ವಿಕ ವಿಷಯ ಸುಶ್ರಾವ್ಯವಾದ ಸಂಗೀತ, ನಾಟಕೀಯತೆಯಾದಿ ಅಂಶಗಳಿಂದ ಇಂದಿಗೂ

ಹರದೇಶಿ–ನಾಗೇಶಿ, ಗೀ ಗೀ– ಲಾವಣಿಗಳು ಈ ಭಾಗ(ಉತ್ತರ ಕರ್ನಾಟಕ)ದಲ್ಲಿ ಜನಪ್ರಿಯವಾಗಿ ಬದುಕಿ ಉಳಿದಿವೆ ಎನ್ನುತ್ತಾರೆ" ಡಾ.ಹೆಂಡಿಯವರು.

"ಲಾವಣಿಯ ಹರಹು ಬಹು ವಿಸ್ತಾರವಾದುದು, ಅದರಲ್ಲಿ ಕಥೆಯಿರುತ್ತದೆ, ಘಟನೆ ಇರುತ್ತದೆ, ಸನ್ನಿವೇಶದ ವರ್ಣನೆ ಇರುತ್ತದೆ, ವ್ಯಕ್ತಿ ಪರಿಚಯವಿರುತ್ತದೆ, ಸರಸ ಸಂಭಾಷಣೆಯಿರುತ್ತದೆ. ಇವೆಲ್ಲವುಗಳು ಇಲ್ಲದೆ ಕೇವಲ ತತ್ತ್ವಹೇಳಲ್ಪಟ್ಟಿರುತ್ತದೆ. ಇವು ಆ ಲಾವಣಿಯ ಪ್ರಭೇದಕ್ಕೆ ಕಾರಣೀಭೂತವಾಗುತ್ತವೆ. ಘಟನಾ ಪ್ರಧಾನವಾದುದು, ವೀರಲಾವಣಿ, ಕಥೆಯಿದ್ದುದು ಕಥಾನಕ, ಹಾಗೆಯೇ ತಾತ್ವಿಕ ಮುಂತಾದವುಗಳು. ಆದ್ದರಿಂದ ಕೇವಲ ಕಥಾನಕವಾದವುಗಳೇ ಲಾವಣಿಗಳೆನ್ನುವುದು ಸಾಧುವಲ್ಲ. ಅವು ಬೇರೆ ರೀತಿಯ ಹಾಡಿನ ಪ್ರಭೇದಗಳಾಗಬಹುದು" ಎಂಬ ಅಭಿಪ್ರಾಯ ಡಾ.ಸುಂಕಾಪುರ ಅವರದ್ದು. ಇಲ್ಲಿ ಲಾವಣಿಕಾರರ ಅನುಭವ ಹಾಡಿನ ವಸ್ತು, ಹಾಡಿನ ಭಾಷೆ ಎಲ್ಲವೂ ಕೂಡಾ ಗ್ರಾಮಾಂತರ ನೆಲೆಯಲ್ಲೆ ಮೂಡಿ ಬಂದಿರುವುದು ವಿಶೇಷ. ಹೀಗಾಗಿ ಗ್ರಂಥಸ್ಥ ಸಾಹಿತ್ಯದಲ್ಲಿ ದಾಖಲಾಗದ ಅನೇಕ ವಿಚಾರಗಳು ಇಲ್ಲಿ ಎದ್ದುಕಾಣುತ್ತವೆ. ಕೆಲವು ಶೃಂಗಾರಪರವಾದ ಲಾವಣಿಗಳಲ್ಲಿ ವ್ಯಕ್ತವಾಗುವ ಕೆಲವೊಂದು ಸಂಗತಿಗಳು ಸುಶಿಕ್ಷಿತರಿಗೆ ಅಸಹ್ಯ ಎನಿಸಿದರೂ ಲಾವಣಿಗಳು ಆಯಾ ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ರಸಾನುಭವವನ್ನುಂಟುಮಾಡಿ ಕವಿಯ ಅದ್ಭುತ ಕಲ್ಪನೆಯನ್ನು ಪ್ರತಿಬಿಂಬಿಸುತ್ತವೆ. ಈ ಲಾವಣಿ ಸಂಗ್ರಹದಲ್ಲಿ ಬರುವ ದಿವಂಗತ 'ಬಾಪು' ಸಂಖ ಹಾಡಿದ **'ಕನಸೊಂದ ಬಿತ್ತ ಅದರ ಹಾರಗೆಡಲಿ'** ಎಂಬ ಲಾವಣಿಯಲ್ಲಿಯ ಒಂದು ಶೃಂಗಾರ ಪ್ರಸಂಗದ ವರ್ಣನೆ ಹೀಗಿದೆ.

"ಕಾಂತ ಕೇಳ ನನ್ನ ಮಾತಾ
ಶಾಂತ ಇಲ್ಲ ನನ್ನ ಜೀವಕ
ಹೆಂತಾ ಕೆಟ್ಟ ಕನಸ ಬಿತ್ತಾ ನನ್ನ ಹಾಂಟ್ಯಾಂದು
ಪೂರ್ವಿ ಋಣಾನುಬಂಧ ಇತ್ತ ಏನ ನಂದು ನಿಂದು
ಆಗಿ ಹೋತ ಭಾಳ ಗೋಳ
ಮಂದಿ ಮಕ್ಕಳ ಬಳಗದೊಳಗ
ಕೂಡ್ಲಿ ಅಂತಾಳ ಇನ್ನ ನಂದು ನಿಂದು ಗೆಳತನಾ
ಒತ್ತಿ ಹಿಡದು ತೆಕ್ಕಿ ಹೊಡದು
ಕುಂತಾಳ ತೊಡಿಮ್ಯಾಲ
ಅಂತಾಳ ಪ್ರಿಯಾಗ
ನಡೀಲಿ ನಂದು ನಿಂದು ಹಿಂಗ
ಸ್ವಾಮಿ ಶಂಕರಲಿಂಗನ ದಯಾ ಇರಲಿ
ನಮ್ಮ ಮ್ಯಾಗ....."

ಲಾವಣಿಕಾರರು ಬಳಸುವ ಪದಗಳು ನುಡಿಗಟ್ಟು, ನಾಣ್ಣುಡಿ, ಶೃಂಗಾರ ವರ್ಣನೆಗಳು ಶ್ರೋತೃಗಳ ಮೈನವಿರೇಳುವಂತೆ ಮಾಡುತ್ತವೆ.

ಈ ಸಂಗ್ರಹದಲ್ಲಿ ಹತ್ತು ಲಾವಣಿಗಳು ಅಲ್ಲದೆ ಎರಡು ಸಣ್ಣ ಲಾವಣಿಗಳುಂಟು. ಇವುಗಳನ್ನು ಸಂಗ್ರಹದ ಮೊದಲಿಗೊಂದು ಹಾಗೂ ಕೊನೆಗೊಂದು ಕೊಡಲಾಗಿದೆ. ಏಕೆಂದರೆ ಹಾಡುಗಾರರು ಪ್ರತಿಯೊಂದು ಲಾವಣಿಯನ್ನು ಹಾಡುವಾಗ ಮೊದಲಿಗೆ ಉಪೋದ್ಘಾತ (ಪ್ರಾರ್ಥನಾ) ಸ್ವರೂಪದ ಚಿಕ್ಕ ಹಾಡು. ಕೊನೆಗೊಂದು ಮುಕ್ತಾಯ (ಗುರುಸ್ತುತಿ) ಸ್ವರೂಪದ ಹಾಡುವ ವಾಡಿಕೆಯಿದೆ. ಮೊದಲಿಗೆ ಸೂಚನಾ 'ಪಲ್ಲ' ಹೇಳುವುದಕ್ಕೆ 'ಸಖಿ' ಎಂದು ಕೊನೆಯ ಮುಕ್ತಾಯಕ್ಕೆ 'ಖ್ಯಾಲಿ' ಎಂದು ಲಾವಣಿಕಾರರು ಹೇಳುವುದುಂಟು. ಈ ಕೃತಿಯಲ್ಲಿ ಪ್ರತಿಯೊಂದು ಲಾವಣಿಗಳಿಗೆ ಮೊದಲಿಗೆ ಹಾಗೂ ಕೊನೆಯದಕ್ಕೆ ಎರಡೆರಡು 'ಸಖಿ' ಮತ್ತು 'ಖ್ಯಾಲಿ'ಗಳನ್ನು ಕೊಡದೆ ಈ ಸಂಗ್ರಹದಲ್ಲಿಯ ಲಾವಣಿ ಹಾಡುಗಳಿಗೆ ಕೂಡಿ ಮೊದಲಿಗೆ ಪ್ರಾರ್ಥನಾ 'ಸಖಿ' ಹಾಡನ್ನು ಕೊನೆಯದಾಗಿ ಒಂದು ಉಪಸಂಹಾರದ 'ಖ್ಯಾಲಿ'ಯನ್ನು ಕೊಡಲಾಗಿದೆ. ಅನುಬಂಧದಲ್ಲಿ ಲಾವಣಿಕಾರರಿಂದ ಸಂಗ್ರಹಿಸಿದ ಇತರೇ ಐದು ಹಾಡುಗಳನ್ನು ಕೊಡಲಾಗಿದೆ.

ವಿಜಾಪುರದ ಗಡಿ ಭಾಗದಲ್ಲಿರುವ ಸಂಖ (ಮಹಾರಾಷ್ಟ್ರ)ದಲ್ಲಿ ಜೀವಿಸಿದ ತಾತ್ಯಾ ಮತ್ತು ಬಾಪು ಬೇರೆ ಬೇರೆ ಲಾವಣಿಕಾರರಾಗಿದ್ದು ಒಳ್ಳೆಯ ಸ್ನೇಹಿತರಾಗಿದ್ದರು. ಅವರ ಸ್ನೇಹದ ಕುರುಹಾಗಿ ಬಾಪುವು, 'ತಾತ್ಯಾ-ಬಾಪು' ಎಂಬ ಕಾವ್ಯನಾಮವನ್ನು ಇಟ್ಟುಕೊಂಡು ಲಾವಣಿಗಳನ್ನು ರಚಿಸಿ ಚಿರಪರಿಚಿತನಾದ. ಕವಿಯಾಗಿದ್ದ ತಾತ್ಯಾ, ಬಾಪುವಿನ ಸ್ನೇಹಿತ, ಮಾತ್ರವಲ್ಲ ಗುರುವೂ ಆಗಿದ್ದ. ಬಾಪುವಿನ ಹಾಡುಗಳಲ್ಲಿಯ ದೋಷಗಳನ್ನು ತಿದ್ದುತ್ತಿದ್ದ. ಒಂದು ಕಾಲಕ್ಕೆ 'ಜತ್ತ ಸಂಸ್ಥಾನದ ಡಫಳೆ ಸಂಸ್ಥಾನಿಕರಿಂದ ಭೇಷ್ ಎನಿಸಿಕೊಂಡ 'ಬಾಪು' ಪ್ರಸಿದ್ಧ ಲಾವಣಿಕಾರನಾಗಿ ಮೆರೆದಿದ್ದಾನೆ. 'ಬಾಪು' ತಾನು ರಚಿಸಿದ ಲಾವಣಿಗಳಿಗೆ ತನ್ನ ಮತ್ತು ತಾತ್ಯಾನ ಹೆಸರನ್ನು ಜೋಡಿಸಿ 'ತಾತ್ಯಾ-ಬಾಪು' ಎಂಬ ಕಾವ್ಯನಾಮ ಇಟ್ಟುಕೊಂಡಿದ್ದ. ಆ ಕಾರಣದಿಂದ ಈ ಲಾವಣಿ ಸಂಗ್ರಹಕ್ಕೆ **'ತಾತ್ಯಾ-ಬಾಪು ಅವರ ಲಾವಣಿಗಳು'** ಎಂಬ ಶೀರ್ಷಿಕೆ ಇಟ್ಟಿರುವೆ.

ಕರ್ನಾಟಕದ ಉತ್ತರ ಗಡಿಭಾಗದಲ್ಲಿರುವ ಮಹಾರಾಷ್ಟ್ರದ ಜತ್ತ ತಾಲೂಕಿನ ಸಂಖದ ಶ್ರೀ ಗುರುಬಸವ ವಿದ್ಯಾಮಂದಿರ ಹಾಗೂ ಕಿರಿಯ ಮಹಾವಿದ್ಯಾಲಯದಲ್ಲಿ ದಿನಾಂಕ ೧೮-೧-೨೦೦೧ ರಂದು ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದ ೪೪೭ನೆಯ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರ ಏರ್ಪಡಿಸಲಾಗಿತ್ತು. ಆ ಶಿಬಿರದಲ್ಲಿ ಅದೇ ಊರಿನ ದಿ: ಕಲ್ಲಯ್ಯಶಾಸ್ತ್ರಿ ಸಂಖ ಇವರು **'ಕುಟಾಳ ಮಂದಿದು ಕಿಟಾಳ ಭಾಳ"** ಎನ್ನುವ ಲಾವಣಿಯನ್ನು ಹಾಡಿದ್ದರು. ಅದು ನನ್ನ ಮನಸ್ಸಿಗೆ ಬಹಳ ಹಿಡಿಸಿತ್ತು. ಕಾರ್ಯಕ್ರಮ ಮುಗಿದ ಬಳಿಕ ದಿ: ಕಲ್ಲಯ್ಯಶಾಸ್ತ್ರಿ ಹಾಗೂ ಕಾರ್ಯಕ್ರಮ ಏರ್ಪಡಿಸಿದ್ದ ಪ್ರೊ. ಕೆ.ಕೆ.ಪತ್ತಾರ ಇವರಿಬ್ಬರ ಜೊತೆ ಚರ್ಚಿಸಿ ಸಂಖ ಭಾಗದಲ್ಲಿ ಆಗಿ ಹೋದ ಪ್ರಸಿದ್ಧ ಲಾವಣಿಕಾರರ ಮಾಹಿತಿ ತೆಗೆದು ಅವರು ಹಾಡುತ್ತಿದ್ದ ಲಾವಣಿಗಳನ್ನು ಸಂಗ್ರಹಿಸುವ ವಿಚಾರವನ್ನು ಅವರ ಮುಂದೆ ಹೇಳಿದೆ. ಅದಕ್ಕೆ ಅವರು ಆಗಲಿ ಎಂದು ಹೇಳಿ, ಆ ಭಾಗದ ಲಾವಣಿಕಾರರಿಂದ ಹಾಡುಗಳನ್ನು ಶ್ರದ್ಧೆಯಿಂದ ಸಂಗ್ರಹಿಸಿ ಒದಗಿಸಿದ್ದಾರೆ. ಈ ಕೃತಿಯು ಹೊರಬರಲು ಸುಮಾರು ಹದಿಮೂರು ವರ್ಷಗಳೇ ತಗುಲಿದೆ. ಹದಿಮೂರು

ವರ್ಷಗಳ ಬಳಿಕ ಈ ಕೃತಿಯು ಪ್ರಕಟಗೊಳ್ಳುತ್ತಿರುವುದು ಸಂತೋಷದ ವಿಷಯ.

ಸಂಖ ಗ್ರಾಮದಲ್ಲಿ ಈಗಲೂ ಅತೀ ಹೆಚ್ಚು ಜನ ಕನ್ನಡ ಭಾಷೆಯನ್ನೇ ಮಾತನಾಡುತ್ತಾರೆ. ಕನ್ನಡ, ಮರಾಠಿ ದ್ವಿಭಾಷಾ ಸಂಸ್ಕೃತಿಯ ಮಧ್ಯದಲ್ಲಿ ಬಾಳಿ ಬದುಕಿ ಹೋದ 'ಬಾಪು' ಅನಕ್ಷರಸ್ಥನಾಗಿದ್ದು, ಬಹುಭಾಷೆಗಳನ್ನು ಬಲ್ಲವನಾಗಿದ್ದನು. ಕವಿಯಾಗಿ ಹಣ-ಕೀರ್ತಿ ಗಳಿಸಬೇಕೆಂಬ ಆಶೆ ಇಲ್ಲದೆ ಆಶು ಕವಿಯಾಗಿ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದನು. ಮೌಖಿಕ ಪರಂಪರೆಯಲ್ಲಿದ್ದ ಇವನ ಸಾಹಿತ್ಯವನ್ನು ಸುತ್ತಲಿನ ಜನ ಕೇಳಿ ಬರೆದುಕೊಳ್ಳುತ್ತಿದ್ದರು. ಅವುಗಳಲ್ಲಿ ಕೆಲವು ಹಾಡುಗಳು ಲಭ್ಯವಾಗಿವೆ. 'ಬಾಪು' ಮರಾಠಾನಾಗಿದ್ದು, 'ತಾತ್ಯಾ' ಹಾಲುಮತ ಸಮಾಜಕ್ಕೆ ಸೇರಿದವನು. ಬಾಪುವಿನ ವಂಶಜರು ಈಗಲೂ ಸಂಖದಲ್ಲಿದ್ದಾರೆ. ಅವನ ಹೆಸರನ್ನೇ ಇಟ್ಟಿರುವ ಶ್ರೀ ಬಾಪು ನಾಮದೇವ ಮಾನೆ ಇವನು ಬಾಪುನ ಮೊಮ್ಮಗ. 'ತಾತ್ಯಾ'ನನ್ನು ನೋಡಿದ ಅವರ ತಮ್ಮನ ಮಗ ಸುಮಾರು ೮೦ ವರ್ಷ ವಯಸ್ಸಿನ ಶ್ರೀ ಶಿವನಿಂಗಪ್ಪ ಪೂಜಾರಿ ಎಂಬುವರು ಸಂಖದಲ್ಲಿದ್ದಾರೆ. ಕನ್ನಡ, ಮರಾಠಿ, ಹಿಂದಿ, ಮತ್ತು ಉರ್ದು, ಭಾಷೆಗಳಲ್ಲಿ 'ಬಾಪು' ಹಾಡುಗಳನ್ನು ರಚಿಸಿದ್ದಾನೆಂದು ಹೇಳುತ್ತಾರೆ. ಆದರೆ ಅವೆಲ್ಲ ಹಾಡುಗಳು ಈಗ ನಮಗೆ ಲಭ್ಯವಾಗುವುದಿಲ್ಲ. ಈತ ಕವಿ ಆದಂತೆ ದೊಡ್ಡಾಟಗಳ (**'ರಾಧಾನಾಟ'** ಮತ್ತು **'ವಿಕ್ರಮ ರಾಜಾನಾಟ'**) ರಚನಾಕಾರನು ಆಗಿದ್ದನು ಎಂದು ವಕ್ತೃಗಳು ಹೇಳುತ್ತಾರೆ. ಈ ಕವಿಗೆ ವ್ಯಾಕರಣದ ಕಲ್ಪನೆ ಇತ್ತು. ಅದರಲ್ಲಿ ಪ್ರಾಸದ ಬಗ್ಗೆ ಬಹು ವ್ಯಾಮೋಹ. ಅಂತೆಯೇ ತನ್ನ ಸಾಹಿತ್ಯದಲ್ಲಿ ಪ್ರಾಸಕ್ಕೆ ಮಹತ್ವವನ್ನು ನೀಡಿದ್ದಾನೆ. ಉದಾ: ಈ ಕೃತಿಯಲ್ಲಿ ಬರುವ **'ಛಣಕ ಫಣಕ ಏನ ಕನಕ ಕಾಲುಂಗರ'** ಎನ್ನುವ ಲಾವಣಿಯಲ್ಲಿ ಅನುಷಂಗಿಕವಾಗಿ ಹೀಗೆ ವರ್ಣಿಸಿದ್ದಾನೆ.

"ಛಣಕ ಫಣಕ ಏನ ಕನಕ ಕಾಲುಂಗರ
ಠಣಕ ಠುಣಕನೆ ಕುಣಕೋತ ಹೋಗುದು ಕಂಡು
ಛಣಕ ಫಣಕ ತುಡಿ ಧಾವಿಸಿ ಬಂದೀನಿ
ನೇಮಿಸಿ ನಿನಗಂತಾ"

ಬಾಲ ಹನುಮನೋ ಎನ್ನುವ ಮಾರುತಿ ಸ್ತೋತ್ರದಲ್ಲಿಯೂ ಕವಿ ಪ್ರಾಸಬದ್ಧವಾಗಿ ಹಾಡಿರುವುದನ್ನು ಇಲ್ಲಿ ಗಮನಿಸಬಹುದು.

"ಬಾಲ ಹನುಮ ಏನ ದಿಟ್ಟ
ರಾವಣೇಶ್ವರನ ಲಂಕಾ ಸುಟ್ಟ
ಸೀತಾನ ಸೋದ ತಗದ ಬಿಟ್ಟ
ತೆಲಿಮ್ಯಾಲ ಮಳಾ ಜುಟ್ಟ
ಲಂಕಾಕ ಜಿಗದ ಬಿಟ್ಟ"

'ಬಾಪು' ಅವರು ರಚಿಸಿದ ಲಾವಣಿ ಹಾಡುಗಳು ಪ್ರಾಸಬದ್ಧವಾಗಿವೆ ಎಂಬುದನ್ನು

ಗಮನಿಸಬಹುದು. ಬಾಪು ಅವರ ಜೀವನದ ಹಲವಾರು ವಿಷಯಗಳನ್ನು ತಿಳಿದಾಗ ಅವರು ಜೀವನದ ಮಧ್ಯಭಾಗವೆಂದರೆ ಹೆಚ್ಚುಕಡಿಮೆ ಯೌವ್ವನದ ಕೊನೆ ಹಂತದಲ್ಲಿ ಬದುಕಿನ ಬಗ್ಗೆ ವೈರಾಗ್ಯ ಹೊಂದಿ ನಾನು, ನನ್ನದು ಎಂಬ ಸ್ವಾರ್ಥ ಭಾವನೆಯನ್ನು ತೊರೆದು ತೆರೆಮರೆಯಲ್ಲಿ ಜೀವನ ಸಾಗಿಸಿ ಹೊರಟು ಹೋದನು ಎನ್ನುತ್ತಾರೆ ಆ ಭಾಗದ ವಕ್ತೃಗಳು.

'ಜೀವನ ಸಂಗೀತ' ಲಾವಣಿ ಸಂಗ್ರಹದಲ್ಲಿ ಬರುವ **'ಅಷ್ಟೂರ ಮಾತಿದು'** ಮತ್ತು **'ತುಂಟತುಂಟರಿಗಿ ಗಂಟುಬಿದ್ದರ'** ಇವೆರಡು ಲಾವಣಿಗಳು 'ಬಾಪು' ಇವರು ರಚಿಸಿದ್ದು. ದಿ: ಸಿಂಪಿ ಲಿಂಗಣ್ಣನವರಿಗೆ ಸಂಗ್ರಹಿಸಿ ಕಳಿಸಿದ್ದೆವು ಎಂದು 'ಬಾಪು' ಅವರ ಮೊಮ್ಮಗ ಶ್ರೀ 'ಬಾಪು' ನಾಮದೇವ ಮಾನೆ ನನ್ನ ಮುಂದೆ ಹೇಳಿದರು. 'ಬಾಪು' ಅವರು ಕೆಲವು ಸಲ **'ಧರ್ಮ ದಯಾಳ್'** ಮತ್ತೆ ಕೆಲವು ಸಲ **'ಸೇವಕ ಬಸಯ್ಯ'** ಎಂಬ ಕಾವ್ಯನಾಮದಿಂದ ಪದ್ಯ ಬರೆದಿದ್ದಾನೆ. ಅತ್ಯಂತ ಕಡುಬಡತನದ ಪರಿಸ್ಥಿತಿಯಲ್ಲಿಯೂ ಒಪ್ಪತ್ತಿನ ಊಟಕ್ಕೆ ಪರದಾಡುತ್ತಿದ್ದ ಮೃದು ಸ್ವಭಾವದ ಈ ಕವಿ ಸ್ನೇಹಜೀವಿಯಾಗಿದ್ದ. ತಾತ್ಯಾ, ಬಸಯ್ಯ ಸ್ವಾಮಿ, ಶಿವಣ್ಣ, ಬಿರಾದಾರ ಮುಂತಾದವರು ಆತನ ಸ್ನೇಹಿತರಾಗಿದ್ದರು. 'ಬಾಪು' ಊರೂರು ಅಲೆದಾಡುತ್ತ ಬಯಲಾಟಗಳನ್ನು ಆಡುವವನಾಗಿದ್ದನು. ಮೂರು ತಿಂಗಳವರೆಗೆ ಊರ ಬಿಟ್ಟು ಹೊರಗೆ ಇರುತ್ತಿದ್ದನು. ಒಂದೊಂದು ಊರುಗಳಲ್ಲಿ ತಿಂಗಳುಗಟ್ಟಲೇ ಆಟ ಆಡಿದ ಉದಾಹರಣೆಗಳಿವೆ. ಒಂದೇ ಆಟ ತಿಂಗಳಾಡಿದರೂ ಪ್ರತಿದಿನಕ್ಕೆ ಹಾಡು, ಮಾತು, ಸಾಹಿತ್ಯ ಬೇರೆ ಬೇರೆಯೇ ಇರುತ್ತಿತ್ತು.

ಬಸಯ್ಯಸ್ವಾಮಿಯೂ ಬಾಪುನ ಜೊತೆ ಬಯಲಾಟಗಳನ್ನು ಆಡಿದ್ದಾನೆ. ಲಾವಣಿಗಳನ್ನು ರಚಿಸಿದ್ದಾನೆ. ಬಾಪು ಹುಚ್ಚನಂತಿದ್ದ 'ಧರ್ಮ ದಯಾಳ'ನನ್ನು ಗುರುವಾಗಿ ಸ್ವೀಕರಿಸಿದಾಗ ಬಸಯ್ಯಸ್ವಾಮಿ ಆ ಹುಚ್ಚನನ್ನೇಕೆ ಗುರುವನ್ನಾಗಿ ಮಾಡಿಕೊಂಡಿ ಎಂದು ಅಪಹಾಸ್ಯ ಮಾಡುತ್ತಿದ್ದನಂತೆ.

ಬಾಪುನನ್ನು ನೋಡಿದವರು ಈಗ ಯಾರು ಇಲ್ಲ. ಆತನ ಹಾಡುಗಳು ಈಗಲೂ ಆ ಭಾಗದ ಜನರ ನಾಲಿಗೆಯ ಮೇಲೆ ನಲಿಯುತ್ತಿವೆ. ಆತನ ಸಾಹಿತ್ಯ ಹಲವರ ಬಾಯಲ್ಲಿ, ಕೆಲವರ ಕೈಯಲ್ಲಿ (ಕೈಬರಹದ ರೂಪದಲ್ಲಿ) ಹರಿದು ಹಂಚಿಹೋಗಿ ಅಳಿದು ಉಳಿದಿದೆ.

ಈ ಲಾವಣಿಗಳನ್ನು ಸಂಗ್ರಹ ಮಾಡುವ ಸಂದರ್ಭದಲ್ಲಿ ಸಹಾಯಮಾಡಿದ ದಿ: ಕಲ್ಲಯ್ಯಶಾಸ್ತ್ರಿ ಸಂಖ ಮತ್ತು ಪ್ರೊ. ಕೆ.ಕೆ.ಪತ್ತಾರ ಸಂಖ ಇವರಿಗೆ ತುಂಬು ಹೃದಯದ ಕೃತಜ್ಞತೆಗಳು. 'ಬಾಪು'ರವರು ಹಾಡುತ್ತಿದ್ದ ಲಾವಣಿಗಳು ಪುಸ್ತಕ ರೂಪದಲ್ಲಿ ಬರಲಿ ಎಂದು ಶುಭಹಾರೈಸಿದ ಪ್ರಾಚಾರ್ಯ ಶ್ರೀ ಆರ್.ಕೆ.ಪಾಟೀಲ ಸಂಖ ಇವರಿಗೆ ಹೃತ್ಪೂರ್ವಕ ವಂದನೆಗಳು. ಬಾಪು ಅವರು ರಚಿಸಿ ಹಾಡುತ್ತಿದ್ದ ಲಾವಣಿಗಳನ್ನು ಹಾಡಿ ಹೇಳಿದ ಕವಿ ಬಾಪುವಿನ ಮೊಮ್ಮಗ ಶ್ರೀ ಬಾಪು ನಾಮದೇವ ಮಾನೆ, ತಾತ್ಯಾನ ಸಹೋದರ ವಿಠ್ಠಲ್ ಪೂಜಾರಿಯವರ ಮಗ ಶ್ರೀ ಶಿವನಿಂಗಪ್ಪ ಅವರಿಗೂ ಹಾಗೂ ಸಂಖದ ಇನ್ನುಳಿದ

ವಕ್ತೃಗಳಿಗೆ ನನ್ನ ಕೃತಜ್ಞತೆಗಳು. ಈ ಕೃತಿಗೆ ಮುನ್ನುಡಿ ಬರೆದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ಆತ್ಮೀಯ ವಂದನೆಗಳು. ಮಾನ್ಯ ಕುಲಸಚಿವರಾದ ಡಿ.ಬಿ. ನಾಯಕ ಅವರಿಗೆ, ಹಿರಿಯ ವಿದ್ವಾಂಸರಾದ ಡಾ.ಪಿ.ಕೆ.ಖಂಡೋಬಾ, ಸ್ನೇಹಿತರಾದ ಡಾ.ರಾಜೇಂದ್ರ ನಾಯಕ, ಡಾ. ಚಂದ್ರಶೇಖರ ರೊಟ್ಟಿಗವಾಡ, ಡಾ.ವಿ.ಎಲ್.ಪಾಟೀಲ, ಡಾ.ಜಿ.ಬಿ.ನಂದನ, ಡಾ.ಮುರಹರಿ ನಾಯಕ ಇವರಿಗೆ ವಿಶೇಷ ಕೃತಜ್ಞತೆಗಳು.

ಈ ಕೃತಿ ಪ್ರಕಟಣೆಯ ಸಂದರ್ಭದಲ್ಲಿ ಮರಾಠಿಯ ತಮಾಶಾ, ಪೊವಾಡಾ ಮತ್ತು ಲಾವಣಿ ವಿಷಯಗಳ ಬಗ್ಗೆ ವಿಶೇಷ ಮಾಹಿತಿ ಒದಗಿಸಿದ ನನ್ನ ಶ್ರೀಮತಿ ನಿಶಾ ಇವರಿಗೆ ನನ್ನ ಪ್ರೀತಿಯ ನೆನಹುಗಳು. ಈ ಕೃತಿಯು ಬೇಗ ಪ್ರಕಟಗೊಳ್ಳಲಿ ಎಂದು ಬಯಸುತ್ತಿದ್ದ ನನ್ನ ಚಿ॥ ಪ್ರೀತಮ್‌ನಿಗೆ ಮತ್ತು ಈ ಕೃತಿಯಲ್ಲಿಯ ಲೇಖನಗಳನ್ನು ಡಿ.ಟಿ.ಪಿ. ಮಾಡಿದ ಪ್ರಸಾರಾಂಗದ ಸಿಬ್ಬಂದಿ ಶ್ರೀ ಎಫ್.ಬಿ.ತಳವಾರ ಹಾಗೂ ಶ್ರೀ ಸಂಜೀವ ಕಣವಿಮಠ ಮತ್ತು ಹಸ್ತಪ್ರತಿಯ ಕರಡು ತಿದ್ದಿದ ಡಾ.ಸಿದ್ದಪ್ಪ ಎನ್. ಮತ್ತು ಶ್ರೀಮತಿ ಶಿವಕಲಾ ಬಳಗಾನೂರಮಠ ಇವರಿಗೆ ನನ್ನ ಸದಾಶಯಗಳು. ಈ ಕೃತಿಯನ್ನು ಅಚ್ಚುಕಟ್ಟಾಗಿ ಪ್ರಕಟಿಸಿದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮಾನ್ಯ ನಿರ್ದೇಶಕರಾದ ಪ್ರೊ. ಸ.ಚಿ. ರಮೇಶ ಅವರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು.

ಡಾ. ಹರಿಲಾಲ ಪವಾರ

ಪರಿವಿಡಿ

		ಪುಟ ಸಂಖ್ಯೆ
ದೇಶ ಸುತ್ತು ಕೋಶ ಓದು		iii
ನಿರ್ದೇಶಕರ ಮಾತು		vii
ಅರಿಕೆ		ix
ಪ್ರಸ್ತಾವನೆ		೧
೧.	ಗಣಪತಿ ಸ್ತೋತ್ರ	೩೨
೨.	ಸಾಂಭ ಎರಡಕ್ಷರ	೩೩
೩.	ಗುರು ಶಿಷ್ಯಾರ ಮಾತ	೩೬
೪.	ಡೊಂಬರಾಟಿನಂಗ ಪ್ರಪಂಚದಾಟ	೩೯
೫.	ಕನಸೊಂದ ಬಿತ್ತ ಅದರ ಹಾರಗೆಡಲಿ	೪೨
೬.	ಈಗಿನ ಮನದಾನ ಮಾತ	೪೬
೭	ಛಣಕ ಫಣಕ ಏನ ಕನಕ ಕಾಲುಂಗರ	೫೨
೮.	ನೆಡತನ ಕೂಡಿದಲ್ಲಿ	೫೮
೯.	ಮಾಡಂಗ ಮಾಡಿದರ	೬೦
೧೦.	ಕರಿ ಬರದ ಲಾವಣಿ	೬೪
೧೧.	ಕುಟಾಳ ಮಂದಿ	೬೮
೧೨.	ಗುರು ಸ್ತವನ	೭೨
ಪಾರಿಭಾಷಿಕ ಪದಕೋಶ		೭೩

ಅನುಬಂಧ

೧.	ಬಾಲ ಹನುಮನೋ	೮೨
೨.	ಶ್ರೀಶೈಲ ಮಲ್ಲಿಕಾರ್ಜುನ	೮೩
೩.	ಪಂಢರಪುರ ಯಾತ್ರಾ	೮೫
೪.	ಬಿಳ್ಳೂರ ಶ್ರೀಗುರು ಬಸವ	೮೭
೫.	ಮೈ ಭೀ ಗಯಿತೇ ಬೇಪಾರಕು	೮೮
೬.	ಪರಾಮರ್ಶನ ಗ್ರಂಥಗಳು	೯೦

ನಮ್ಮ ಪ್ರಕಟಣೆಗಳು

ಪ್ರಸ್ತಾವನೆ

ಸಂಸ್ಕೃತಿ ಎನ್ನುವುದು ಬಹುಮುಖಿಯಾಗಿದೆ. ಏಕೆಂದರೆ ಭಾರತದಂಥ ಮಹಾನ್ ರಾಷ್ಟ್ರದಲ್ಲಿ ಇದು ಅನಿವಾರ್ಯವೂ ಕೂಡ. ಅಲೆಮಾರಿ, ಅರೆಅಲೆಮಾರಿ, ಬುಡಕಟ್ಟು, ಕುಲಗುಂಪು ಮುಂತಾದ ಕೃಷಿಕ ಸಮುದಾಯಗಳಿರುವಂಥ ಈ ರಾಷ್ಟ್ರದಲ್ಲಿ ಸಂಸ್ಕೃತಿ ವೈವಿಧ್ಯಮಯವಾಗಿರುವುದು ಸಹಜ. ನೂರಾರು ಜಾತಿ–ಪಂಗಡಗಳಿರುವ ಈ ರಾಷ್ಟ್ರದಲ್ಲಿ ವಿವಿಧ ಬಗೆಯ ಆಚರಣೆ ನಂಬಿಕೆಗಳಿವೆ. ಇಲ್ಲದೆ ಹೋದರೆ ದುಡಿಯುವ ವರ್ಗದವರೆಲ್ಲರೂ ಮೇಲ್ವರ್ಗದವರ ಸಂಸ್ಕೃತಿಗಳನ್ನು ಅನುಕರಣೆ, ಮಾಡುತ್ತ ಹೋಗಿ ಏಕಮುಖ ಸಂಸ್ಕೃತಿಯ ರೂಪಣಕ್ಕೆ ದಾರಿಮಾಡಿಕೊಡುವ ಅಪಾಯವನ್ನು ಎದುರಿಸಬೇಕಾಗುತ್ತದೆ. ಇದು ಸಾಧ್ಯವಾಗದ ಮಾತು. **ವೆರಿಯರ್ ಎಲ್ವಿನ್** ಅವರು 'ಪರಿವರ್ತನೆ ಯಾವತ್ತಲೂ ಸಮಕಾಲೀನ ಬದುಕಿಗೆ ಸಂಬಂಧಪಟ್ಟಂತೆ ಇರಬೇಕು. ಅದನ್ನು ಬಿಟ್ಟು ನಮ್ಮದೆಲ್ಲವನ್ನು ಕಳೆದುಕೊಂಡು ಅನುಕರಣೆ ಮಾಡುವುದು ಒಪ್ಪದ ಮಾತು' ಎಂದಿರುವರು. ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ನೃತ್ಯ, ನಮ್ಮ ನಂಬಿಕೆ, ಆಚರಣೆ ಎಲ್ಲದರಲ್ಲೂ ಪ್ರತಿಯೊಂದು ಜನಪದವಾಗಿರುವಾಗ ಆ ಜನತೆಯ ಮೇಲೆ ಮೇಲ್ವರ್ಗದ ಸಂಸ್ಕೃತಿ ತಂದು ಹೇರುವುದು ಯಾವ ನ್ಯಾಯ. ಇದನ್ನು ನಾವು ಬಹಳ ಎಚ್ಚರದಿಂದ ಗಮನಿಸಬೇಕಾಗಿದೆ. ನಮ್ಮ ಪೂರ್ವಜರು ಜನಪದ ಸಾಹಿತ್ಯದ ಪರಿಧಿಯಲ್ಲಿ ಬರುವ ಆಚರಣೆ, ಸಂಪ್ರದಾಯ, ನಂಬಿಕೆ, ನಡೆ–ನುಡಿ, ಮಾಟ–ಮಂತ್ರ ಮೊದಲಾದ ವಿಷಯಗಳನ್ನು ತಮ್ಮ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದರು. ಅಂಥವುಗಳು ಇಂದು ನಶಿಸಿ ಹೋಗದಂತೆ ಲಿಖಿತ ರೂಪದಲ್ಲಿ ಉಳಿಸಿಕೊಂಡು ಹೋಗಬೇಕಾಗಿದೆ.

"ವಾಸ್ತವವಾಗಿ, ಇತಿಹಾಸ ಗ್ರಂಥದಲ್ಲಿಯೂ ಒಂದು ದೇಶದ ಸಮಸ್ತ ಜನಸಮುದಾಯದ ಸಮಗ್ರ ಜೀವನಕ್ರಮವನ್ನು ಯಥಾವತ್ತಾಗಿ ವರ್ಣಿಸಿರುವುದಿಲ್ಲ. ಐತಿಹಾಸಿಕ ಮಹತ್ವವುಳ್ಳ ಕೆಲವೇ ಮುಖ್ಯ ಘಟನೆಗಳ ಹಿನ್ನೆಲೆಯನ್ನು ವಿವರಿಸಿ ಆಯಾ ಯುಗದ ಧೋರಣೆಯನ್ನು ಸೂಚಿಸುವುದು ಇತಿಹಾಸತಜ್ಞರ ಸಾಮಾನ್ಯ ನಿಯಮ. ರಾಜ ಮಹಾರಾಜರ ಏಳುಬೀಳುಗಳ ಕಡೆಗೆ ಅಲ್ಲಿ ಹೆಚ್ಚು ಗಮನ; ಜನಸಾಮಾನ್ಯರ ಬದುಕು ಗೌಣ. ಈ ಕೊರತೆಯನ್ನು ಮನಗಂಡೆ ಸಮಾಜಶಾಸ್ತ್ರ, ಮಾನವಶಾಸ್ತ್ರದಂಥ ಹೊಸ ಮಾನವಿಕ ಅಧ್ಯಯನ ಶಾಖೆಗಳು ಈಚೆಗೆ ಕವಲೊಡೆದದ್ದು. ಆಧುನಿಕ ವಿಜ್ಞಾನದ ಹೊಸ ವಾತಾವರಣದಲ್ಲಿ ಬೆಳೆದ ಪಾಶ್ಚಾತ್ಯ ವಿದ್ವಾಂಸರು ಜಗತ್ತಿನ ಬಹುಸಂಖ್ಯಾಕರ ಮಾತು. ಕಲ್ಪನಾ ಜೀವಿಗಳು ಸಂಪ್ರದಾಯನಿಷ್ಠರು ತುಂಬ ರಂಜಕ ಸಂಸ್ಕೃತಿಯುಳ್ಳವರೂ ಆದ ಜಾನಪದರ ಸಂಸ್ಕೃತಿಯನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡುವ ಅವಶ್ಯಕತೆಯನ್ನು ಮನಗಂಡು, ಕಾರ್ಯಕ್ಕಿಳಿದರು. ಜಾನಪದರ ಪರಂಪರಾಗತ ಕಥೆ, ಗೀತೆ, ಗಾದೆ,

ಒಗಟು, ಒಡಪು, ಮುಂತಾದ ಅನೇಕ ಜಾನಪದೀಯ ಅಂಶಗಳನ್ನು ಆಸಕ್ತಿಯಿಂದ ಎತ್ತಿಕೊಂಡರು."[೧] ಪಾಶ್ಚಿಮಾತ್ಯರು ಹೇಳುವಂತೆ 'ಭಾರತದೇಶವು ಜಾನಪದದ ತೌರು. ತೆಗೆದಷ್ಟು ತುಂಬಿ ಬೆಳೆಯುವ ಸಮೃದ್ಧ ಸಾಗರ' ಎಂದು ಬಣ್ಣಿಸಿರುವುದು ಕೇವಲ ಉತ್ಪ್ರೇಕ್ಷೆಯಲ್ಲ. ಆದ್ದರಿಂದಲೇ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗದಲ್ಲಿ 'ಲಾವಣಿ' ಸಾಹಿತ್ಯಕ್ಕೆ ಸಂಬಂಧಪಟ್ಟ ಅಪಾರ ವಿಷಯ ಇರುವುದನ್ನು ಗಮನಿಸಿ, ವಕ್ತೃಗಳ ಸಹಾಯದಿಂದ 'ಲಾವಣಿ' ಸಂಗ್ರಹ ಕಾರ್ಯ ಮಾಡಿ ಕೃತಿ ರಚಿಸಿರುವೆ.

ಪ್ರಸ್ತುತ ಕೃತಿಯಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಕಲ್ಗಿ-ತುರಾಯಿ ಲಾವಣಿ ಸಂಗ್ರಹಗಳನ್ನು ಕುರಿತು ಹೇಳಲಾಗಿದೆ. ಹರದೇಶಿ-ನಾಗೇಶಿ ಹಾಡುಗಳು ಲಾವಣಿಯ ಒಂದು ಪ್ರಕಾರ. ಲಾವಣಿಕಾರರು ಇದಿರು-ಬದಿರಾಗಿ ಒಬ್ಬರಿಗೊಬ್ಬರು ಹಾಡುವುದುಂಟು. ಹರಿದಾಸರದು ಗಂಡಿನ ಪಕ್ಷವಾದರೆ ಹೆಣ್ಣಿನ ಪಕ್ಷ ನಾಗೇಶಿಯವರದ್ದು. ಹರದೇಶಿ-ನಾಗೇಶಿ ಪಕ್ಷದವರು ತಮ್ಮ ತಮ್ಮ ಪಕ್ಷವನ್ನು ಎತ್ತಿಹಿಡಿದು, ಗಂಡು ಹೆಣ್ಣುಗಳಲ್ಲಿ ಸಮಾನತೆ ಹಾಗೂ ಸಾಮರಸ್ಯವನ್ನು ಕಾಯ್ದುಕೊಂಡು ಹೋಗುವುದರ ಮಹತ್ವವನ್ನು ಕುರಿತು ಹಾಡುತ್ತಾರೆ. "ಲಾವಣಿಯಲ್ಲಿ ಶೃಂಗಾರ ಸ್ಥಾಯಿಯಾಗಿದ್ದರೂ ಭಕ್ತಿ ವೇದಾಂತಗಳು ಪೂರಕವಾಗಿ ಬೆಳೆದು ಬಂದವು. ಹಾಡುಗಾರಿಕೆಯಲ್ಲಿ: ಶಿವ-ಶಕ್ತಿ, ಗಂಡು-ಹೆಣ್ಣು, ಪ್ರಕೃತಿ-ಪುರುಷ ಇವರ ಮಧ್ಯೆ ಕಲ್ಪಿತ ಶ್ರೇಷ್ಠತಾ ಪ್ರತಿಪಾದನೆ ಬೆಳೆದು ಬಂದಿತು. ನೀರಸವೆನಿಸಬಹುದಾಗಿದ್ದ ಈ ತಾತ್ವಿಕ ಚರ್ಚೆ ಲವಲವಿಕೆಯ ಪ್ರಸಂಗವಾಗಲೂ ಲಾವಣಿಕಾರರ ಜಾಣ್ಮೆಯೇ ಕಾರಣ. ತರ್ಕ ಕುತೂಹಲಗಳ ಮೂಲಕ ವಾದಿ-ಪ್ರತಿವಾದಿ ರೂಪದಲ್ಲಿ ನಡೆಯುವ ಹಾಡಿನ ಸ್ಪರ್ಧೆ ರಸವತ್ತಾಗಿರುತ್ತದೆ. ಒಂದು ಪಕ್ಷದವರು ಒಂದು ಒಗಟಿನ ರೂಪದ ಹಾಡು ಹಾಡಿದರೆ ಎದುರು ಪಕ್ಷದವರು ಹಾಡಿನಲ್ಲಿಯೆ ಆ ಒಗಟಿಗೆ ಸವಾಲ್-ಜವಾಬ್ ಕೊಡುತ್ತಾರೆ. ಈ ಗೋಷ್ಠಿಯ ಮೇಳಗಳಿಗೆ ಕಲ್ಗಿ-ತುರಾ ಅಥವಾ ಹರದೇಶಿ-ನಾಗೇಶಿ ಎಂದು ಹೆಸರು"[೨]

ಲಾವಣಿ ಅಥವಾ ಡಪ್ಪಿನಪದ ಮೇಳ ಲಾವಣಿ ಈ ಹಾಡು ಮೇಳಗಳ ರೂಪಾಂತರದಿಂದಾಗಿ ಗೀ ಗೀ ಅಥವಾ ಜೀ ಜೀ ಹಾಡುಗಳು ಹುಟ್ಟಿಕೊಂಡಿವೆ. ಈ ಹಾಡುಗಳಲ್ಲಿ ಸ್ತ್ರೀ-ಪುರುಷ, ಶಿವ-ಶಕ್ತಿ ಸಿದ್ಧಾಂತ ಪೌರಾಣಿಕ ಸನ್ನಿವೇಶಗಳನ್ನು ಲೌಕಿಕಕ್ಕೆ ಅಳವಡಿಸಿಕೊಂಡು ಲಾವಣಿಕಾರರು ಹಾಡತೊಡಗಿದರು. ಇಲ್ಲಿ ಪ್ರಮುಖವಾಗಿ ವಾದ-ವಿವಾದ ವೈಖರಿ, ಹಾಡುಗಾರನ ದೃಷ್ಟಾಂತ ನಿರೂಪಣೆ, ಅನುಭಾವ, ಆಧ್ಯಾತ್ಮಿಕ ಜಿಜ್ಞಾಸೆ ಇವೆಲ್ಲ ಗ್ರಾಮೀಣ ಜನರಿಗೆ ಆಕರ್ಷಿಕವೆನಿಸಿ ಈ ಹಾಡುಗಾರಿಕೆಗಳಲ್ಲಿ ಕೇ ಕೇ, ಸಿಳ್ಳೆ, ಹಾಗೂ ಚಪ್ಪಾಳೆ ಹೊಡೆಯುವುದು ಮುಂತಾದ ಮನರಂಜನೆಯ ಶಬ್ದಗಳು ಆಕರ್ಷಿಕವೆನಿಸಿದವು. ಇಲ್ಲಿ ನೀತಿಗಿಂತ ಶೃಂಗಾರಕ್ಕೆ ಹೆಚ್ಚು ಅವಕಾಶ ದೊರೆಯಿತು.

---

೧. ಡಾ. ನಂ. ತಪಸ್ವೀಕುಮಾರ : *'ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ,'* (ಪಿಎಚ್.ಡಿ.ಮಹಾಪ್ರಬಂಧ) ೧೯೮೧, ಪುಟ-೨೬, ೨೭.

೨. ಡಾ. ಬಸವರಾಜ ಮಲಶೆಟ್ಟಿ : *'ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ,'* ೧೯೯೮, ಪುಟ ೨-೩.

"ಲಯಗಳ ಏಕಮುಖತೆ, ನಾಟಕೀಯ ಸನ್ನಿವೇಶಗಳು, ಉದ್ದಕ್ಕೂ ಪಲ್ಲವಿಯ ಪುನರಾವರ್ತನೆ–ಇವು ಸಾಮಾನ್ಯವಾಗಿ ಲಾವಣಿಯ ಲಕ್ಷಣ. ಎಲ್ಲ ಕಥೆಗಳಂತೆ ಲಾವಣಿಗಳಲ್ಲೂ ಕ್ರಿಯೆ, ಪಾತ್ರ, ವಸ್ತು ಮತ್ತು ಸಂವಿಧಾನದಲ್ಲಿ ಒಂದು ರೀತಿಯ ಸುಸಂಬದ್ಧತೆ ಇರುತ್ತದೆ. ಪಾತ್ರಗಳ ಬೆಳವಣಿಗೆಗಿಂತ ವಸ್ತುಪ್ರಾಮುಖ್ಯಕ್ಕಿಂತ ಇಲ್ಲಿ ಕ್ರಿಯೆ ಪ್ರಧಾನ. ಎಲ್ಲ ಲಾವಣಿಗಳೂ ಹಾಡುವ. ಅನೇಕ ಸಂದರ್ಭಗಳಲ್ಲಿ ವಾದ್ಯದ ಹಿನ್ನೆಲೆಯೂ ಇರುತ್ತದೆ. ಸಾಂಪ್ರದಾಯಿಕ ಮಟ್ಟುಗಳಲ್ಲಿ ಇವುಗಳ ರಚನೆಯಾಗಿರುತ್ತದೆ. ಆ ಮಟ್ಟುಗಳೂ ಲಾವಣಿಯಷ್ಟೇ ಹಳೆಯವಾಗಿರುತ್ತವೆ._ _

_ _ _ ಲಾವಣಿ ಜನಪದಕ್ಕೆ ಸೇರಿದ್ದರೂ ಪುರಾತನ ಅಲ್ಲ. ಆದಿವಾಸಿಗಳಿಗೆ ಸಂಬಂಧಪಡುವುದಿಲ್ಲ. ಪ್ರಾಚೀನ ಕಾಲದಿಂದ ಬಂದದ್ದಲ್ಲ; ಸುಸಂಸ್ಕೃತ ಕವಿಗಳಿಂದಲೂ ರಚಿತವಾದದ್ದಲ್ಲ. ಜಾನಪದದಲ್ಲಿ ಸಾಂಪ್ರದಾಯಿಕ ಕಥೆಗಳ ದೊಡ್ಡ ಭಂಡಾರವೇ ಇರುತ್ತದೆ. ಸ್ಥಳೀಯ ಐತಿಹ್ಯ, ಚರಿತ್ರೆ ಹಾಗೂ ಇತರ ಜನಪದ ಸಾಮಗ್ರಿಯನ್ನು ಬಳಸಿಕೊಂಡು ಲಾವಣಿ ಸೃಷ್ಟಿಯಾಗುತ್ತದೆ. ಕಾಲದ ಬಗೆಬಗೆಯ ಯಾತ್ರೆಗಳಲ್ಲಿ ಇದು ಜನತೆಯ ಬಾಯಲ್ಲಿ ಬಗೆಬಗೆಯ ರೂಪಗಳನ್ನು ಪಡೆಯುತ್ತ ಸಾಗುತ್ತದೆ. ವಸ್ತು ಘಟನೆ ಶೈಲಿಗಳಲ್ಲಿ ಅಷ್ಟೇನೂ ಅನುಚಿತ ಎನ್ನಲಾಗದಂಥ ಬದಲಾವಣೆಗಳನ್ನು ಸಾಧಿಸಿಕೊಂಡು ಸಾಗುತ್ತದೆ"[೩]

ಲಾವಣಿ ಹಾಡುಗಳಲ್ಲಿ ಪಲ್ಲವಿಯ ಪುನರಾವರ್ತನೆ, ಕ್ರಿಯೆ, ಪಾತ್ರ, ವಸ್ತು, ತಾತ್ವಿಕ ಚರ್ಚೆ, ಲವಲವಿಕೆಯ ಸನ್ನಿವೇಶ, ಸುಸಂಬದ್ಧತೆ ಇವೆಲ್ಲವುಗಳಿಗಿಂತ ಹೆಚ್ಚಾಗಿ ಶ್ರೋತೃಗಳಿಗೆ ಹಿಡಿದಿಡುವ ಹಾಗೆ ಲಾವಣಿಕಾರ ಸನ್ನಿವೇಶಕ್ಕೆ ಅನುಗುಣವಾಗಿ ಹಾಡುವುದು ಬಹಳ ಮಹತ್ವದ್ದು. ಕಾಲಬದಲಾದಂತೆ ನಾಗರಿಕ ಮತ್ತು ಗ್ರಾಮಾಂತರ ಎಂದು ಅವು ಹಿಂದೆ ಸರಿದು ಗ್ರಾಮೀಣ ಪ್ರದೇಶಗಳಲ್ಲಿ ಗಟ್ಟಿಯಾಗಿ ನೆಲೆಯೂರಿತು ಎನ್ನಬಹುದು.

"ಕಳೆದ ಶತಮಾನದ ಕೊನೆಯ ದಶಕಗಳಿಂದ ಈ ಶತಮಾನದ ಮಧ್ಯದವರೆಗಿನ ಕಾಲ ಉತ್ತರ ಕರ್ನಾಟಕದಲ್ಲಿ ಲಾವಣಿ ಹಾಡುಗಾರಿಕೆ ಉಚ್ಛ್ರಾಯಸ್ಥಿತಿಗೇರಿದ ಕಾಲವೆನ್ನಬೇಕು. ಈ ಅವಧಿಯಲ್ಲಿ ಉತ್ತರ ಕರ್ನಾಟಕದ ಬಹುತೇಕ ಎಲ್ಲ ಭಾಗಗಳಲ್ಲಿಯೂ ಲಾವಣಿ, ಗೀ ಗೀ ಗಳ ರಚನೆ ಹುಲುಸಾಗಿ ನಡೆಯಿತು. ಹಾಡಿಕೆಗಾರರ ಮೇಳಗಳು ವಿಪುಲವಾಗಿ ಬೆಳೆದವು. ಲಾವಣಿ ಹಾಡುವ ಹುಚ್ಚು ಗ್ರಾಮೀಣ ಯುವಕರಲ್ಲಿ ಈ ಕಾಲಕ್ಕೆ (ಈ ಶತಮಾನದ ಮೊದಲೆರಡು ದಶಕಗಳಲ್ಲಿ) ಎಷ್ಟು ಬೆಳೆದಿದ್ದಿತೆಂಬುದನ್ನು ಬೀ ಬೀ ಇಂಗಳಗಿಯ ಹಸನಸಾಹೇಬ್ ತನ್ನ ಒಂದು ಲಾವಣಿಯಲ್ಲಿ ಆನುಷಂಗಿಕವಾಗಿ ಹೀಗೆ ವರ್ಣಿಸಿದ್ದಾನೆ.

"ಬೆದರಿಸಿ ಮನ್ಯಾಗ ಹೆಂಗಸರಿಗಿ । ವತ್ತಿ ಇಟ್ಟು ಗಂಗಾಳಚರಗಿ ।
ಪದ ಬರದ ಕಲಸಾಂವಗ ಕೊಡುವರು ರೊಕ್ಕ ರೂಪಾಯಿ ಶೆರೆ ಸಿಂದಿಗಿ ॥

---

೩. ಕ್ಯಾತನಹಳ್ಳಿ ರಾಮಣ್ಣ, : *'ಫ್ಲೀಟರು ಸಂಗ್ರಹಿಸಿದ ಲಾವಣಿಗಳು'* ೧೯೯೧. (ದ್ವಿತೀಯ ಮುದ್ರಣ) ಪುಟ–೨

ಹಾಡಿಕಿ ಸಲುವಾಗಿ ಹಾಳಾಗಿ ಜಗಳ ಹತ್ತಿತು ಗಂಡ ಹೆಂಡತೀಗಿ ।
ಇಂಗಳಗಿ ಹಸನಗ ಯಾರ ಹೇಳಬೇಕು ಕೆಡ್ಸಿ ಬಿಟ್ಟ ನಮ್ಮ ಗಂಡದೇರಿಗಿ॥
ಬಿತ್ತಿ ಬಿಟ್ಟಾನವ್ವ ಊರೂರಿಗಿ, ಮೊಲಿಕುಡಿ ಕೂಸ ಮೊದಲಾಗಿ
ಬೀಸೂ ಕಲ್ಲಾಗ ಇವನ ಪದಾ ಹಾಡತಾರ ಚಲೋ ಹೆಂಗಸೂರು ತೆಲಿದೂಗಿ"॥

ಹಾಡಿಕೆಯವರಂತೆ ಜನಸಾಮಾನ್ಯರಲ್ಲೂ ಲಾವಣಿ ಕೇಳಬೇಕೆಂಬ ಹಂಬಲ ವ್ಯಾಪಕವಾಗಿ ಬೆಳೆದಿದ್ದ ಕಾಲವದು. ಉತ್ತರ ಕರ್ನಾಟಕದ ಯಾವ ಜಾತ್ರೆ ರಥೋತ್ಸವದಲ್ಲೂ ಬಯಲಾಟದ ಮತ್ತು 'ಜೀ ಜೀ' ಪದ ಇದ್ದೇ ಇರುತ್ತಿದ್ದವು. ಇವನ್ನು ಕೇಳಬೇಕೆಂದು ಸಮೀಪದ ಹಳ್ಳಿಯವರು ಚಕ್ಕಡಿ ಕಟ್ಟಿಕೊಂಡು ಬರುತ್ತಿದ್ದರು."[೪] ಬೀ ಬೀ ಇಂಗಳಗಿ ಇಂಡಿ ತಾಲೂಕಿನ ಉತ್ತರ ಭಾಗಕ್ಕಿರುವ ಒಂದು ಸಣ್ಣ ಹಳ್ಳಿ. ಈ ಹಳ್ಳಿಯಲ್ಲಿ ಜನಿಸಿದ ಹಸನಸಾಹೇಬ ತನ್ನ ಲಾವಣಿ ಹಾಡುಗಾರಿಕೆಯ ಮುಖಾಂತರ ಸುತ್ತಮುತ್ತಲಿನ ಗ್ರಾಮೀಣ ಜನರಿಗೆ ಮತ್ತು ಸಣ್ಣ ಮಕ್ಕಳಿಗೆ ಹಾಡಿಕೆ ಹಾಡುಗಳನ್ನು ಕೇಳುವ ಅಥವಾ ಕಲಿಯುವ ಹುಚ್ಚುತನ ಹಿಡಿಸಿಬಿಟ್ಟ. ಹೆಣ್ಣುಮಕ್ಕಳು ಬೀಸೂಕಲ್ಲಿನ ಮೇಲೆ ಇವನ ಹಾಡುಗಳನ್ನು ಹಾಡಿ ತಲೆತೂಗುತ್ತಿದ್ದರು ಎನ್ನುವುದು ಹಸನಸಾಹೇಬನ ಪ್ರಖ್ಯಾತಿಗೆ ಹಿಡಿದ ಕನ್ನಡಿಯಾಗಿದೆ.

"ಒಮ್ಮೆ ಇಂಡಿ ಶಾಂತೇಶ್ವರ ಜಾತ್ರೆಗೆ ಗೀ ಗೀ ಹಾಡಿನ ಮೇಳಗಳೆಲ್ಲ ಸೇರಿದ್ದವು (೧೯೧೦-೧೫). ಹಲಸಂಗಿ ಖಾಜಾಸಾಹೇಬನಿಗೂ ಹಸನನ ಶಿಷ್ಯಂದಿರಿಗೂ ಹಾಡಿನ ಸ್ಪರ್ಧೆ ಉಂಟಾಗಿ ಒಳ್ಳೆಯ ತುರುಸಿಗೆ ಬಿದ್ದಿತು. ಖಾಜಾಸಾಹೇಬನ ಸವಾಲಿಗೆ ಹಸನನ ಶಿಷ್ಯರಾದ ಕೋರಳ್ಳಿ ಮೌಲಾಲಿಗೂ, ಚಾಂದಕೋಟಿ ನಬಿಸಾಹೇಬನಿಗೂ (ಉತ್ತರ) ಜವಾಬ ಕೊಡಲು ಸಾಧ್ಯವಾಗದಿದ್ದಾಗ ಗುರು ಹಸನನಿಗೆ ಹೇಳಿ ಕಳಿಸುತ್ತಾರೆ. ಆ ಸಂದರ್ಭದಲ್ಲಿ ಏನೇನು ನಡೆಯಿತೆಂಬುದನ್ನು ಹಸನಸಾಹೇಬನೇ ರಚಿಸಿದ ಹಾಡಿನಿಂದ ತಿಳಿದುಕೊಳ್ಳಬಹುದಾಗಿದೆ.

"ಸಾಧಿಸಿ ಇಂಡಿ ಜಾತ್ರಿಗಿ ಭಲೆ ಭಲೆ ಹರದಾಸರಕೂಡಿ
ನಾ ಮೇಲ ನೀ ಮೇಲಂತ ಖಾಜಾಸಾಹೇಬ ಹಲಸಂಗಿ
ಬಂದ ಮಾಡಿದ ನಾಗೇಶನ ಕಲ್ಗಿ ಕ್ವಾರಳ್ಳಿ ಮೌಲಾಸಾಹೇಬನಿಗಿ
ಚಾಂದಕೋಟಿ ನಬಿಸಾಹೇಬ ನೆನಸ್ತಾನ ಗುರುವಿಗಿ
ಪತ್ರ ಕಳಸರಿ ಇಂಗಳಗೀಗಿ ಕೀಳಾಗೇದ ಹಸನಕಲ್ಗೀ
ಪತ್ರ ಬಂದ ಮುಟ್ಟೀತು ಜಿತಾವಲಿ ಹಸನನಿಗಿ" ॥

---

೪. ಸಂ. ಡಾ. ಎಂ.ಎಸ್.ಸುಂಕಾಪುರ : *'ಜಾನಪದ ಸಾಹಿತ್ಯದರ್ಶನ ಭಾಗ-೫'.* (ಡಾ.ಬಿ.ಬಿ. ಹೆಂಡಿಯವರ ಲೇಖನ. 'ಬೀ ಬೀ ಇಂಗಳಗಿ ಭಾಗದ ಲಾವಣಿಕಾರರು') ಪ್ರಕಟಣೆಯ ವರ್ಷ, ೧೯೮೦, ಪುಟ ೧೬೦, ೧೬೧.

ಹಸನಸಾಹೇಬ ಕುದರೆಯ ಮೇಲೆ ಬರುವುದನ್ನು ಕಂಡು ಹಾಡು ಕೇಳಲು ಕುಳಿತಿದ್ದ ಜನ ಹರ್ಷೋದ್ಗಾರ ಮಾಡಿದರಂತೆ. ಖಾಜಾಸಾಹೇಬ ಅಟ್ಟವೇರಿ ಸವಾಲ್ ಒಂದನ್ನು ಹಾಕಿದಾಗ ಅದಕ್ಕೆ ಹಸನ ಜವಾಬ ಕೊಟ್ಟು ತಾನೊಂದು ಸವಾಲ್‌ನ್ನು ಖಾಜಾಸಾಹೇಬನಿಗೆ ಹಾಕುತ್ತಾನೆ.

"ತಾಳಿಕೋಟಿ ದೊಡ್ಡ ಪ್ಯಾಟಿ ಪಗಡಿ ಬಜಾರದೊಳು ಕಣ್ಣಿಲೆ
ಕಂಡೇನಣ್ಣ ಕೋಮಲಿ
ಸಂತಿ ದಿವಸ ನಾನಿಂತ ನೋಡಿದೆ ಚಿಂತೆ ಬಹಳ ಮನದಲ್ಲಿ ॥ಜೀ ಜೀ॥
ಆಕಿ ರೂಪ ಎಷ್ಟಂತ ಹೇಳಲಿ ಪಡದ ಬಂದಾಳ ಚಲ್ವಿರೆ
ಮಾಡಿದಂಗ ತಾರಕಿ
ಕಳೆ ಕಮಲದಂಗ ನೇತ್ರ ಹೊಳಿತಾವ ಎಳಿಯ ಚಂದ್ರನಂತಾಕಿ ।
ಗಲ್ಲ ಹೊಳಿತಾವ ಹಲ್ಲ ದಾಳಿಂಬರ ಅಥಣಿ ಬೆಲ್ಲದಂಥ ॥ ಜೀ ಜೀ॥
ಎಲ್ಲಿ ಇಲ್ಲೊ ಇಂಥಾಕಿ
ಚಿಗರಿ ಹಂಗ ನಾರಿ ನಿಗರಿ ನಿಂತಕೇರಿ ತಿರುಗಿ ನೋಡತಾಳೊ
ಕಕಿ ಬಿಕಿ ॥ ಜೀ ಜೀ" ॥

ಇಳುವು ॥ "ನಡಸಣ್ಣ ಸಿಂಹನಾಂಗ ಮಾಟಾ ಏನ ಘಾಟಾ ।
ಮೊಲಿ ಮೊಗ್ಗಿ ಚಂಡಿನಂಗ ಥೇಟ ಒಳ್ಳೆ ನೇಟಾ ।
ವಿಭೂತಿ ಗೆರಿ ಹಣಿಮ್ಯಾಲ ಕುಂಕಮ ಬಟ್ಟ ॥ ಜೀ ಜೀ ॥
ಜರತರದ ಕುಪ್ಪಸ ತೊಟ್ಟ ಲಕ್ಕಟ್ಟಾ
ಬಿಗಿದಾವ ಎರಡು ಮಲಿಕಟ್ಟಾ ತಿಟಿಮೀಟಾ
ಚಳ್ಳ ಪಳ್ಳ ನಿಲಗಿ ಒದುತಾಳ ಪಿತಾಂಬರ ಉಟ್ಟಾ ॥ ಜೀ ಜೀ॥
ಹಲಸಂಗಿ ಖಾಜಾ ಮನಸಿಟ್ಟಾ ನೆದರಿಟ್ಟಾ
ಇದರ ನಿಂತಾಕಿ ಮುಕ್ರಿಟ್ಟಾ ಕಣಿಗೆಟ್ಟಾ
ದರ್ಜಿಲ್ದಾ ದಾಟಿ ಹೊಂಟಾಳ ಓಣಿಗುಂಟಾ ॥ ಜೀ ಜೀ ॥
ನೀ ಬಾರೋ ಬಾರದಿರಬ್ಯಾಡೊ ನಿಮ್ಮ ದೇವರಾಣಿ
ಬಣ್ಣಿಲ್ಲದ ಕುಪ್ಪಸ ನೈಸಿಕೊಡೊ ನಿನ್ನ ಕಣ್ಣಿನ ಕೊನೆಯಲ್ಲಿ
ಲಾಳಿ ಇಲ್ಲದ ಹಲಿಗಿಲಿ ॥ ಜೀ ಜೀ ॥
ಸಂತಿದಿವಸ ನಾ ನಿಂತ ನೋಡಿದೆ ಚಿಂತಿ ಬಹಳ ಮನದಲ್ಲಿ
ಕುಬಸ ತಗೊಂಡ ಬಾ ತಡ ಮಾಡ ಬ್ಯಾಡ ಇಂದ ಹೊತ್ತ
ಮುಳಗಾಣಾ ಮಾಡೊ ನನ್ನ ಗೆಳೆತಾನ

ಇಲ್ಲದಿದ್ದರ ಹ್ಯಾಂಗ ಬಂದೀದಿ ಹಾಂಗ ಹೋಗು ಸುಖಜಾಣಾ"

ಈ ಹಾಡಿಗೆ ಉತ್ತರಿಸಲು ಸಾಧ್ಯವಾಗದಿದ್ದಾಗ ಹಲಸಂಗಿ ಖಾಜಾಸಾಹೇಬ ಹೇಳಿರುವ ಮಾತುಗಳಿವು.

"ಖರೆ ಕವಿ ಪುಂಡ ನುಡಿ ಬಾಯಿಲಿ ಹೊರಟರ
ಭೂಮಿ ಮ್ಯಾಲ ಪುಟದಂಗ ಚಂಡ"

ಈ ಖ್ಯಾಲಿ ಹಾಡಿನೊಂದಿಗೆ ನೆರೆದ ಜನರೆದುರು ಹಸನಸಾಹೇಬನನ್ನು ಕೊಂಡಾಡಿ ತನ್ನ ಮೆಚ್ಚಿಗೆ ವ್ಯಕ್ತಪಡಿಸಿದನಂತೆ. ಖಾಜಾಸಾಹೇಬನ ಉದಾತ್ತ ಮನಸ್ಸು, ನಿಷ್ಪಕ್ಷಪಾತ, ನಿಗರ್ವಿತನಕ್ಕೆ ಮನಸೋತ ಹಸನಸಾಹೇಬ

"ಇಲ್ಲಿ ತನಕ ನನ್ನ ಗಂಡ ಸಿಕ್ಕಿರಲಿಲ್ಲ
ಮುಪ್ಪಿನ ಕಾಲಕ್ಕೆ ಖಾಜಾ ನನ್ನ ತಕ್ಕಗಂಡ
ವಿದ್ಯೆಕ್ಕಿಲ್ಲ ಸರಿ ಜೋಡಿ
ಮತ್ತರ ಬುದ್ಧಿಗೆ ಮಚ್ಚಿಲಿ ಹೊಡಿ"

ಈ ಖ್ಯಾಲಿ ಹಾಡೊಂದರಲ್ಲಿ ಖಾಜಾಸಾಹೇಬನ ವಾದಿಸುವ ವೈಖರಿಯನ್ನು ಮೆಚ್ಚಿ ಹಸನಸಾಹೇಬ ಕೊಂಡಾಡಿದ್ದಾನೆ. ಇಂಡಿ ಶಾಂತೇಶ್ವರ ಜಾತ್ರೆಯಲ್ಲಿ ಜರುಗಿದ ಈ ಘಟನೆಯಿಂದಾಗಿ ಖಾಜಾಸಾಹೇಬರ ಹಾಡಿಕಿ ಜೀವನಕ್ಕೆ ಹೊಸ ತಿರುವು ಉಂಟಾಯಿತು. ಅವನ ಮನಸ್ಸೆಲ್ಲ ಆಧ್ಯಾತ್ಮದತ್ತ ತಿರುಗಿ ಹಸನಸಾಹೇಬನ ಶ್ರೇಷ್ಠತೆಯನ್ನು ಮತ್ತೊಮ್ಮೆ ಬಾಯ್ತುಂಬಾ ಬಣ್ಣಿಸಿದ್ದಾನೆ.

"ರಂಡಿ ಮಾಡಿದವಗ ಪುಂಡ ಹ್ಯಾಂಗ ಅನ್ನಬೇಕ
ಶಂಡನ ಸಮಾನ ।
ಸತ್ಯಕಳಕೊಂಡು ರತನ ಕಡಿಮೆ ಆಗುದು ಚೇತನಾ" ॥

ಈ ಹಾಡು ಹಲಸಂಗಿ ಖಾಜಾಸಾಹೇಬನ ಹಾಡುಗಾರಿಕೆಗೆ ಮುಕ್ತಾಯ ಹಾಡಿತು. ಹಸನಸಾಹೇಬನ ಹಾಡುಗಾರಿಕೆಗೆ ಮೆಚ್ಚಿಕೊಂಡ ಇಂಡಿ ಕಂದಾಯ ಇಲಾಖೆಯ ಅಧಿಕಾರಿಗಳು ಮೂರು ಬಾದ್ರ ಬಿಲ್ಲಿ (ಬಹದ್ದೂರ)ಗಳನ್ನು ಕಾಣಿಕೆಯಾಗಿ ಕೊಟ್ಟರು."[೫]

ಲಾವಣಿ ಹಾಡುಗಳು ಜನಪದ ಸಾಹಿತ್ಯದ ಒಂದು ವಿಶೇಷ, ವಿಶಿಷ್ಟ ಮತ್ತು ಕಲಾತ್ಮಕ ಪ್ರಕಾರ. ಆದ್ದರಿಂದಲೇ ಅದೊಂದು ಜನಪ್ರಿಯ ಸಾಹಿತ್ಯವೆನಿಸಿ ಇಂದಿನವರೆಗೂ ಮೆರೆಯುತ್ತ ಬಂದಿದೆ. ಈ ಲಾವಣಿಯಲ್ಲಿ ಚಿಟಿಕೆಯ ಹೊರತು ಮತ್ತೊಂದು ವಾದ್ಯಬೇಕಿಲ್ಲ. ಆದರೆ ಕೆಲವು ಲಾವಣಿಕಾರ ಮತ್ತು ಸಂಗಡಿಗರು ಚಿಟುಕು ಹಿಡಿಯಲು 'ದಿಮ್ಮ', ದುಮ್ಮಡಿ', 'ಡಪ್ಪು', ಹಲಗೆ, ತುಂತುಣಿ, ತುಂತುಣಿಯ ಶೃತಿ, ಡಪ್ಪಿನ ಲಯದ ಜೊತೆಗೆ

೫. ಡಾ. ಬಿ.ಎಸ್. ಕೋಟ್ಯಾಳ : *'ಗೀ ಗೀ ಸಂಪ್ರದಾಯದ ಹರಿಕಾರ ಬೀಬೀ ಇಂಗಳಗಿ ಹಸನಸಾಹೇಬ.'* ವಿವರಣೆಗೆ ನೋಡಿ, ೨೦೦೬, ಪುಟ ೨೩ ರಿಂದ ೨೬ರ ವರೆಗೆ.

ಗಾಯಕರ ಗೆಜ್ಜೆಯ ಗಿಲುಕು, ಕುಣಿತದ ಗಮ್ಮತ್ತು ರಂಗದ ಆ ಬದಿಯಿಂದ ಈ ಬದಿಗೆ ಸರಿಯುವಾಗ ಲಘು ನಗೆತ; ಕತ್ತು ಹೊರಳಿಸುವ ಕೊಂಕು, ಕೈಬೀಸುವ ಯಮಕು, ಎದುರುಬದುರು ಹಾಡುವವರ ಪ್ರಶ್ನೆ ಉತ್ತರಗಳ ನಡುವೆ ಹಿಮ್ಮೇಳದವರು ಒಟ್ಟುಗೂಡಿ ಹಾಡಿಗೆಕೊಡುವ ಕುಮ್ಮಕ್ಕು, ಇದೆಲ್ಲ ಮೇಳವಿಸಿ ಶೃಂಗಾರದ ತೆರೆ, ವಾತ್ಸಲ್ಯದ ಕರೆ, ಶೌರ್ಯದ ಮೊರೆತ, ಸಾಹಸದ ಸೂರೆ.

“ಏನು ಮುಂಗಾರಿ ಮಳಿಹಾಂಗ ಸಿಡಿಲ್ । ಬಿದ್ದಿತು ಖಡಲ್ ।
ಎದಿ ಅಂತು ಧಡಲ್ ಆಗಿ ನಿಂತೆ ಮೂಕ’ ಎನ್ನುವ ಬೆರಗು”[೬]

ಮೇಲಿನ ಲಾವಣಿಯಲ್ಲಿ ಮುಂಗಾರು ಮಳೆ ಆರಂಭವಾದಾಗ ಗುಡುಗು–ಮಿಂಚುಗಳಿಂದ ಕೂಡಿ ಅರ್ಭಟಿಸಿದಂತೆ ಇಲ್ಲಿ ಲಾವಣಿಕಾರ ತನ್ನ ಇಂಗಿತವನ್ನು ವ್ಯಕ್ತಪಡಿಸಿದ್ದಾನೆ. ಆದ್ದರಿಂದ ಲಾವಣಿ ಹಾಡುಗಳು ಕೇಳುಗರ ಜನಮನದಲ್ಲಿ ಅಚ್ಚಳಿಯದಂತೆ ಉಳಿದುಕೊಂಡಿವೆ. ಇಲ್ಲಿ ಒಂದು ವೀರಲಾವಣಿಯ ಪ್ರಸಂಗವನ್ನು ಲಾವಣಿಕಾರ ಹೀಗೆ ವರ್ಣಿಸಿದ್ದಾನೆ.

“ತ್ವಾಳಾಗಿ ಹೊಕ್ಕ ಅರ್ಜುನ ಮಾಡಿ ಕುರಿ ಹಿಂಡ ಕೌರವನ ದಂಡ
ಗರ್ಜನೆ ಮಾಡಿ ಬಾಣ ಬಿಟ್ಟು ಹಾರಿಸಿದರುಂಡ
ಆಡಿದಂಗ ಚಂಡ”[೭] ಎನ್ನುವ ಅಬ್ಬರ,

ಮೂರು ಲೋಕದ ಗಂಡ ಎಂದು ಖ್ಯಾತಿಪಡೆದ ಅರ್ಜುನನು ಕೌರವರ ದಂಡಿ (ಕುರಿಹಿಂಡಿ)ನಲ್ಲಿ ತೋಳ ಹೊಕ್ಕಂತೆ ನುಗ್ಗಿ ನಾಶಮಾಡಿದಂತೆ ತನ್ನ ಬಿಲ್ಲು ಬಾಣಗಳಿಂದ ಗರ್ಜಿಸಿ–ಅಬ್ಬರಿಸಿ ಸೆದೆ ಬಡಿದ ಎನ್ನುವ ಚಿತ್ರಣ ಲಾವಣಿಕಾರ ಈ ಪದ್ಯದಲ್ಲಿ ವ್ಯಕ್ತಪಡಿಸಿದ್ದಾನೆ.

“ಕಿತ್ತೂರ ಚನ್ನವ್ವನ ಸೊಸಿ ಹೊಂಗಲ ಬಿಟ್ಟು ಹೋಗುವಾಗ
ಮಾಡುತ್ತಿದ್ದಳಣ್ಣ ಮಹಾದುಖ್ಖ
ಮತ್ತ ನಮ್ಮ ಮಲ್ಲಸರ್ಜ ಸತ್ತು ಹೋಗದಿದ್ದರ
ಹೊತ್ತು ಹೋಗುದ್ಯಾಕ ನಮ್ಮ ಬದಕಾ”[೮]

ಬಾಪು ಸಾಹೇಬ ಶಿವಲಿಂಗ ರುದ್ರಸರ್ಜನ ಹೆಂಡತಿಯಾದ ವಿಧವೆ ಈರವ್ವನ ಶೋಕ ಮತ್ತು ಸಾವು–ನೋವುಗಳನ್ನು ವಿವರಿಸುವ ಸ್ಥಳೀಯ ಜೀವನದ ಘಟನೆಗಳು ಈ ಲಾವಣಿಯಲ್ಲಿ ವ್ಯಕ್ತವಾಗಿದೆ. ದತ್ತು ಸ್ವೀಕಾರದ ನಕಾರಾತ್ಮಕ ಘಟನೆ, ಸಂಗೊಳ್ಳಿ ರಾಯಣ್ಣ ಅಧೀರನಾಗಿದ್ದ ಪ್ರಸಂಗ ಹಾಗೂ ಸ್ಥಳೀಯ ಜನ ದಂಗೆಯನ್ನು ಪ್ರಾರಂಭಿಸಿದ ವಿಷಯಗಳನ್ನು ಕುಲಂಕೂಷವಾಗಿ ಗಮನಿಸಿದ ಕಂಪನಿ ಸರ್ಕಾರ ಹೊಂಗಲದಲ್ಲಿ

---

೬. ಸಿಂಪಿ ಲಿಂಗಣ್ಣ. : *'ಉತ್ತರ ಕರ್ನಾಟಕದ ಜಾನಪದ ಗೀತೆಗಳು'*, ೧೯೭೫, ಪುಟ–೩೪–೩೫.

೭. ಅದೇ ಪುಟ.

೮. ಕ್ಯಾತನಹಳ್ಳಿ ರಾಮಣ್ಣ. : *'ಫ್ಲೀಟರು ಸಂಗ್ರಹಿಸಿದ ಲಾವಣಿಗಳು'*, (ದ್ವಿತೀಯ ಮುದ್ರಣ) ೧೯೯೧, ಪುಟ–೮೪

ವಾಸಿಸುತ್ತಿದ್ದ ಈರವ್ವಳನ್ನು ಧಾರವಾಡಕ್ಕೆ ಸಾಗಿಸುವುದು ಒಳ್ಳೆಯದೆಂದು ನಿರ್ಧರಿಸುತ್ತಾರೆ. ಆ ಸಂದರ್ಭದಲ್ಲಿ ನಡೆದ ಘಟನೆಯನ್ನೆ ವಸ್ತು ವಿಷವನ್ನಾಗಿಸಿಕೊಂಡ ಲಾವಣಿಕಾರ 'ಕಿತ್ತೂರು ಚೆನ್ನವ್ವನ ಸೊಸಿ ಹೊಂಗಲ ಬಿಟ್ಟುಹೋಗುವಾಗ ಮಾಡುತ್ತಿದ್ದಳಣ್ಣ ಮಹಾದುಖ್ಖ' ಅನ್ನುವಂಥ ಲಾವಣಿ ರಚಿಸಿದ್ದಾನೆ. ಈ ಲಾವಣಿ ಕೇಳಿದ ಯಾರಿಗಾದರು ಕರಳು ಕಿತ್ತುಬರುವಂತ ಕರುಣಾಜನಕ ಪ್ರಸಂಗವಾದದ್ದು. ಇಂಥ ಹಲವಾರು ಘಟನೆಗಳೇ ನಮ್ಮ ಲಾವಣಿಕಾರರಿಗೆ ವಸ್ತು ವಿಷಯಗಳಾಗಿರುವುದು ಸಹಜ.

'ಲಾವಣಿ' ಎಂಬ ಪದಕ್ಕೆ ಕನ್ನಡದಲ್ಲಿ ಬಳಸಿದ ಪದದ ಅರ್ಥವನ್ನು ಬೇರೆ ಬೇರೆ ವಿದ್ವಾಂಸರು ಚರ್ಚಿಸಿರುವುದನ್ನು ಇಲ್ಲಿ ಗಮನಿಸೋಣ.

"ಲಾವಣಿ' ಎಂಬ ಮಾತು ಸಮಗ್ರ ಕರ್ನಾಟಕದಲ್ಲಿ ಬಳಕೆಯಲ್ಲಿದ್ದರೂ ಬಹುಮಟ್ಟಿಗೆ ಕಥನಗೀತೆಗಳಿಗೆ ಇದು ಹೆಚ್ಚಾಗಿ ಆರೋಪಿಸಲ್ಪಡುತ್ತ ಬಂದಿದೆ. ಜೋಗದ ಗುಂಡಿಲಾವಣಿ ಇತ್ತೀಚಿನ ರಾಜಕೀಯ ಲಾವಣಿಗಳು ಕಥೆಯ ಅಂಶವನ್ನೇನೂ ಒಳಗೊಳ್ಳದೆ ಪ್ರಸಿದ್ಧ ಲಾವಣಿಗಳ ಮಟ್ಟಿನ ಜಾಡಿನಲ್ಲಿ ರಚಿತವಾದುದರಿಂದ ಆ ಹೆಸರಿನಲ್ಲೇ ಕರೆಯಲ್ಪಟ್ಟಿರಬೇಕು. ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಮಾಸ್ತಿಯವರು ಪ್ರಸ್ತಾಪಿಸಿರುವ ಲಾವಣಿಗಳು, ಸಿಂಪಿಯವರು ಪರಿಚಯಿಸಿರುವ ಲಾವಣಿಗಳು, ದೇವುಡು ಅವರು ವಿಚಾರ ಮಾಡಿರುವ ಲಾವಣಿಗಳು–ಇವುಗಳಲ್ಲಿ ಕಥನಕವನಗಳೇ ಅಗ್ರಪಂಕ್ತಿಯಲ್ಲಿ ನಿಲ್ಲುತ್ತವೆ. ಅಲ್ಲೊಂದು ಇಲ್ಲೊಂದು ತೋರಿಬರುವ ಬಿಡಿಹಾಡುಗಳು ಪ್ರತ್ಯೇಕ ವರ್ಗಕ್ಕೆ ಸೇರಬಹುದಾದವು. ಆದುದರಿಂದ 'ಲಾವಣಿ' ಎಂಬ ಮಾತನ್ನು ***'Ballad'*** ಪದಕ್ಕೆ ಸಂವಾದಿಯಾಗಿ ಜನಪದ ಕಥನಗೀತೆಗಳಿಗೆ ಬಳಸಬಹುದಾಗಿದೆ."[೯] ಎಂದು ಹಾ.ಮಾ.ನಾ ಅವರ ಅಭಿಪ್ರಾಯ. "ಕನ್ನಡದಲ್ಲಿ ಮೂರು ನಾಲ್ಕು ದಶಕಗಳ ಹಿಂದೆಯೇ ***'Ballad'*** ಪದಕ್ಕೆ ಸಂವಾದಿಯಾಗಿ 'ಲಾವಣಿ' ಎಂಬ ಮಾತು ಬಳಕೆಯಲ್ಲಿದ್ದರೂ, ನೇರವಾಗಿ ಕಥನಗೀತೆಗಳಿಗೆ ಅನ್ವಯಿಸಿ ನಿರ್ದಿಷ್ಟ ಅರ್ಥದಲ್ಲಿ ಆ ಮಾತನ್ನು ಬಳಸಿದ ನಿದರ್ಶನ ಇತ್ತೀಚಿನದು".[೧೦]

ಡಾ. ಹಕಾರಿಯವರು "ಬ್ಯಾಲೆಡ್‌ದ ಕೆಲವು ಸಮಾನಾಂಶಗಳು–ಕಥಾನಕ, ಹಾಡಿಗೆ ಹೊಂದಿಸಿದ್ದು, ಆಗಾಗ ಕುಣಿತ, ವೃತ್ತಿಗಾಯಕರು, ಸುಖಾಂತ ಅಥವಾ ದು:ಖಾಂತ–ಲಾವಣಿಯಲ್ಲಿಯೂ ಕಂಡುಬರುವುದರಿಂದ ಬ್ಯಾಲೆಡ್ ಮತ್ತು ಲಾವಣಿಗಳನ್ನು ಸಮೀಕರಿಸುವುದು ಸೂಕ್ತವಲ್ಲ. 'ಬ್ಯಾಲೆಡ್' ಕುರಿತು ಹೇಳುವಾಗ ಬ್ಯಾಲೆಡ್ ಎಂದೇ ಹೇಳುವುದು, 'ಲಾವಣಿ'ಗಳಿಗೆ ಸಂಬಂಧಿಸಿ ಚರ್ಚಿಸುವಾಗ 'ಲಾವಣಿ' ಎಂದೇ ಹೇಳುವುದು. ಸಮಾನಾಂಶಗಳನ್ನು ಗುರುತಿಸುವಾಗ 'ಬ್ಯಾಲೆಡ್' 'ಲಾವಣಿ' ಎಂದು ಹೆಸರಿಸುವುದು ಹೆಚ್ಚು ಸಮಂಜಸ"[೧೧].ಎಂದು ಅಭಿಪ್ರಾಯ ಪಡುತ್ತಾರೆ.

"ಆಂಗ್ಲ ಲಾವಣಿ ಸಾಹಿತ್ಯಕ್ಕೆ ಬಳಸಲಾಗುತ್ತಿರುವ ***'Ballad'*** ಎಂಬ ***Count Dirols, Romance*** ಶಬ್ದ **ಲ್ಯಾಟಿನ್** ಮೂಲಕ್ಕೆ ಸಂಬಂಧಿಸಿದುದು.

೯. ಡಾ. ಹಾ.ಮಾ. ನಾಯಕ:'ಜಾನಪದ ಸ್ವರೂಪ,' ೧೯೭೧. ಪುಟ, ೨೮.

೧೦. ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ : 'ವಿಮರ್ಶೆ,' ೧. ೧೯೫೪. ಪುಟ–೭೧.

೧೧. ಡಾ. ದೇವೇಂದ್ರಕುಮಾರ ಹಕಾರಿ :'ಜಾನಪದ –ಸಾಮಾಜಿಕ ಕಥನಗೀತೆಗಳಲ್ಲಿ ದು:ಖಾಂತ ನಿರೂಪಣೆ' (ಪಿ.ಎಚ್.ಡಿ. ಮಹಾಪ್ರಬಂಧ) ೧೯೮೫, ಪುಟ, ೧೫೧,೧೫೨.

ಡ್ಯಾನಿಷ್ ಭಾಷೆಯಲ್ಲಿ *Vise*, ಸ್ಪ್ಯಾನಿಷ್‌ನಲ್ಲಿ *Romance*, ರಷ್ಯನ್ ಭಾಷೆಯಲ್ಲಿ *Bylina* - ಹೀಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಈ ಸಾಹಿತ್ಯ ಪ್ರಕಾರವನ್ನುಗುರುತಿಸಲಾಗುತ್ತಿದೆ. ಮೊದಲಿಗೆ ನೃತ್ಯ ಗೀತೆಯೊಂದರೊಡನೆ ಇದರ ಸಂಬಂಧವನ್ನು ಗುರುತಿಸಲಾಗುತ್ತಿದ್ದರೂ, ಲಾವಣಿಗಳಿಗೂ ನೃತ್ಯಗಳಿಗೂ ಯಾವ ಸಂಬಂಧವೂ ಇಲ್ಲವೆಂಬ ತೀರ್ಮಾನಕ್ಕೆ ಅನಂತರ ಬರಲಾಯಿತು. **ಇಟಾಲಿಯನ್** ಮೂಲದ ನೃತ್ಯಗೀತೆ ***'Ballata'*** ಭಾವಗೀತೆಯ ಸ್ವರೂಪದಿಂದ ಕೂಡಿದ್ದು, ***'Ballad'*** ಶಬ್ದದೊಡನೆ ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ಕೆಲವು ಲಾವಣಿಗಳನ್ನು ನೃತ್ಯ ಸಂದರ್ಭಗಳಲ್ಲಿ ಹಾಡುವ ನಿದರ್ಶನಗಳೂ ಒಂದೆರಡು ಲಭ್ಯವಾಗಿ ಈ ಗೊಂದಲಕ್ಕೆ ಕಾರಣವಾದರೂ ***'Ballad'*** ಕಂಠಸ್ಥ ಸಂಪ್ರದಾಯದ ಪರಂಪರಾಗತ ಕಥನಗೀತೆಗೆ ಮಾತ್ರ ನಿರ್ದಿಷ್ಟವಾಗಿ ಅನ್ವಯವಾಗುತ್ತ ಬಂದಿತು"[೧೨] "ಲಾವಣಿಗಳಿಗೆ **ಸ್ಕಾಂಡಿನೇವಿಯದಲ್ಲಿ** ಬಳಸುವ ***'Folkevisor'*** ಶಬ್ದಕ್ಕೆ ಜನಪದ ಗೀತೆಗಳು ಅಥವಾ ಜನಪದ ಮಟ್ಟುಗಳು ಎಂದೇ ಅರ್ಥವಾಗುತ್ತದೆ. **ಸ್ಪೆಯಿನ್** ಮತ್ತು **ಫ್ರಾನ್ಸ್**‌ಗಳಲ್ಲಿ ಬಳಸಲಾಗುತ್ತಿರುವ ***'Romance'*** ಶಬ್ದ ಮೊದಲಿಗೆ ಲ್ಯಾಟಿನ್‌ಗೆ ವಿರುದ್ಧವಾಗಿ ದೇಶೀಯ ಭಾಷೆಯಲ್ಲಿ ರಚಿಸಿದ ಯಾವುದೇ ಕೃತಿಯನ್ನು ನಿರ್ದೇಶಿಸುತ್ತಿತ್ತು. ಜರ್ಮನಿಯ ***'Ballade'*** ಹದಿನೆಂಟನೇ ಶತಮಾನದಲ್ಲಿ ಇಂಗ್ಲಿಷ್‌ನಿಂದಲೇ ಸ್ವೀಕರಿಸಿದ ಪದ"[೧೩] ***"Ballad"*** ಎಂಬ ಪದಕ್ಕೆ ಪಾಶ್ಚಿಮಾತ್ಯರು ಬೇರೆ ಬೇರೆ ಶಬ್ದಗಳಲ್ಲಿ ಅರ್ಥೈಸಿದ್ದಾರೆ ಎಂಬುದು ಮೇಲಣ ವಿಚಾರದಿಂದ ಸ್ಪಷ್ಟವಾಗುತ್ತದೆ." [೧೪]. 'ಲಾವಣಿ' ಎಂಬ ಶಬ್ದಕ್ಕೆ ಪಾಶ್ಚಿಮಾತ್ಯರು ಬಳಸಿದ ವಿವಿಧ ಶಬ್ದಗಳ ಅರ್ಥವನ್ನು ಗಮನಿಸಿದಾಗ ಇಂಗ್ಲಿಷಿನ ***"Ballad"*** ಪದಕ್ಕೆ ಸಂವಾದಿಯಾಗಿ 'ಲಾವಣಿ' ಎಂಬ ಶಬ್ದ ಬಳಸುವುದು ಸೂಕ್ತ ಎನ್ನಬಹುದು.

"ಉತ್ತರ ಕರ್ನಾಟಕದ **ಲಾವಣಿ, ಗೀಗೀ** ಪರಂಪರೆಗಳು ಆದಿಲ್‌ಶಾಹಿಗಳ ಷಾಹಿರಗಾಣಿಯ ಪ್ರಭಾವಕ್ಕೊಳಗಾಗಿದ್ದರೂ, ಮಹಾರಾಷ್ಟ್ರದ **ತಮಾಶಾ, ಪೊವಾಡಾ ಮತ್ತು ಲಾವಣಿ** ಮೊದಲಾದವುಗಳ ಪರಿಣಾಮವನ್ನು ಹೀರಿಕೊಂಡಿದ್ದರೂ ತಮ್ಮ ಕನ್ನಡದ ಮೂಲಸತ್ವಗಳನ್ನು ಎಂದೂ ಕಳೆದುಕೊಳ್ಳಲಿಲ್ಲ. ಅಷ್ಟೇ ಅಲ್ಲ ಎಷ್ಟೋ ಸಲ **'ಖವಾಲಿ'** ಗೀತೆಗಳ ಮತ್ತು **'ಗಜಲ್'**ಗಳ ಮಾದರಿಯೂ ಕೂಡ ಇವರ ಹಾಡುಗಳ ಅನುಕರಣೆಗೆ ಆಧಾರವಾಯಿತು. **'ಡಫ್'** ಎನ್ನುವ ಮೂಲ **'ಪಾರ್ಸಿ'** ಶಬ್ದ ಕನ್ನಡಕ್ಕೆ ಬಂದು **'ಡಪ್ಪ'** ಆಯಿತು. ಡಪ್ಪಿನ ಗತ್ತು, ಡಪ್ಪಿನ ಗತಿಯಾಯಿತು. ಅದರ ತಾಳಮೇಳಗಳು ಅದರ ಡೌಲಿನ ತಾಳ ಮೇಳಗಳನ್ನು ಇಂದಿಗೂ **ಲಾವಣಿ** ಮೇಳಗಳಲ್ಲಿ ಕಾಣಬಹುದಾಗಿದೆ."[೧೫] ಮರಾಠಿಯ ತಮಾಶಾ, ಪೊವಾಡಾ ಮತ್ತು ಲಾವಣಿ ಈ ಮೂರು ಕಲಾ ಮೇಳಗಳಪ್ರಭಾವ ಲಾವಣಿ ಗೀ ಗೀ ಹಾಡುಗಳ ಮೇಲೆ ಆಗಿರುವ ಸಾಧ್ಯತೆಗಳಿವೆ. ಇವುಗಳ ಸಂಕ್ಷಿಪ್ತ ಪಕ್ಷಿನೋಟ ಈ ಕೆಳಗಿನಂತಿದೆ.

---

೧೨. ದೇವುಡು : *'ಕರ್ನಾಟಕ ಸಂಸ್ಕೃತಿ,'* ೧೯೬೧, ಪುಟ-೨೦.

೧೩. ಡಾ. ಜೀ.ಶಂ. ಪರಮಶಿವಯ್ಯ : *'ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು'*, (ಪಿಎಚ್.ಡಿ ಮಹಾಪ್ರಬಂಧ). ೧೯೭೫, ಪುಟ, ೫೪.

೧೪. ವಿವರಣೆಗೆ ನೋಡಿ: ಅದೇ ಪುಟ-೫೪

೧೫. ಡಾ.ಹರಿಲಾಲ ಪವಾರ : *'ಜನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ'*; ೨೦೦೨, ಪುಟ, ೨,೩.

ತಮಾಶಾ–ಪೊವಾಡಾ ಮತ್ತು ಲಾವಣಿ ಮೇಳಗಳು :

ಮಹಾರಾಷ್ಟ್ರದಲ್ಲಿ **ತಮಾಶಾ, ಪೊವಾಡಾ** ಮತ್ತು **ಲಾವಣಿ** ಮೇಳಗಳಿಗೆ ಸುಮಾರು ೩೦೦ ರಿಂದ ೩೫೦ ವರ್ಷಗಳ ಪ್ರಾಚೀನ ಪರಂಪರೆಯಿದೆ. ಈ ಕಲೆಗಳು ಸಾಕಷ್ಟು ಏರಿಳಿತಗಳ ಮಧ್ಯೆಯೂ ಕಲ್ಲು–ಮುಳ್ಳಿನ ದಾರಿಗಳನ್ನು ಸವೆದು ಇಂದು ಉತ್ತುಂಗದ ಸ್ಥಾನದಲ್ಲಿವೆ. **ತಮಾಶಾ** ಇದೊಂದು ಲೋಕಪ್ರಿಯ ಪ್ರಾಯೋಗಿಕ ಕಲಾಪ್ರಕಾರ. ಬಹುಜನ ಸಮಾಜದ (ಸರ್ವೇಸಾಮಾನ್ಯ) ಜನರಿಗೆ ಮನರಂಜನೆ ಒದಗಿಸುವಲ್ಲಿ ತಮಾಶಾ ಕಲಾಕಾರರು ಯಶಸ್ವಿಯಾದರು. ಹಾಗೇನೆ **ಪೊವಾಡಾ** ಕಲಾಕಾರರು ಇದರಿಂದ ಹೊರತಾಗಿಲ್ಲ. **ಗೊಂಧಳಿ, ಭರಾಡಿ, ಚಿತ್ರಕಥಿ, ವಾಘೇ** ಈ ಸಮಾಜದ ಕಲಾಕಾರರು ಹಳ್ಳಿ–ನಗರಗಳನ್ನು ಸುತ್ತಾಡಿ ಗ್ರಾಮೀಣ ಜನರಿಗೆ ತಿಳಿಯುವ ಸರಳ ಭಾಷೆಯಲ್ಲಿ ಪೊವಾಡಾಗಳ ಮುಖಾಂತರ ವೀರ–ಸಾಹಸ ಗಾಥೆಗಳನ್ನು ಹೇಳಿ ಥಕ–ಥೈ ಎಂದು ಕುಣಿದು ಕುಪ್ಪಳಿಸಿ ಮನರಂಜನೆ ನೀಡಿದ್ದಾರೆ. ಲಾವಣಿಯಲ್ಲಿ ನೀತಿಗಿಂತ ಶೃಂಗಾರಕ್ಕೆ ಹೆಚ್ಚು ಪ್ರಾಶಸ್ತ್ಯ. ಶೃಂಗಾರ, ಗೇಯತೆ ಲಾವಣಿಯ ಪ್ರಮುಖ ಲಕ್ಷಣಗಳು. ಲೌಕಿಕ, ಪೌರಾಣಿಕ, ಆಧ್ಯಾತ್ಮಿಕ ವಿಷಯಗಳು ಇದರಲ್ಲಿರುತ್ತವೆ. **'ವೀರರಸ ಇಲ್ಲದೆ ಪೊವಾಡಾಕ್ಕೆ ಮಹತ್ವವಿಲ್ಲ ಶೃಂಗಾರವಿಲ್ಲದೆ ಲಾವಣಿಗೆ ಮಹತ್ವವಿಲ್ಲ'**. ಎಂದು ಮರಾಠಿಗರು ಹೇಳುವಂತೆ ನೀತಿಗಿಂತ ಶೃಂಗಾರಕ್ಕೆ ಹೆಚ್ಚು ಪ್ರಾಶಸ್ತ್ಯ ಎನ್ನುವುದು ಸ್ಪಷ್ಟ.

೧. **ತಮಾಶಾ :** ಮಹಾರಾಷ್ಟ್ರದ ನೃತ್ಯ ಪ್ರಕಾರಗಳಲ್ಲಿ ತಮಾಶಾ ಒಂದು ಲೋಕಪ್ರಿಯ ಕಲೆ. ರಂಜನ ಮತ್ತು ಪ್ರಭೋದನ ಇದು ಬಹುಜನ ಸಮಾಜದ ಮನರಂಜನೆ. ಖಾನದೇಶ, ಪಶ್ಚಿಮ ಮಹಾರಾಷ್ಟ್ರ, ಮತ್ತು ಮರಾಠವಾಡ ಇಲ್ಲಿಯ ಕಲಾಕಾರರು ತಮಾಶಾ ವಿಕಾಸಕ್ಕೆ ಪ್ರೋತ್ಸಾಹಿಸಿದರು. ತಮಾಶಾ ಮೌಖಿಕ ಪರಂಪರೆ ***(Oral Tradition)***ಯಿಂದ ಬಂದ ಕಲಾ ಪ್ರಕಾರ. **ಗೊಂಧಳ, ಜಾಗರಣ, ಕಲ್ಗಿ, ತುರಾ, ದಂಡಾರಿ, ಸೊಂಗಿ, ಭಜನಿ, ಭರೂಡ, ಮಹಿಳೆಯರ ನೃತ್ಯ, ಗೀತೆ, ಪ್ರಯೋಗ, ರೂಪ** ಈ ಕಲಾ ಪ್ರಕಾರಗಳಿಂದ ತಮಾಶಾದ ಉದ್ಭವ ಆಗಿರುತ್ತದೆ ಎಂದು ವಿದ್ವಾಂಸರ ಅಭಿಪ್ರಾಯ. ತಮಾಶಾದಲ್ಲಿ ಗಣ, ಗೌಳಣ, ಧಾರ್ಮಿಕ ಮೊದಲಾದ ಅಂಶಗಳು ಸಮಾವೇಶಗೊಂಡಿರುತ್ತದೆ. ಇದು ಮನೋರಂಜನೆಗಾಗಿ ಹುಟ್ಟಿಕೊಂಡಿರುವ ಕಲೆ. ಈ ಶಬ್ದದ ಅರ್ಥ ಮೂಲ **ಪರ್ಶಿಯನ್** ಶಬ್ದವಾದ ***'Fun or Entertainment'*** (ಮನೋರಂಜನ) ದಿಂದ ಬಂದಿದೆ ಎನ್ನುತ್ತಾರೆ. ಮರಾಠಿ ಸಂಸ್ಕೃತಿಯಲ್ಲಿ ಸುಮಾರು ೩೦೦ ರಿಂದ ೩೫೦ ವರ್ಷಗಳ ಪೂರ್ವದಲ್ಲಿ ಜನಸಾಮಾನ್ಯರಿಗೆ ಮನರಂಜನೆ ಒದಗಿಸುವುದಕ್ಕಾಗಿ ತಮಾಶಾಗಳಂಥ ನಾಟ್ಯಾತ್ಮಕ ಕಲಾ ಪ್ರಕಾರಗಳು ಹುಟ್ಟಿಕೊಂಡವು. ಆರಂಭದಲ್ಲಿ ಪ್ರಚಾರದಲ್ಲಿದ್ದ ಕಲೆಗೂ ಹಾಗೂ ಇಂದು ಪ್ರಚಾರದಲ್ಲಿರುವ ತಮಾಶಾ ಕಲೆಗೂ ಸಾಕಷ್ಟು ರೂಪ ಸ್ವರೂಪಗಳಲ್ಲಿ ಬದಲಾವಣೆಗಳಾಗಿವೆ. **ಪೇಶ್ವೆಯರ** ಮತ್ತು **ಶಿವಾಜಿ ಮಹಾರಾಜರ (ಮರಾಠಿಶಾಹಿ)** ಕಾಲದಲ್ಲಿ ತಮಾಶಾ ಕಲೆಗಳಿಗೆ ಹೆಚ್ಚು ಪ್ರಚಾರ ದೊರೆಯಿತು. **ತಮಾಶಾ, ಪೊವಾಡಾ** ಮತ್ತು **ಲಾವಣಿ** ಕಲಾಪ್ರಕಾರಗಳು ಅಂದು ಪ್ರಚಾರದಲ್ಲಿದ್ದು, ಪೇಶ್ವೆ ಕಾಲದಲ್ಲಿ **ಹೊನಾಜಿ** ಮತ್ತು **ರಾಮಜೋಶಿ** ಎನ್ನುವ ಪ್ರಸಿದ್ಧ

ತಮಾಶಾ **ಶಾಹೀರಗಳಿದ್ದರು** ಎಂಬುದು ಬಹಳ ಮುಖ್ಯ. ಅಂದು ರಾಜದರ್ಬಾರದಲ್ಲಿ ಶಾಹೀರಗಳಿಗೆ ಸಂಭಾವನೆ ಅಥವಾ ಬಕ್ಷಿಸ (ಬಿದಾಗಿ) ಕೊಡುವುದರ ಜೊತೆಗೆ ರಾಜಾಶ್ರಯವೂ ಇತ್ತು. ತಮಾಶಾದಲ್ಲಿ ಸಾಮಾನ್ಯ ಜನರ ಭಾವನೆ ಪ್ರೀತಿ–ಪ್ರಣಯ, ಹಾಸ್ಯ–ವಿನೋದ, ಸಿಟ್ಟು–ಸಿಡುಕ, (ರಾಗಲೋಭ) ಶೃಂಗಾರ ಭಾವನೆ ಮುಂತಾದ ವಿಷಯಗಳು ಸಾಮಾನ್ಯ ಜನರ ಕವಿತೆಗಳಾದವು."[೧೬]

ತಮಾಶಾದ ಉಗಮ ೧೬೮೦ ರಿಂದ ೧೭೦೭ರ ಕಾಲಾವಧಿಯಲ್ಲಿ ಆಗಿದೆ ಎನ್ನುತ್ತಾರೆ. **ಔರಂಗಜೇಬನ** ಸೈನಿಕರು ಸುಮಾರು ೨೫ ವರ್ಷಗಳವರೆಗೆ ಮರಾಠಾ ಪ್ರದೇಶದಲ್ಲಿ ಡೇರೆಗಳನ್ನು ಹಾಕಿಕೊಂಡು ನೆಲೆಯೂರಿದ್ದರು. ಇವರು ಕುಟುಂಬದಿಂದ ದೂರ ಇದ್ದುದರಿಂದ ಇವರಿಗೆ ಮನರಂಜನೆ ಒದಗಿಸುವುದಕೋಸ್ಕರ ಸ್ಥಳೀಯ **ಮಾಂಗ, ಮಹಾರ, ಗೊಂಧಳಿ** ಮತ್ತು **ಡೊಂಬಾರಿ** ಜಾತಿಯ ಕಲಾಕಾರರನ್ನು ಕರಿಸಿ ಅವರಿಗೆ **'ನಾಚ್'** (ನೃತ್ಯ) ಕಾರ್ಯಕ್ರಮ ಮಾಡಲು ಹೇಳುತ್ತಿದ್ದರು. ಉತ್ತರ ಭಾರತದಿಂದ ಬಂದ ಔರಂಗಜೇಬನ ಸೈನಿಕರಿಗೆ ಅಲ್ಲಿಯ ನಾಚ್ ಮಾಡುವ **'ನಾಯ್ಕಿಣಿ'** (ಸ್ತ್ರೀ ವೇಷ) ಪಾತ್ರ ಗೊತ್ತಿತ್ತು. ಆದರೆ ಇಲ್ಲಿ ನಾಯ್ಕಿಣಿ ಪಾತ್ರಕ್ಕೆ ಯಾರನ್ನು ಆಯ್ಕೆ ಮಾಡುವುದೆಂಬ ಪ್ರಶ್ನೆ ಕಾಡಿತು. ಕೊನೆಗೆ ಸ್ಥಳೀಯ ಯುವಕರಿಂದಲೇ ಮಾಡಿಸಿದರೆ ಉತ್ತಮವೆಂದು ತೀರ್ಮಾನಿಸಿ, ಮೀಸೆ ಬರದ ಸುಂದರ ಯುವಕರಿಂದಲೇ ಸ್ತ್ರೀವೇಷ ಹಾಕಲು ಹೇಳುತ್ತಿದ್ದರು. ಸೈನಿಕರ ಮಾತಿಗೆ ಮನ್ನಣೆ ಕೊಟ್ಟು ಯುವ ಕಲಾಕಾರರು ಸ್ತ್ರೀವೇಷ ಹಾಕಿ **ಗಾನ–ನಾಚ್** (ಗೀತೆ–ನೃತ್ಯ) ಮಾಡಿ ಮನರಂಜನೆ ನೀಡಿದರು. ಇದರಿಂದ ಸಂತುಷ್ಟರಾದ ಸೈನಿಕರು **'ಏ ತಮಾಶಾ ಬಹುತ್ ಅಚ್ಚಾ ಹಯ್'** (ಈ ತಮಾಶಾ ಬಹಳ ಚೆನ್ನಾಗಿದೆ) ಎಂದು ಕೊಂಡಾಡಿದರು. ಈ ಕಲೆಯು ಮುಂದೆ ಪ್ರಚಾರಕ್ಕೆ ಬಂದು ಜನಪ್ರಿಯ ಲೋಕಕಲೆ ಎನಿಸಿತು.

ತಮಾಶಾ ಸ್ವರೂಪ : ಇದರಲ್ಲಿ ಮುಖ್ಯವಾಗಿ ಐದು ಭಾಗಗಳಿರುತ್ತವೆ. ೧. **ಗಣ** (ಗಣಪತಿ) ೨. **ಗೌಳಣ** (ಗೌಳಗಿತ್ತಿ) ೩. **ಲಾವಣಿ**(ದೀರ್ಘ ಲಾವಣಿ ಹಾಡು) ೪. **ಬತಾವಣಿ** (ವಿಷಯ ಪ್ರಸ್ತಾವನೆ, ವಿವರಣೆ ಮತ್ತು ವಿನೋದ ನುಡಿಗಳನ್ನು ಹೇಳುವುದು) ಹಾಗೂ ೫. **ವಗ** (ಪಾತ್ರ). ತಮಾಶಾ ಆರಂಭ ಆಗುವ ಮೊದಲು ಗಣ ಸ್ತೋತ್ರ ಮಾಡುತ್ತಾರೆ. ಆಮೇಲೆ ಗೌಳಣ ಹಾಲಿನ ಕೊಡವನ್ನು ತಲೆ ಮೇಲೆ ಹೊತ್ತು ವೈಯ್ಯಾರ ಬೀರುತ್ತ ರಂಗ ಪ್ರವೇಶಿಸುತ್ತಿದ್ದಂತೆ **'ಸೊಂಗಾಡ್ಯಾ'** ಮಧ್ಯ–ಮಧ್ಯದಲ್ಲಿ ಹಾಸ್ಯ ಚಟಾಕಿಗಳನ್ನು (ದೂತಿಯಂತೆ) ಹೇಳುವುದರ ಜೊತೆಗೆ ಲಾವಣಿಗಳನ್ನು ಹಾಡಿ ವಿನೋದ ವಾತಾವರಣ ಸೃಷ್ಟಿಸುತ್ತಾನೆ. ತಮಾಶಾದಲ್ಲಿ 'ಬತಾವಣಿ' ಅನ್ನುವ ಪಾತ್ರ ಇದೆ. ಇದು **ಇಂಗ್ರೇಜಿ ನಾಟಕ**ದಿಂದ ಬಂದಿರುತ್ತದೆ. ತಮಾಶಾದಲ್ಲಿ ಆರಂಭದಲ್ಲಿ ಸ್ತ್ರೀ ಪಾತ್ರವಿರಲಿಲ್ಲ. (ನಾಟಕಗಳಲ್ಲಿ ಸ್ತ್ರೀ ಭೂಮಿಕಾ ಪುರುಷರೇ ಮಾಡುತ್ತಿದ್ದರು) ೧೮೮೭–೯೦ರ ಮೊದಲಿಗೆ ತಮಾಶಾದಲ್ಲಿ ಸ್ತ್ರೀ ಪಾತ್ರ ಬಂದಿರಬೇಕು. ನಂತರ ನಾಟಕದಲ್ಲಿ ಇದರ ಆಗಮನ. ತಮಾಶಾದಲ್ಲಿ ಸ್ತ್ರೀ

---

೧೬. ಪಾಂಡುರಂಗ ಲಕ್ಷ್ಮಣ : ವಿವರಣೆಗೆ ನೋಡಿ: '*ತಮಾಶಾ ಕಲಾ ಅಂತರಂಗ ಆಣಿ ತರಂಗ*', ಜಯಿತಾಪಕರ. ೧೯೮೬.

ಪಾತ್ರ ಮಾಡುವವರಿಗೆ **'ಮೌಸಿ'** ಅನ್ನುತ್ತಾರೆ. ತಮಾಶಾದಲ್ಲಿ **'ಮೌಸಿ'** ಪಾತ್ರ ಬಂದ ಮೇಲೆ **'ನಾಚ್ಯಾ'**ನ ಪಾತ್ರ ಖಾಯಂ ಆಯಿತು. ಏಕೆಂದರೆ 'ನಾಚ್ಯಾ' ಅಷ್ಟೊಂದು ಮಹತ್ವದ ಪ್ರಭಾವ ಬೀರುತ್ತಿದ್ದನು. ತಮಾಶಾದಲ್ಲಿ **ದಶಾವತಾರ, ಗೊಂಧಳ, ಕೀರ್ತನ, ವಾಗ್ಯಾಮುರಳಿ, ಖಂಡೋಬಾ, ಭಕ್ತಿಗೀತೆ** ಇವೆಲ್ಲ ಘಟಕಗಳು ಬರುತ್ತವೆ. ಹಿನ್ನೆಲೆಯ ವಾದ್ಯಗಳಾಗಿ ಢೋಲಕಿ, ತುಂತುಣಿ, ತಾಳ, ಡಫ್, ಕಡಾ (ಲೇಜಿಮ್) ಹಾರ್ಮೋನಿಯಂ, ಗುಂಗರು (ಕಾಲ್ಗೆಜ್ಜೆ), ಡ್ರಮ್ ಮೊದಲಾದ ವಾದ್ಯಗಳನ್ನು ಬಳಸುತ್ತಾರೆ. ಸುಂದರ ಮಹಿಳೆಯರು ಕಾಲಲ್ಲಿ ಮೂರ್‍ನಾಲ್ಕು ಕಿಲೋದಷ್ಟು ಭಾರವಿರುವ ಗೆಜ್ಜೆ ಸರಗಳನ್ನು ಕಟ್ಟಿಕೊಂಡು ಹಾಡುಗಳಿಗೆ ತಕ್ಕಂತೆ ನೃತ್ಯ ಮಾಡುತ್ತಾರೆ. ಮಹಿಳಾ ಭೂಮಿಕಾ ಪಾತ್ರದಲ್ಲಿ **'ನಾಚ್ಯಾ'** (ನೃತ್ಯ ಮಾಡುವವನು) ಮತ್ತು **ಶಾಹೀರ** (ಗೀತ ಹಾಡುವ) ಹಾಗೂ **ಸೊಂಗಾಡ್ಯಾ** (ಹಾಸ್ಯ ವಾತಾವರಣ ಸೃಷ್ಟಿಸುವವ) ಪ್ರಮುಖ ಸೂತ್ರಧಾರರಿರುತ್ತಾರೆ. ತಮಾಶಾದಲ್ಲಿ ಹಾಸ್ಯ, ವಿನೋದ, ಹಾಡು, ಮತ್ತು ನೃತ್ಯಗಳ ಸುರಿಮಳೆ ಇರುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಚಿತ್ರರಂಗದ ಪರಿಣಾಮ ನಾಟಕ ಮತ್ತು ತಮಾಶಾಗಳ ಮೇಲೆ ಆದವು. ತಮಾಶಾ ಮತ್ತು ನಾಟಕಗಳಲ್ಲಿ ಅಶ್ಲೀಲ ಚಿತ್ರಗಳನ್ನು ಹಾಡುವುದು ಬ್ರೀಟಿಷರ ಗಮನಕ್ಕೆ ಬಂತು. ಆಗ ೧೯೪೦ರ ಕಾಲಾವಧಿಯಲ್ಲಿ **'ಅಶ್ಲೀಲ'** ಹಾಡುಗಳನ್ನು ತಮಾಶಾ ಮತ್ತು ನಾಟಕಗಳಲ್ಲಿ ಹಾಡುವುದನ್ನು ನಿಷೇಧ ಮಾಡಿದರು. ೧೯೫೦ರ ನಂತರ ತಮಾಶಾದಲ್ಲಿ ಅದೇ ಸ್ವರೂಪವನ್ನು ಉಳಿಸಿಕೊಂಡು ಸ್ವಲ್ಪ ಬದಲಾವಣೆ ಮಾಡಿ ಆಡತೊಡಗಿದರು. ಉದಾ: **ಗಣ, ಗೌಳಣ, ಲಾವಣಿ, ಬತಾವಣಿ** ಮತ್ತು **ವಗ** ಹಾಗೆ ಉಳಿಸಿಕೊಂಡು ರಂಗ, ವೇಷ ಭೂಷಣ, ಪ್ರಕಾರದ ನೇಪಥ್ಯ ಮೊದಲಾದವುಗಳು ಬದಲಾದವು. ವಾದ್ಯ ಪರಿಕರಗಳಲ್ಲಿ ತಬಲಾ, ಪೇಟಿಗಳು ಬಂದವು. ವೇಷ ಭೂಷಣಗಳಲ್ಲಿ ಮೋತಿಹಾರ, ಮುಕುಟ, ಜರಿಬಟ್ಟೆ, ಕಮರ(ಸೊಂಟ)ಪಟ್ಟಿ, ಝಗಮಗಿಸುವ ರಂಗು ರಂಗಿನ ಬಟ್ಟೆಗಳು ಬಂದವು. ಸಿನೇಮಾಗಳಲ್ಲಿ ಹೆಣ್ಣುಮಕ್ಕಳು ಹಾಡುವ ಕ್ಯಾಬರೆ ಸನ್ನಿವೇಷ ಅಥವಾ ಮೈ ಬಿಚ್ಚಿ ಹಾಡುವ ಪ್ರಸಂಗ, ಡಕಾಯಿತರು, ಬಾಟ್ಲಿ ಹಿಡಿದು ಶರೆ--ಶಿಂಧಿ ಕುಡಿಯುವ ಪ್ರಸಂಗ, ಅಗರ್ಭ ಶ್ರೀಮಂತನ ಪಾತ್ರ, ದರ್ಪದಿಂದ ವರ್ತಿಸುವ ಖಳನಾಯಕ ಮುಂತಾದ ಪಾತ್ರಗಳಿರುವಂಥ ಕಥಾನಕಗಳಿದ್ದುದರಿಂದ ತಮಾಶಾದಲ್ಲಿ ಪಾತ್ರ ಮಾಡುತ್ತಿದ್ದ ಕಲಾಕಾರರಿಗೂ ಸಿನೇಮಾಗಳಲ್ಲಿ ನಟಿಸುವ ಅವಕಾಶಗಳು ದೊರೆತವು."[೧೭]

ತಮಾಶಾದಲ್ಲಿ ಈಗಾಗಲೇ ಹೇಳಿರುವಂತೆ ಗಣ, ಗೌಳಣ, ಲಾವಣಿ, ಬತಾವಣಿ, ಮತ್ತು ವಗ ಹೀಗೆ ಐದು ಭಾಗಗಳಿರುತ್ತವೆ. ಅವುಗಳ ಸಂಕ್ಷಿಪ್ತ ಮಾಹಿತಿ ಈ ಕೆಳಗಿನಂತಿದೆ.

ಉದಾ: **ಗಣ** (ಸ್ತುತಿ)

"ಗಣರಾಜ ಬುದ್ಧಿಚೆ ಘರ: ಪ್ರಸನ್ನ ಮಜವರ ।
ಅಶಾ ತುಮ್ಹಿ ವೇಳಾ: ಮಹಾರಾಜ ಅಶಾ ತುಮ್ಹಿ ವೇಳಾ ।
ಭರ ಭರಲಿಯ: ಪಾಯಮಧಿ ಚಾಳ ।

೧೭. ಡಾ.ವಿಶ್ವನಾಥ ಶಿಂಧೆ : ವಿವರಣೆಗೆ ನೋಡಿ: **'ಶಾಹರೀ ವಾಙ್ಮಯಚಾ ಧಾರಾ'** ೧೯೯೬.

ಮಿ ದಿನ್ ಆಹೇ ತುಝಾ ದಾಸ: ತಾರಿ ಭಕ್ತಾಸ ।
ತುಮ್ಹಿ ವೇಳೇಲಾ ಝುರ ಝುರ: ದ್ಯಾವೆ ಜ್ಞಾನಾಚೆ ಬಳ ।
ವೈರ್ಯಾನಿ ಭಾಂಧಿಲಿ ಕಂಬರ : ಶಾಹೀರ ಝಾಲೆ ಶಂಭರ ॥"[೧೮]

ಕನ್ನಡ ಅನುವಾದ: "ಬುದ್ಧಿಯ ಒಡೆಯ ಗಣರಾಜ ಪ್ರಸನ್ನಾಗು ನಿನಗೆ ವಂದಿಸುವೆ ಆಶೀರ್ವಾದ ಮಾಡು. ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ನಿನ್ನ ದಾಸನಾಗಿರುವೆ. ಈ ವೇಳೆಯಲ್ಲಿ ಎಲ್ಲ ಪ್ರಕಾರದ ಜ್ಞಾನದ ಬಲ ಕೊಡು. ವೈರಿಗಳಂತೆ ನೂರಾರು ಜನ ಶಾಹೀರಗಳಾಗಿದ್ದಾರೆ. ಹೀಗೆ ತಮಾಶಾ ಆರಂಭವಾಗುವ ಮೊದಲು ಎಲ್ಲ ಕಲಾಕಾರರು ಗಣರಾಜನನ್ನು ಭಕ್ತಿಪೂರ್ವಕವಾಗಿ ಕೈ ಜೋಡಿಸಿ ಬೇಡಿಕೊಳ್ಳುತ್ತಾರೆ.

ಗೌಳಣ: ನಮ್ಮ ರಾಧಾನಾಟ, ಕೃಷ್ಣ ಪಾರಿಜಾತದಲ್ಲಿ ನಡೆಯುವಂತೆ ಗದ್ಯ ಪದ್ಯದಲ್ಲಿ ಕಥಾನಕ ಆರಂಭವಾಗುತ್ತದೆ. ಪಾತ್ರಗಳಲ್ಲಿ ಕೃಷ್ಣ, ರಾಧಾ, ಗೌಳಣ, ಮೌಸಿ, ಸೊಂಗಾಡ್ಯಾ ಮುಂತಾದವರಿರುತ್ತಾರೆ. ದೂತಿಯಂತೆ ಇಲ್ಲಿ ಗೌಳಣ ಮತ್ತು ಸೊಂಗಾಡ್ಯಾ ಮಧ್ಯ ಮಧ್ಯದಲ್ಲಿ ಹಾಸ್ಯ ಮಾತುಗಳನ್ನು ಮತ್ತು ಕೊಂಕು ನುಡಿಗಳನ್ನು ಹೇಳಿ ಜನರಿಗೆ ಮನರಂಜನೆ ಒದಗಿಸುತ್ತಾರೆ. ಮಥುರಾ ಪಟ್ಟಣದ ಚಿತ್ರಣ, ಚೌಕ, ಬಜಾರ, ಕುಂಜವನ, ಮೊದಲಾದ ಸನ್ನಿವೇಷಗಳನ್ನು ಕುರಿತು ವರ್ಣನೆ ಮಾಡುತ್ತಾರೆ. ಉದಾ: ಒಂದು ಗೀತೆ:

"ಬಾಜಾರ ಮೊಠಾ ಲವಕರ ಗಾಠಾ।
ಮಥುರೇಚ್ಯಾ ಹಾಟ ಚಲಾ ನಿಘಾ ನಿಘಾ ಗ ।
ವರಚ್ಯಾ ಆಳಿಚ್ಯಾ ಚಂದ್ರಾವಳಿಚ್ಯಾ ।
ಘಳಿಲಾ ಜಾವೂನ ಸಾಂಗಾ ಸಾಂಗಾ ಗ ।
ಆರಂಭಲಾ ವಿಲುಂಬ ಝಾಲಾ ।
ಸೂರ್ಯಬಿಂಬ ವರ ಆಲಾ ಬಘಾ ಬಘಾ ಗ"[೧೯] ॥

ಕನ್ನಡ ಅನುವಾದ: "ಮಥುರಾದ ಸಂತೆ ದೊಡ್ಡದಾಗಿದ್ದು ಹಾಲು ಮೊಸರು ಮಾರಲು ಸಂತೆಗೆ ಹೋಗುವುದಿದೆ. ಅಕ್ಕ-ಪಕ್ಕದ ಓಣಿಯ ಗೌಳಗಿತ್ತಿಯರಿಗೆ ಅವಸರದಿಂದ ಬೇಗನೆ ತಯಾರಾಗಿ ಬರಲು ಹೇಳಿರಿ. ಈಗಾಗಲೇ ಸೂರ್ಯ ನೆತ್ತಿಯ ಮೇಲೆ ಬಂದಿರುತ್ತಾನೆಂದು ಚಡಪಡಿಸುತ್ತಾರೆ".

ಥಾಟ-ಬಾಟದಿಂದ ತಯಾರ ಆಗಿ ಹಾಲು ಮೊಸರಿನ ಗಡಿಗೆಗಳನ್ನು ತಲೆಮೇಲೆ ಹೊತ್ತು ಮಥುರಾ ಸಂತೆಗೆ ಹೋಗೋಣ ಎಂದು ಗೌಳಗಿತ್ತಿಯರು ಹಾಡುಹೇಳುತ್ತ, ವೈಯ್ಯಾರ ಬೀರುತ್ತ ಬರುವ ಚಿತ್ರಣ ಬಲು ಮೋಜಿನಿಂದ ಕೂಡಿರುತ್ತದೆ.

---

೧೮. ಡಾ. ವಿಶ್ವನಾಥ ಶಿಂಧೆ : *'ಸಾವಳಜಕರಾಂಚಾ ತಮಾಶಾ ಇತಿಹಾಸ ಆಣಿ ವಾಙ್ಮಯ'*, (ಉಮಾಜಿ, ತಾತ್ಯಾ ವ ಶಂಕರ ಯಾಂಚ್ಯಾ ಲಾವಣ್ಯಾ, ವಗ) ೨೦೧೩, ಪುಟ-೩೮.
೧೯. ಅದೇ ಪುಟ ೪೫

ಲಾವಣಿ: ತಮಾಶಾಗಳಲ್ಲಿ ಲಾವಣಿ ಹಾಡುಗಾರಿಕೆ ಅತೀ ಮಹತ್ವದ್ದು. ಶಾಹರೀ ಅಥವಾ ಭೇದಿಕ ಲಾವಣಿ, ಬೈಟಕದ ಲಾವಣಿ ಮತ್ತು ತಮಾಶಾ ಅಥವಾ ಫಡಾಚಿ ಲಾವಣಿ ಎಂಬ ಮೂರು ಪ್ರಭೇದಗಳಿವೆ. ಭೇದಿಕ ಲಾವಣಿಯಲ್ಲಿ ಆಧ್ಯಾತ್ಮಿಕ ಪ್ರಶ್ನೆ ಇರುತ್ತದೆ. ಬೈಟಕ ಲಾವಣಿಯಲ್ಲಿ ತಬಲಾ ಪೇಟಿಯ ಸಹಾಯದಿಂದ ಗಾಯನ ಮಾಡುತ್ತಾರೆ. ಜನಸಾಮಾನ್ಯರ ಎದುರಿಗೆ ಹಾಡುವ ಲಾವಣಿಗಳಿಗೆ ಫಡಾಚಿ ಲಾವಣಿ ಎಂದು ಕರೆಯುತ್ತಾರೆ. ಉತ್ತರ ಹಿಂದುಸ್ತಾನಿ ಠುಮರಿ ಹಾಡುವ ಧಾಟಿಯ ರಾಗದ ಮೇಲೆ ಲಾವಣಿ ಹಾಡುತ್ತಾರೆ. ಲಾವಣಿಯಲ್ಲಿ ಲೌಕಿಕ ಜೀವನದ ಚಿತ್ರಣ, ವಿವಾಹ ಮಿಲನ, ಯುದ್ಧಕ್ಕೆ ಹೋಗುವ ಪ್ರಸಂಗ, ಪತಿಯ ವಿರಹವೇದನೆ, ಪುನರ್ ಮಿಲನ, ಸಾತ್ವಿಕ ಪ್ರೇಮ, ವ್ಯಭಿಚಾರ, ಪ್ರಣಯ, ಬಂಜೆಯ ಗೋಳು, ಬಸುರಿಯ ಬಯಕೆ, ಬರಗಾಲದ ವರ್ಣನೆ, ಸಮಾಜ ಜೀವನದ ಚಿತ್ರಣ ಮೊದಲಾದ ವಿಷಯಗಳ ಮೇಲೆ ಲಾವಣಿ ರಚಿಸುತ್ತಾರೆ. ಉದಾ: ಒಂದು ಲಾವಣಿ ಗೀತೆ:

"ವಯ ಬಾರಾ ತೇರಾತ ಆಯನ ಆಲಿ ಭರಾತ ।
ಸುಂದರ ಖಾಸ್ ಸುಬಕ್ ಠೇಂಗಣಿ" ॥

ಕನ್ನಡ ಅನುವಾದ: "ಹನ್ನೆರಡು-ಹದಿಮೂರರ ಹದಿಹರೆಯಕ್ಕೆ ಬಂದ ಚಂದುಳ್ಳಿ, ಗಿಡ್ಡಪೋರಿಯಾದರೂ ನೋಡಲು ಅತೀ ಸುಂದರವಾಗಿದ್ದಾಳೆ".

ಬತಾವಣಿ: ಇಲ್ಲಿ ವಿನೋದ ಪ್ರಸಂಗ, ಹಾಸ್ಯ ನುಡಿಗಟ್ಟುಗಳನ್ನು ಹೇಳಿ ಜನರನ್ನು ಸಂತೋಷಪಡಿಸುವುದೇ ಇವರ ಮುಖ್ಯ ಉದ್ದೇಶ. ನಮ್ಮಲ್ಲಿಯ ದೂತಿಯಂತೆ ಮಧ್ಯಮಧ್ಯದಲ್ಲಿ ಮಾತುಗಳನ್ನು ಹೇಳಿ ಪ್ರೇಕ್ಷಕರಿಗೆ ಮನರಂಜನೆ ಒದಗಿಸುತ್ತಾರೆ.

ವಗ: ತಮಾಶಾದಲ್ಲಿ ಯಾವುದೇ ಕಥಾವಸ್ತುವಿರಲಿ ಅದರಲ್ಲಿ ರಾಜ, ರಾಣಿ, ಪ್ರಧಾನ ಮಂತ್ರಿ, ಸಿಪಾಯಿ ಈ ಬಗೆಯ ಪಾತ್ರಗಳಿರುತ್ತವೆ. ಇಲ್ಲಿ ರಾಜನ ಪಾತ್ರ ಸಂಭಾಯಿತ. ಪ್ರಧಾನಿ ಧೂರ್ತ, ಸಿಪಾಯಿ ಚತುರ ಇರುತ್ತಾನೆ. ಸಾಮಾಜಿಕ ವಿಷಯದ ಮೇಲೆ ಕಥಾವಸ್ತು ಇರುತ್ತದೆ. ವಗ ಆರಂಭಿಸುವ ಮೊದಲು ನಾಲ್ಕು ನುಡಿ ಲಾವಣಿ ಹೇಳುತ್ತಾರೆ. ವಗ ಮೌಖಿಕದ ಮೂಲಕ ಕಥೆಗಳಿಗೆ ಸಂವಾದ ಮಾಡುತ್ತ ಹೋಗುತ್ತಾರೆ. ತಮಾಶಾದ ಸೂತ್ರಧಾರ ಕಥಾ ಆರಂಭಿಸುತ್ತಾನೆ. ಇನ್ನುಳಿದವರು ಸಂವಾದ ಮಾಡುತ್ತಾರೆ. ಕಥಾ ವಸ್ತುವಿನ ಪಾತ್ರ ತಯಾರ ಮಾಡುತ್ತಾರೆ. ವಗದಲ್ಲಿ ಪೌರಾಣಿಕ ವಗ, ಐತಿಹಾಸಿಕ ವಗ, ಲೋಕ ಕಥಾತ್ಮಕ ವಗ, ಸಾಮಾಜಿಕ ವಗ ಎಂಬ ಭಾಗಗಳಿವೆ. ಉದಾಹರಣೆಗೆ ಒಂದು ವಗದ ಸನ್ನಿವೇಷ ಹೀಗಿದೆ.

"ಕಚೇರಿ ಭರಲಿ ಆಜ ಇಂದ್ರಾಚಿ ।
ಹರಿಹರ ಸ್ವಾಮಿ ರಾಮಚಂದ್ರಾಚಿ ।
ಕಷ್ಠಿ ಬಳಿರಾಮ ಮುನಿವರ್ಯಾಚಿ ।
ಕಥಾ ಐಕಾ ಚಂದ್ರಭಾನು ರಾಜಾಚಿ ।
ಸಾಂಗತೋ ತುಮ್ಹಾಲಾ ಹೇ_ _ ಹೇ _ _ ಜೀ _ರ್_ ಜೀ_ _ಜೀ ।
ತುಮ್ಹಿ ಘಡಿಭರ ಲಕ್ಷ ಧ್ಯಾ ಪುಡೆ ।
ಮಾಝ್ಯಾ ಶಬ್ದಾಲಾ ಹೇ_ _ಹೇ ಅರ್_ _ದಾಜೀ_ _ತು_ _ರ್ _।"[೨೦]

೨೦. ಅದೇ ಪುಟ-೫೧.

ಕನ್ನಡ ಅನುವಾದ : "ಇವತ್ತು ಇಂದ್ರನ ಸಭೆ ಸೇರಿದೆ. ಈ ಸಭೆಯಲ್ಲಿ ಹರಿಹರ ಸ್ವಾಮಿ, ರಾಮಚಂದ್ರ, ಕಷ್ಕಿ, ಬಳಿರಾಮ ಮುನಿಗಳು ಇದ್ದಾರೆ. ಈಗ ಚಂದ್ರಭಾನು ರಾಜನ ಕಥೆ ಆರಂಭಿಸುತ್ತೇವೆ. ನೀವು ಸ್ವಲ್ಪ ಈ ಕಡೆ ಲಕ್ಷಕೊಟ್ಟು ನನ್ನ ಮಾತುಗಳನ್ನು ಕೇಳಿರಿ" ಎಂದು ಗುಣಗಾನ ಮಾಡುತ್ತಾರೆ. ಮತ್ತೊಂದು ಹಾಸ್ಯದ ಲಾವಣಿ ಹೀಗಿದೆ.

"ನಕಾ ಟಾಕೂನಿ ಜಾವೂ ಗಾವಾ ।
ಡೋಳಾ ಮಾರ್ಝಾ ಪಾಣ್ಯಾತ ಭರಲಾ" ॥

ಕನ್ನಡ ಅನುವಾದ: "ಊರಕಡೆಗೆ ಹೋಗಬೇಡ ನನ್ನ ಕಣ್ಣಲ್ಲಿ ನೀರು ಬರುತ್ತದೆ" ಎಂದು ತಮಾಷೆಯಿಂದ ಮಡದಿಯನ್ನು ಕುರಿತು ಹಾಸ್ಯ ಮಾಡುತ್ತಾನೆ. ಈ ಬಗೆಯ ಅನೇಕ ವಿನೋದ, ಹಾಸ್ಯದ ಲಾವಣಿಗಳನ್ನು ಕೇಳಿ ಪ್ರೇಕ್ಷಕರು **'Once More'** ಎಂದು ಕೂಗಿ ಚಪ್ಪಾಳೆ ತಟ್ಟುತ್ತಾರೆ.

ತಮಾಶಾದಲ್ಲಿ ಹಾಸ್ಯ, ವಿನೋದ, ಹಾಡು ಮತ್ತು ನೃತ್ಯಗಳ ಸುರಿಮಳೆ ಇರುತ್ತದೆ. ಸಧ್ಯ ಮಹಾರಾಷ್ಟ್ರದಲ್ಲಿ ಸುಮಾರು ಹದಿನೆಂಟರಿಂದ ಇಪ್ಪತ್ತು ತಮಾಶಾ (ಫಡ) ಕಂಪನಿಗಳಿವೆ. ಪ್ರತಿವರ್ಷ ಕರ್ನಾಟಕ, ಗುಜರಾತ ಗಡಿಭಾಗಗಳಲ್ಲಿ ಹಾಗೂ ಮಹಾರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ ಸುಮಾರು ಆರು ತಿಂಗಳವರೆಗೆ ತಮಾಶಾ ಕಲಾ ಪ್ರದರ್ಶನ ಮಾಡುತ್ತಾರೆ. ಈ ತಂಡಗಳಲ್ಲಿ ಕೋಲಾಟಿ, ಮಾಂಗ ಮತ್ತು ಮಹಾರ ಜಾತಿಯ ಕಲಾಕಾರರಿರುತ್ತಾರೆ. ಆದಿಲ್‌ಶಾಹಿಗಳ ಕಾಲದಲ್ಲಿ ಉರ್ದು ಭಾಷೆಯ **ಖವಾಲಿ, ಗಜಲ್‌ಗಳ** ಪ್ರಭಾವ ಈ ಕಲೆಯ ಮೇಲೆ ಆಗಿರುವ ಸಾಧ್ಯತೆಗಳಿವೆ. ಮಹಾರಾಷ್ಟ್ರ ಸರ್ಕಾರದ ಸಾಂಸ್ಕೃತಿಕ ವಿಭಾಗದ ವತಿಯಿಂದ ಪ್ರತಿವರ್ಷ ಪುಣೆ, ಅಥವಾ ಮುಂಬೈಯಲ್ಲಿ **'ತಮಾಶಾ'** ಮಹೋತ್ಸವ ಆಚರಿಸುತ್ತಾರೆ. **ಶ್ರೀಮತಿ ವಿಟಾಬಾಯಿ ಭಾವು ಮಾಂಗ ನಾರಾಯಣಗಾಂವಕರ** ಅವರು ಪ್ರಸಿದ್ಧ ತಮಾಶಾ ಕಲಾಕಾರರಾಗಿದ್ದರು. ಅವರ ಹೆಸರಿನ ಮೇಲೆ ಮಹಾರಾಷ್ಟ್ರ ಸರ್ಕಾರದವರು ಉತ್ತಮ ತಮಾಶಾ ಕಲಾಕಾರರಿಗೆ ಪಾರಿತೋಷಕವನ್ನು ನೀಡಿ ಗೌರವಿಸುತ್ತಾರೆ. ತಮಾಶಾ ತಂಡಗಳು ನಾರಾಯಣಗಾಂವ, (ಪುಣೆ ಜಿಲ್ಲೆ) ನಗರ, ನಾಶಿಕ, ಧುಳೆ, ಜಳಗಾಂವ ಮುಂತಾದ ಕಡೆಗಳಲ್ಲಿವೆ. ನಾರಾಯಣಗಾಂವದಲ್ಲಿ ಪ್ರತಿವರ್ಷ ಯುಗಾದಿಯಿಂದ **(ಗುಡಿ ಪಾಡವಾ)** ಅಕ್ಷಯ ತೃತಿಯವರೆಗೆ ನೂರಾರು ತಮಾಶಾ ತಂಡಗಳು ಬರುತ್ತವೆ. ಈ ನುರಿತ ಕಲಾ ತಂಡದವರಿಂದ ತಮಾಶಾ ಕಲೆಯನ್ನು ಕಲಿಯಲು ಸಾವಿರಾರು ಜನ ಇಲ್ಲಿಗೆ ಬರುತ್ತಾರೆ. ಅವರಿಗೆ ಇಳಿದುಕೊಳ್ಳಲಿಕ್ಕೆ ಬಿಡಾರ (ರಾಹುಟಿ) ಹಾಕಿ ವ್ಯವಸ್ಥೆ ಮಾಡಿರುತ್ತಾರೆ. ನಾರಾಯಣಗಾಂವಕ್ಕೆ **'ತಮಾಶಾಚಿ ಪಂಢರಿ'** ಎಂದು ಕರೆಯುತ್ತಾರೆ. ಇದು ಸುಮಾರು ೬೦-೭೦ ವರ್ಷಗಳಿಂದ ನಡೆದು ಬಂದ ಪರಂಪರೆಯಾಗಿದೆ.

೨. ಪೊವಾಡಾ : ದೇಶದ ವಿವಿಧ ಪ್ರದೇಶಗಳಲ್ಲಿ ಪೊವಾಡಾ ಕಾವ್ಯಪ್ರಕಾರ ಪ್ರಚಾರದಲ್ಲಿದೆ. ಉದಾ: ಕಾಶ್ಮೀರ, ಬಂಗಾಲ, ರಾಜಸ್ಥಾನ, ಗುಜರಾತ, ಛತ್ತಿಸಗಡ ಮೊದಲಾದ ಕಡೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಮೂಲ **ಪ್ರಾಕೃತ**

ಶಬ್ದವಾದ **ಪೊವಾಡಾ** ಅಂದರೆ ಕೀರ್ತಿ, ಸ್ತುತಿ, ಸ್ತೋತ್ರ, ವೀರಪರಾಕ್ರಮ, ವಿದ್ವಾನ್ ಮನುಷ್ಯರ ವಿದ್ವತ್, ಶೂರರ ಶಕ್ತಿ, ಸಾಮರ್ಥ್ಯ, ಗುಣ, ಕೌಶಲ್ಯ ಇವುಗಳ ಪೌರಾಣಿಕ ಕಥಾ ಕಾವ್ಯಾತ್ಮಕ ವರ್ಣನೆಯೇ **ಪವಾಡಾ** ಅಥವಾ **ಪೊವಾಡಾ**. ಐತಿಹಾಸಿಕ ವ್ಯಕ್ತಿಯ ಚರಿತ್ರೆಯ ಪ್ರಸಿದ್ಧ ಪ್ರಸಂಗಗಳ ಶಾಹರೀ ಪದ್ಯಾತ್ಮಕ ಸಾಹಿತ್ಯ. ಇವನ್ನು ಪೊವಾಡಾ ಎನ್ನಬಹುದು. ಮುಖ್ಯವಾಗಿ ವೀರ ಶೃಂಗಾರ, ಕರುಣ, ಭಯಾನಕ ರಸಗಳು ಇವುಗಳಲ್ಲಿ ಸಮಾವೇಶಗೊಂಡಿರುತ್ತವೆ. ಶೃಂಗಾರರಸದ ಪೊವಾಡಾ ಇದಕ್ಕೆ ಲಾವಣಿ ಎನ್ನುತ್ತಾರೆ. ಪೊವಾಡಾ ಇದನ್ನು ಸರ್ವೇಸಾಮಾನ್ಯ ಜನರಿಗೆ ತಿಳಿಯುವ ಭಾಷೆಯಲ್ಲಿ ಹೇಳುತ್ತಾರೆ. **ಗೊಂಧಳಿ, ಭರಾಡಿ, ಚಿತ್ರಕಥಿ, ವಾಘೇ** ಇವರು ಊರೂರು ಅಲೆದಾಡಿ ಜನರಿಗೆ ಮನರಂಜನೆ ನೀಡಿ ಪೊವಾಡಾ ಹಾಡುತ್ತಿದ್ದರು. ಇದರಲ್ಲಿ ಅನೇಕ ಜಾತಿಯ ಕಲಾಕಾರರು ಶಾಹೀರ್‌ಗಳಾಗಿ ಹೋಗಿದ್ದಾರೆ. **ಉದಾ: ಗೌಳಿ, ತೇಲಿ, ಸಿಂಪಿ, ಸನಾರ, ಶಿಕ್ಕಲಗಾರ, ಕಾಸರ, ನಾವಿ, ಮಾಳಿ, ವಂಜಾರಿ, ಮುಸಲ್ಮಾನ, ಮಹಾರ, ಮಾಂಗ, ಢೋರ** ಮೊದಲಾದವರು. ಮರಾಠಿ ಸೈನಿಕರ ಹಾಗೆ ಪೊವಾಡಾ ಹಾಡುವವರ ವೇಷಭೂಷಣ ಇರುತ್ತದೆ. ಶಾಹೀರನು ಕುರ್ತಾ, ತಂಗ, ಇಜಾರ, ತಲೆ ಮೇಲೆ ಪಾಗಡಿ, ಎದೆ ಮೇಲೆ ಪಟ್ಟಾ, ಒಂದು ಕೈಯಲ್ಲಿ ಭಾಲಾ (ಕಟ್ಟಿಗೆ) ಮತ್ತೊಂದು ಕೈಯಿಂದ ವರ್ಣನೆ ಮಾಡಿ ಹಾಡುತ್ತಾನೆ. ಇತ್ತೀಚೆಗೆ ಭಾಲಾದ ಬದಲಿಗೆ ಡಫ್ ಹಿಡಿಯುತ್ತಾರೆ. ಒಂದು ಕೈ ಕಿವಿ ಮೇಲೆ, ಮತ್ತೊಂದು ಕೈಯಲ್ಲಿ ತುಂತುಣಿ, ಮತ್ತೊಬ್ಬ ಖಂಜರ ಬಾರಿಸುತ್ತಾನೆ. ಮಗದೊಬ್ಬ ಗುಂಗರು ಕೆಲವು ವೇಳೆ ತೆಂಗಿನಪರಟೆಯಿಂದ ಸಾರಂಗಿ ನುಡಿಸುತ್ತಾನೆ. ಇವರ ವೇಷಭೂಷಣ ಸಾದಾ ಧೋತಿ, ಸದಲಾ, ಪೇಟಾ ಇರುತ್ತದೆ. ಅಲಂಕಾರ ಇದರಲ್ಲಿ ಹೆಚ್ಚಾಗಿ ಕಂಡು ಬರುವುದಿಲ್ಲ. ಆದರೆ ಉಪಮಾ, ರೂಪಕ, ಉತ್ಪ್ರೇಕ್ಷೆ ಅತಿಶಯೋಕ್ತಿ ಇರುತ್ತದೆ. ಇಲ್ಲಿ ಜನಸಾಮಾನ್ಯರಿಗೆ ತಟ್ಟನೆ ತಿಳಿಯುವ ಸರಳ ಭಾಷೆಯ ಅಲಂಕಾರಗಳನ್ನು ಬಳಸುತ್ತಾರೆ.

ಪೊವಾಡಾ ಮರಾಠಿ ಸಾಹಿತ್ಯದ ವಿಶೇಷ ಪ್ರಕಾರ. ಪೇಶ್ವೆ ಕಾಲದಲ್ಲಿ ರಾಜನ ತುಂಬಿತುಳಕುವ (ಭರಭರಾಟ) ವೈಭವದ ಪ್ರಸಂಗದಲ್ಲಿ ಪೊವಾಡಾಗಳನ್ನು ರಚಿಸಿದ್ದಾರೆ. **'ಏಕೆಂದರೆ ಅಂಥ ಪ್ರಸಂಗದಲ್ಲಿ ಗುಣಾತ್ಮಕ, ಜೀವಂತವಾಗಿ ರಸವಂತಿ ಗಟ್ಟಿಯಾಗಿ ರೂಪಗೊಳ್ಳುತ್ತದೆ'**. ಐತಿಹಾಸಿಕ ಕಾವ್ಯಪ್ರಕಾರದಿಂದ ಕೂಡಿರುತ್ತದೆ. ಕವಿಯ ಕಲ್ಪನೆ, ಪ್ರತಿಭೆ, ಉಪಮೆ, ಅತಿಶಯೋಕ್ತಿ, ಅಲಂಕಾರದ ಯಾವುದೇ ಪ್ರಮಾಣವನ್ನು ಉಪಯೋಗಿಸಿಕೊಳ್ಳುತ್ತಾನೆ. ಇಲ್ಲಿ ಕವಿ, ಐತಿಹಾಸಿಕ ಘಟನೆ, ಮೂಲ ಇತ್ಯಾದಿಗಳನ್ನು ಇಟ್ಟುಕೊಂಡು ತನ್ನದೇ ಆದ ಕಲ್ಪನೆಯಲ್ಲಿ ಪೊವಾಡಾ ರಚಿಸುತ್ತಾನೆ. ಇತಿಹಾಸ ಸಂಶೋಧಕನಿಗೆ ಪೊವಾಡಾದ ಮಾಧ್ಯಮದಿಂದ ಸಂಶೋಧನೆ ಮಾಡಲಿಕ್ಕೆ ಸಮಕಾಲೀನ ವಿಷಯ ಗೊತ್ತಾಗುತ್ತದೆ. ಪೊವಾಡಾ ಯಾವುದೇ ಇದ್ದರೂ ಅದರಲ್ಲಿ ತತ್ಕಾಲಿನ ರಾಜಕೀಯ, ಸಾಮಾಜಿಕ ಚಿತ್ರಣ ಸ್ವಲ್ಪ ಮಟ್ಟಿಗಾದರೂ ಇರುತ್ತದೆ. ಮರಾಠಿ (ಶಿವಾಜಿ ೧೬೭೪ರಲ್ಲಿ ರಾಜ್ಯ ಸ್ಥಾಪಿಸಿದ ಮರಾಠಾ ರಾಜ್ಯವು ೧೮೧೮ರ ವರೆಗೂ ರಾರಾಜಿಸಿತ್ತು). ರಾಜ್ಯದ ವೈಭವ ತುಂಬಿ ತುಳುಕುತ್ತಿದ್ದಂತೆ ಪೊವಾಡಾ ರಚನೆಯಾಗುತ್ತಿದ್ದವು. ಉದಾ: ಶಿವಾಜಿ

ಮಹಾರಾಜರ ರಾಜ್ಯಾಭೀಷೇಕ ಆದ ಬಳಿಕ ಪೊವಾಡಾ ರಚನೆಯಾದವು. ಅದರ ಪೂರ್ವದಲ್ಲಿದ್ದ ರಾಜರ ದರ್ಬಾರದಲ್ಲಿ **ಶಾಹೀರ್, ಗೊಂಧಳಿ,** ಇವರು ಪೊವಾಡಾ ಹಾಡುತ್ತಿದ್ದರು. ಸೈನಿಕರಲ್ಲಿ ವೀರಭಾವನೆ ಮೂಡಿ ಸೈನ್ಯದಲ್ಲಿ ಹೋಗುವಂತೆ ಪ್ರೇರಣೆ ನೀಡುವುದಕ್ಕಾಗಿ ಪೊವಾಡಾ ಹಾಡುತ್ತಿದ್ದರು. ಪೂರ್ವಜರ ಪರಂಪರೆ, ವೀರತಾ, ಲಯ, ಶ್ರುತಿ, ಇತ್ಯಾದಿಗಳು. ಮೊದಮೊದಲಿಗೆ ಮೌಖಿಕವಾಗಿ ಪೊವಾಡಾ ಹೇಳುತ್ತಿದ್ದರು. ಮುಂದೆ ಅದನ್ನು ಲಿಖಿತ ರೂಪದಲ್ಲಿ ಬರೆಯತೊಡಗಿದರು. ಹಬ್ಬ ಹರಿದಿನಗಳಲ್ಲಿ, ರಾಜದರ್ಬಾರಗಳಲ್ಲಿ ಇವುಗಳನ್ನು ಹಾಡುತ್ತಿದ್ದರು. ಆಗಿನ ಕಾಲದಲ್ಲಿ ಬಹಳಷ್ಟು ಪೊವಾಡಾಗಳು ಪ್ರಸಿದ್ಧಿ ಪಡೆದವು. **ಶಿವಾಜಿ ಮಹಾರಾಜರ ಕಾಲದಲ್ಲಿ ಪ್ರಸಿದ್ಧಿಯಾದ ಕೆಲವು ಪೊವಾಡಾಗಳು** ಹೀಗಿವೆ. ಉದಾ: 'ತಾನಾಜಿ ಮಾಲುಸರೆ ಯಾಂಚಾ ಪೊವಾಡಾ' (ಶಾಹೀರ ತುಳಸಿದಾಸ), 'ಅಪಝುಲಖಾನಾಚಾ ವಧಾಚಾ ಪೊವಾಡಾ', (ಅಜ್ಞಾನದಾಸ), **ಪೇಶ್ವೆ ಕಾಲದಲ್ಲಿ ಪ್ರಸಿದ್ಧವಾದ ಕೆಲವು ಪೊವಾಡಾಗಳು ಹೀಗಿವೆ.** 'ಪಾಣಿಪತ್ ಪೊವಾಡಾ', (ಸಗನಭಾವೂ) 'ಸವಾಯಿ ಮಾಧವರಾವಂಚಾ ರಂಗಾಚಾ ಪೊವಾಡಾ', (ಪ್ರಭಾಕರ), 'ಮಲ್ಲಾರರಾವ ಹೊಳ್ಕರಾಂಚಾ ಪೊವಾಡಾ', (ರಾಣುಸುತಾರ), 'ನಾನಾ ಫಡ್ನಿಸಾಂಚಾ ಪೊವಾಡಾ', (ಬಾಳಾಬಾಹೀರೂ), 'ಪರಶುರಾಮಭಾವೂಂಚಿ ಕರ್ನಾಟಕಾವರೀಲ ಸ್ವಾರೀಚಾ ಪೊವಾಡಾ', (ನಾರೋತ್ರಿಂಬಕ) ಹೀಗೆ ನೂರಾರು ಪೊವಾಡಾಗಳು ಪ್ರಸಿದ್ಧಿಗೆ ಬಂದು ಮಹಾರಾಷ್ಟ್ರದಾದ್ಯಂತ ಖ್ಯಾತಿಪಡೆದವು.

ಪೊವಾಡಾಗಳನ್ನು ಮೋಡಿ ಬರಹದಲ್ಲಿ ಬರೆಯುತ್ತಿದ್ದ ಕವಿ, ಶಾಹೀರ್‌ಗಳು ಅಶಿಕ್ಷಿತರಿದ್ದರು. ಆದ್ದರಿಂದ ಭಾಷೆಯ ಶುದ್ಧತೆ ಇರದೆ ತಪ್ಪುಗಳಿರುತ್ತಿದ್ದವು. ಕೆಲವು ಪ್ರಸಂಗದಲ್ಲಿ ಅರ್ಥ ಹುಡುಕುವುದು ಕಠಿಣವಾಗುತ್ತಿತ್ತು. ಪ್ರಪ್ರಥಮವಾಗಿ ಪೊವಾಡಾ **'ವಿವಿಧ ಜ್ಞಾನ ವಿಸ್ತಾರ' ಮಾಸಿಕ (೧೮೧೭)**ದಲ್ಲಿ ಪ್ರಕಟವಾಯಿತು. ಇವು ಬಹಳಷ್ಟು ಪ್ರಸಿದ್ಧಿಯಾದವು. ಆದ್ದರಿಂದ ಜನರು ಪೊವಾಡಾಗಳನ್ನು ಬರೆಯತೊಡಗಿದರು. **ವಿಷ್ಣುಶಾಸ್ತ್ರಿ ಚಿಪಳುಣಕರ, ಶಂಕರ ತುಕಾರಾಮ ಶಾಳಿಗ್ರಾಮ** ಅವರು ೧೮೭೯ರಲ್ಲಿ ಪೊವಾಡಾ ಸಂಗ್ರಹಿಸಿ ಪ್ರಕಟಿಸಿದರು. ಉದಾಹರಣೆಗೆ ಛತ್ರಪತಿ ಶಿವಾಜಿ ಮಹಾರಾಜರ ಬಲಗೈಬಂಟ ಎಂದು ಖ್ಯಾತಿ ಪಡೆದ **'ತಾನಾಜಿ ಮಾಲುಸರೆ'** ಇವರನ್ನು ಕುರಿತು ಶಾಹೀರ ತುಳಸಿದಾಸ ಅವರು ಬರೆದು ಹಾಡಿರುವ ಪೊವಾಡಾದ ಕೆಲವು ಸಾಲುಗಳನ್ನು ಇಲ್ಲಿ ಕೊಡಲಾಗಿದೆ. (ಚಾಲ–ಸಾಂಗ ಸರವೆ ಸುಂದರಿ)

"ರಾಜಗಡ ರಾಜಾಚಾ । ಪ್ರತಾಪಗಡ ಜಿಜಾಬಾಯಿಚಾ॥
ಸಿಂಹಗಡ ಪನಾಳಾ । ಪಹಾ ತ್ಯಾ ಮೊಗಲಾಚಾ ॥
ಸರಜಾ ಶಿವಾಜಿ ಶಿವಭವನ । ಕಾಬೀಜ ಕೆಲೆ ತಳಕೊಕಣ ॥
ಗಡ ಮಾಹುಲಿ ಘೇತಲಿ । ಕಲ್ಯಾಣ ಭೀವಂಡಿ ಕಾಬಿಜಕೇಲಿ ॥
ಖಬರ ತ್ಯಾ ವಿಜಾಪುರಲಾ ಗೇಲಿ । ಠಾಣೆ ರಾಜಾಚೆ ಬಸಲೆ ॥
ಶಿವಾಜಿ ಮಹಾರಾಜ । ರಾಜಗಡ ಕಿಲ್ಲಾವರ ಬಸಲೆ ॥

ಜಿಜಾಬಾಯಿ ಮಾತಾ । ಆಹೆ ಪ್ರತಾಪಗಡವರಿ ॥
ಸೋಮವಾರಚ್ಯಾ ದಿವಸಿ । ಹಾತಿ ಹಸ್ತಿನಾಚಿ ಫಣಿ ॥
ಉಗವತೆ ಬಾಜುಲಾ ನಜರ ಕೆಲಿ । ನಜರ ಸಿಂಹಗಡಾವರ ಗೆಲಿ ॥ "[೨೧]

ಕನ್ನಡ ಅನುವಾದ: "ಶಿವಾಜಿ ಮಹಾರಾಜ ರಾಜಗಡದಲ್ಲಿ, ಜಿಜಾಬಾಯಿ ಪ್ರತಾಪಗಡದಲ್ಲಿ ಸಿಂಹಗಡ ಮತ್ತು ಪನಾಳಾ ಮೊಘಲರ ತಾಬೆಯಲ್ಲಿದ್ದವು. ಶಿವಾಜಿಯು ತಳಕೊಕಣ, ಗಡಮಾಹುಲಿ, ಭೀವಂಡಿ ಮತ್ತು ಕಲ್ಯಾಣ ಮೊದಲಾದ ಪ್ರದೇಶಗಳನ್ನು ತನ್ನ ಕಬಜೆ (ತಾಬೆ) ಮಾಡಿಕೊಂಡ ವಿಷಯ ವಿಜಾಪುರದ ಆದಿಲ್‌ಶಾಹಿಗಳಿಗೆ ಗೊತ್ತಾಗುತ್ತದೆ. ಆಗ ಶಿವಾಜಿಯು ರಾಜಗಡ ಕಿಲ್ಲಾದಲ್ಲಿದ್ದು, ತಾಯಿ ಜಿಜಾಬಾಯಿ ಪ್ರತಾಪಗಡದಲ್ಲಿರುತ್ತಾಳೆ. ಒಂದು ಶುಭ ಸೋಮವಾರದಂದು ತಾಯಿ ಜಿಜಾಬಾಯಿಯು ಸುರ್ಯೋದಯ (ಉಗವತೆ)ದ ಸಂದರ್ಭದಲ್ಲಿ ಪೂರ್ವ ದಿಕ್ಕಿನಕಡೆಗೆ ಮುಖಮಾಡಿ ಹಸ್ತದಂತಿಯಿಂದ ತಲೆಬಾಚಿಕೊಳ್ಳುತ್ತಿದ್ದಳು. ಆಗ ತಟ್ಟನೆ ಜಿಜಾಬಾಯಿಯ ಚಿತ್ತ (ಮನಸ್ಸು) ದೂರದಲ್ಲಿರುವ ಸಿಂಹಗಡದ ಮೇಲೆ ಬೀಳುತ್ತದೆ. ಆಗ ಜಿಜಾಬಾಯಿ ಸಿಂಹಗಡವನ್ನು ಮೊಘಲರಿಂದ ಗೆಲ್ಲಲೇಬೇಕೆಂದು ಮಗ ಶಿವಾಜಿಗೆ ಹೇಳಿ ಹುರಿದುಂಬಿಸುತ್ತಾಳೆ" ಎಂಬ ವಿಷಯ ಇದರಲ್ಲಿದೆ. ಹೀಗೆ ಪೊವಾಡಾದ ಹಾಡುಗಳು ಮುಂದುವರೆಯುತ್ತವೆ. ಇಲ್ಲಿ ಮತ್ತೊಂದು ಪೊವಾಡಾದ ಉಲ್ಲೇಖ ಹೀಗಿದೆ.

'ಗಿಲಿಜಾ ದುರ್ಗದ ಪೊವಾಡಾ' ಕುರಿತು ಫ್ಲೀಟ್‌ರು ೧೮೭೪ರ ಮೊದಲೇ ಸಂಗ್ರಹಿಸಿದ ಲಾವಣಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಇದು ಗಿಲಿಜಾ ದುರ್ಗದ ಮೇಲೆ ದಂಡೆತ್ತಿ ನಡೆದ ನಾನಾಭಾವೂನ ಲಾವಣಿ ಕಥೆಯ ಪ್ರಸಂಗ. ಅದು ಈ ಪೊವಾಡಾದಲ್ಲಿ ಹೀಗೆ ವರ್ಣಿತವಾಗಿದೆ.

ಗಿಲಿಜಾ ದುರ್ಗದ ಪೊವಾಡ

* ಸವಾಈ ಬಾಜೀರಾವ್ ಪೇಶ್ವೆ ಪುಣ್ಯವಾನ್ ಪ್ರಾರ್ಥನಾ ನಾನಾಭಾವೂ ಗಾದೀ
* ವರ್ ಜನ್ಮ್‌ಲೇ ಶೂರಜಸೇ ಅರ್ಜುನ ಶಹರ ಪುಣೇ ವಸವಿಲೇ ಮೊಹರ್ ಪುಲವ್ಯಾ
* ಸಿನಾಹೀ ಕಾಹೀ ಉಣೆ ಗರ್ವ ಕೋಂದಲಾ ಘಾರ್‌ಜೈಸಾ ಲಂಕಾಪತಿ ರಾವಣ ಹೊ
* ಣಾರಾ ಸಾರಿಖೇ ಪರಂತು ಕಸೇಲಿಹಿಲೇ ಬ್ರಹ್ಮಾನೇ ಚಮಕೇ ನಂಗೀ ತಲವಾರ್
* ಸೈನ್ಯಸಾರೇ ಲಷ್ಕರ್ ಪಾಹೂನ್ ॥ ಚಾಲ ॥ ಬೋಲಾವಿಲೇರೇ ಅವಧೇವಜಿರ್ ಸ

೨೧. ಸಂಗ್ರಹ. ಶಿಕ್ಷಕ : *'ಪೊವಾಡೆ ಸಂಗ್ರಹ. ಮರಾಠಿ ಶಾಹಿಚೆ ಐತಿಹಾಸಿಕ ಪೊವಾಡೆ ಭಾಗ-೧'*, ಪ್ರಕಾಶಕರು : ಇಂದೋರ ಬುಕ್ ಡಿಪೊ, ತೋಪಖಾನಾ ಇಂದೂರ, ೧೯೪೦.

* ಜವಿಲೇ ಸಭಾ ಆಣಿ ಸದರ್ ಮಗ ಕೈಸಾ ಕೇಲಾ ವಿಚಾರ್ ಅಷ್ಟಪ್ರಧಾನ್ ಮಾ*
ನಕರೀ ಸಾರೇ ಪತ್ರಲಿಹಿಲೇ ಕುಲ ಏಕತಾರ ಸಿಂದೇಶಾಈ ತೋಫಾಚ್
ಭಾರ ಆ
* ಲೇ ಮಲ್ಹಾರ್‌ರಾವ್ ಹೋಳಕರ್ ಜರೀ ಪಟಕೇ ಐಂಸಿಹಜಾರ್ ಬಾರಾ
ಹಜಾರ್ ಬಾಣಾ
* ಚೇಕದರ್ ಚಾಲಿಸ ಹಜಾರ್ ಪಠಾಣ್ ಪಾನಲೇಜ ಚಮಕತೀ ಸಿಂದೇ
ಜ್ಯಾಟ್
* ರಾಹಿಲೇ ನಾಹಿತ್ಯಾಸ ಗಣಿತ ಸಿರಕೇ ಮೋಹಿತೇ ಮಾನೇ ಪಾಟಣಕರ್
ಝು
* ಲತ್ ಗಾಈಕವಾಡ ನಿಂಬಾಳಕರ್ ನೋ ಬಲವಾಜತೀ ಏಕಾಏಕಾ
ಬರೋಬರ್
* ಜರೀ ಪಟಕ ಅಸೇಕಿ ತೀ ರಾಹಿಲೇ ಏಕ ದಿಲ್ ಕರೂನ್ ಭಾವೂನಾನಾ
ತಲವಾ
* ರ್ ಧರೂನ್ ಗಲೇಗಿಲಜಾವರ್ ಚಟಾಈ ಕರೂನ್ ॥ ೧ ॥

ಕನ್ನಡ ಅನುವಾದ : "ಪುಣೆಯ ನಗರದಲ್ಲಿ ಸವಾಈ ಬಾಜೀರಾವ್ ಪ್ರಾರ್ಥನೆಯ ಮೇರೆಗೆ ಆತನ ಪುಣ್ಯದ ಫಲವಾಗಿ ನಾನಾಭಾವು ಜನ್ಮತಳೆದನು. ಆತ ರಾವಣನಂತಹ ಶೂರರ ಗರ್ವವನ್ನು ಮುರಿಯಲೆಂದೇ ಜನ್ಮತಳೆದಂತಿತ್ತು; ಪುನಃ ಬ್ರಹ್ಮನೇ ಸೈನ್ಯ ಕಂಡು ಬಿಚ್ಚುಗತ್ತಿ ಬೀಸುತ್ತಿರುವನೇನೋ ಎನ್ನುವಂತಿದ್ದನು.

ಅವಧದ ವಜೀರರು (ಮಂತ್ರಿಗಳು) ಸಭೆ ಸೇರಿದರು; ಎದುರಿಸಲು ನಿಶ್ಚಯಿಸಿದರು. ಅಷ್ಟಪ್ರಧಾನರು ತಮ್ಮ ರಾಜ್ಯದ ಮಾನ್ಯವಂತರೆಲ್ಲರಿಗೂ ಪತ್ರಗಳನ್ನು ಬರೆದು ಸೈನ್ಯ ತೆಗೆದುಕೊಂಡು ಬರಲು ನಿರೂಪ ಕಳಿಸಿದರು. ಆಗ, ಸಿಂಧೆಯು ತೋಪಿನ ಭಾರೀ ಸೈನ್ಯವನ್ನು ತಂದನು; ಜರೀ ಪಟಕ ಸುತ್ತಿದ ಮಲ್ಹಾರ್‌ರಾವ್ ಹೋಳ್ಕರನು ಹನ್ನೆರಡು ಸಾವಿರ ಬಿಲ್ಲುಗಾರರನ್ನು ಹೊಂದಿದ ಎಂಬತ್ತು ಸಾವಿರ ಸೈನ್ಯವನ್ನು ತಂದನು. ಅದರಲ್ಲಿ ಆರು ಸಾವಿರ ನಿರ್ಭೀತ ಪಠಾಣರಿದ್ದರು; ಮತ್ತೆ ಅದರಲ್ಲಿ ಸಿಂಧೇ, ಜಾಟ್, ರೋಹಿಲೇ ಹೀಗೆ ನಾನಾ ಬಗೆಯ ಜಾತಿ ಜನರಿದ್ದರು. ಮೋಹಿತೆ, ಮಾನೇ ಪಾಟಣಕರ್, ಗಾಈಕವಾಡ, ನಿಂಬಾಳ್ಕರ್ ಮುಂತಾದವರು ತಮ್ಮ ತಮ್ಮ ಬಲಾಬಲಗಳನ್ನು ತೂಗಿನೋಡುತ್ತಿದ್ದರು. ಅಲ್ಲಿ ಒಬ್ಬರಿಗಿಂತ ಒಬ್ಬರು ಭಾರಿ ಎನಿಸಿದರೂ ಎಲ್ಲರೂ ಏಕಮನಸ್ಸಿನಿಂದ ಅಲ್ಲಿ ಕೂಡಿದ್ದರು. ನಾನಾಭಾವೂ ಕತ್ತಿಯನ್ನು ಧರಿಸಿ ಗಿಲಿಜಾದ ಮೇಲೆ ದಾಳಿ ಮಾಡಿದನು ॥ ೧ ॥"[೨೨]

೨೨. ಕ್ಯಾತನಹಳ್ಳಿ ರಾಮಣ್ಣ : '*ಫ್ಲೀಟರು ಸಂಗ್ರಹಿಸಿದ ಲಾವಣಿಗಳು*', ೧೯೯೧. (ದ್ವಿತೀಯ ಮುದ್ರಣ) ಪುಟ, ೩೧೫

೩. **ಲಾವಣಿ :** ಇದರ ಮೂಲ ಕ್ರಿ.ಶ. ಸುಮಾರು ೧೫೬೦ ಎನ್ನುತ್ತಾರೆ. ಲಾವಣ್ಯ ಸುಂದರ ಇದು ತಮಾಶಾದ ಒಂದು ಭಾಗ. ಲಾವಣಿಯಲ್ಲಿ ನಿರ್ಗುಣಿ (ತತ್ವಜ್ಞಾನ, ಭಕ್ತಿ) ಮತ್ತೊಂದು ಶೃಂಗಾರ (ಶೃಂಗಾರ ಗೀತೆ, ಶೃಂಗಾರದ ಭಾವನೆ). ಗ್ರಾಮೀಣ ಶೃಂಗಾರ ಮತ್ತು ಗೆಯತೆ ಇವು ಲಾವಣಿಯ ಪ್ರಮುಖ ಲಕ್ಷಣಗಳು. ಸಾಮಾನ್ಯ ಜನರಿಗೆ ಹಿಡಿಸುವ ಲೌಕಿಕ, ಪೌರಾಣಿಕ, ಆಧ್ಯಾತ್ಮಿಕ ಮೊದಲಾದ ವಿಷಯಗಳು ಇದರಲ್ಲಿರುತ್ತವೆ. ಇದೊಂದು 'ಲೋಕಗೀತೆ', 'ಲಾವಣಿ' ಎಂದರೆ 'ಲಾವಣ್ಯ' ಸೌಂದರ್ಯ ಅನ್ನುವ ಶಬ್ದದಿಂದ ಉತ್ಪತ್ತಿಯಾಗಿದೆ. ಲಾವಣಿಯಲ್ಲಿ ಭೇದಿಕ ಲಾವಣಿ, ಬೈಟಕ ಲಾವಣಿ, ಫಡಾಚಿ ಲಾವಣಿಗಳೆಂಬ ಪ್ರಕಾರಗಳಿವೆ. ಲಾವಣಿ ಶಬ್ದದ ಅರ್ಥ ವ್ಯವಸ್ಥಿತ ರಚನೆ, (ಮಾಂಡಣಿ) ಉತ್ತಮ ರಚನೆ ಎನ್ನುತ್ತಾರೆ. ಶಾಹೀರ (ಕವಿ) ತಮಾಶಾ (ಪ್ರೇಕ್ಷಣೀಯ ಸ್ಥಳ) ಕಲ್ಗಿ–ತುರಾ(ಒಂದು ಪ್ರಕಾರದ ಶಿರೋಭೂಷಣ) ಇವೆಲ್ಲ ಶಬ್ದಗಳು **ಪಾರ್ಸಿ** ಭಾಷೆಯಿಂದ ಬಂದಿರುತ್ತವೆ. ೧೩೧೮–೧೬೫೬ರ ಕಾಲಾವಧಿಯಲ್ಲಿ ಮಹಾರಾಷ್ಟ್ರದಲ್ಲಿ ಮುಸ್ಲಿಮರ ರಾಜ್ಯಾಡಳಿತವಿತ್ತು. ಆ ಅವಧಿಯಲ್ಲಿ ಹಲವಾರು ಪಾರ್ಸಿ ಶಬ್ದಗಳು ಮರಾಠಿ ಭಾಷೆಯಲ್ಲಿ ಬಳಕೆಗೊಂಡವು. ೧೭–೧೮ನೇ ಶತಮಾನದಲ್ಲಿ ಲಾವಣಿ ಲೋಕಗೀತೆ ಹೆಚ್ಚು ಪ್ರಚಾರವಾಯಿತು. ಪೇಶ್ವೆಯವರ ಮತ್ತು ಶಿವಾಜಿ ಮಹಾರಾಜರ ಕಾಲ (೧೬೭೪–೧೮೧೮) ದಲ್ಲಿ ಸೈನಿಕರಿಗೆ ಯುದ್ಧ ಕಾಲದಲ್ಲಿ ಪ್ರೇರಣೆ ಕೊಡಲಿಕ್ಕೆ ಲಾವಣಿಯ ಮೂಲಕ ಮನೋರಂಜನೆಗಳನ್ನು ನೀಡುತ್ತಿದ್ದರು. ಲಾವಣಿ ತಮಾಶಾದ ಹೃದಯ ***(Heart)*** ಭಾಗ. ಆಕರ್ಷಕ ಸುಂದರ ಮಹಿಳೆಯರು ಒಂಭತ್ತುವಾರಿ ಸಾರಿ ***(Nauvari Sari)*** ಯನ್ನು ಉಟ್ಟುಕೊಂಡು ಲಾವಣಿ ಹಾಡಿಗೆ ತಕ್ಕಂತೆ ನೃತ್ಯ ಮಾಡುತ್ತಾರೆ. ಹಿನ್ನೆಲೆಯ ವಾದ್ಯಗಳಾಗಿ ಡೋಲಕಿ, ಡ್ರಮ್, ತುಂತುಣಿಗಳನ್ನು ಬಳಸುತ್ತಾರೆ. ಲಾವಣಿ ಶಬ್ದ ಉತ್ತರ ಪೇಶ್ವೆ ಕಾಲದಲ್ಲಿ (ಅಂದರೆ ೧೮ನೇ ಶತಮಾನದ ಕೊನೆಯಲ್ಲಿ) ಬಳಕೆಯಲ್ಲಿ ಬಂದಿದೆ.

ಲಾವಣಿ ಕಾವ್ಯಪ್ರಕಾರಕ್ಕೆ ನೈತಿಕ, ಸಾಮಾಜಿಕ, ಧಾರ್ಮಿಕ, ವ್ಯವಹಾರಿಕ ಬಂಧನ ಉಳಿಯಲಿಲ್ಲ. ಇದಕ್ಕೆ ಸುಮಾರು ೩೦೦ ರಿಂದ ೩೫೦ ವರ್ಷಗಳ ಪ್ರಾಚೀನ ಇತಿಹಾಸವಿದೆ. ಸಂತರ ಕಾವ್ಯಗಳಲ್ಲಿ 'ಗವಳಣ'ದ ಪ್ರಸ್ತಾಪ ಬರುತ್ತದೆ. ಹಾಗಾದರೆ ಅದರ ಮುಂದಿನ ಪರಂಪರೆ ಏನು. ಗೌಳಣ ವಿರಾಣಿ(ವೀರಹ ಗೀತೆ) ಭಾರೂಡ ಪದ್ಯದಲ್ಲಿ ಲಾವಣಿಯ ಪರಂಪರೆ ಇದೆ. ಲಾವಣಿಯಲ್ಲಿ ಸ್ವರಚನೆ ಇರುತ್ತದೆ. ಉದಾ:

"ಅಂಗಿ– ತಾರುಣ್ಯಾಚಾ ಬಹರ, ಜಾನಿಚಾ ಕಹರ, ಮಾರಿತೆ
ಲಹರ ಮದನ ತಲ" ॥

ಕನ್ನಡ ಅನುವಾದ: "ತಾರುಣ್ಯದಿಂದ ತುಂಬಿರುವ ಹದಿವಯಸ್ಸಿಗೆ, ಮದನ (ವಿರಾಣಿ) ಭಾವನೆ ಗಾಸಿಗೊಳಿಸುತ್ತಿದೆ ಎಂಬ ಶೃಂಗಾರದ ವರ್ಣನೆ ಈ ಲಾವಣಿಯಲ್ಲಿದೆ". ಉದಾಹರಣೆಗೆ ಮತ್ತೊಂದು ಶೃಂಗಾರ ಲಾವಣಿ.

"ಫಡ ತೂರ್‍ಯಾವರ ಆಲಾ
ತುಜಾ ಉಸಾಲಾ ಲಾಗಲಾ ಕೋಲಾ" ॥

ಕನ್ನಡ ಅನುವಾದ : "ಕಬ್ಬಿನ ಫಡ ಗರಿಯಿಂದ ಕಂಗೊಳಿಸುತ್ತಿದೆ. ನಿನ್ನ ಫಡಕ್ಕೆ ನರಿಗಳ ಕಾಟ ತಪ್ಪಿದ್ದಲ್ಲ" ಎಂಬುದು ಸಾಂಕೇತಿಕ. ಇಲ್ಲಿ ಯೌವನಕ್ಕೆ ಬಂದ ಯುವತಿಯನ್ನು ಕಂಡು ಯುವಕರು ಬೆನ್ನತ್ತುವ ಪರಿಯನ್ನು ಲಾವಣಿಕಾರ ಈ ಲಾವಣಿಯಲ್ಲಿ ಶೃಂಗಾರಮಯವಾಗಿ ಚಿತ್ರಿಸಿದ್ದಾನೆ.

ಲಾವಣಿಯ ಉಗಮ ವಿಕಾಸ : ಲಾವಣಿ ಪೂರ್ವ ಪೇಶ್ವೆ ಕಾಲದಲ್ಲಿ ಉಗಮವಾಯಿತು. ಜನರ ಕೈಯಲ್ಲಿ ಹಣ ಬರತೊಡಗಿತು. ಲಾವಣಿಗೆ ಬಹಳ ಮಹತ್ವ ಬಂದು ಉತ್ತುಂಗದ ಸ್ಥಾನಕ್ಕೇರಿತು. ರಾಜರ ಕಾಲದಲ್ಲಿ ಸಾಕಷ್ಟು ಸ್ಪರ್ಧೆ ಏರ್ಪಟ್ಟು ಸವಾಲ್-ಜವಾಬ್‌ಗಳು ಬೆಳೆಯತೊಡಗಿದವು. ಒಬ್ಬ ಶಾಹೀರನು ಬಸುರಿ ಹೆಣ್ಣುಮಕ್ಕಳ ಮೇಲೆ ಲಾವಣಿ ಹಾಡಿದರೆ, ಮತ್ತೊಬ್ಬ ಬಸುರಿಯ ಬಯಕೆಯ ತಿಂಡಿ-ಪದಾರ್ಥ (ಡೊಹಾಳ ಜೆವಣ) ಊಟಗಳ ಮೇಲೆ ಹಾಡತೊಡಗಿದನು. ಹೀಗೆ ತುರುಸಿನಿಂದ ಸವಾಲ್-ಜವಾಬ್ ಹಾಡುಗಳು ಬೆಳೆಯತೊಡಗಿದವು. ಶ್ರೀಮಂತರ ಮತ್ತು ಸರದಾರರ ಮನೆಯಲ್ಲಿ ಹಾಗೂ ರಾಜ-ಮಹಾರಾಜರ ಅರಮನೆಯಲ್ಲಿ ಸಂಭಾವನೆ, ಬಕ್ಷಿಸ್ (ಬಿದಾಗಿ) ಕೊಟ್ಟು ಆಡಿಸುವ ಲಾವಣಿಗಳಿಗೆ 'ಬೈಟಕ' ಲಾವಣಿಗಳೆಂದು ಹಾಗೂ ಜನಸಾಮಾನ್ಯರ ಎದುರಿಗೆ ಹಾಡುವ ಲಾವಣಿಗಳಿಗೆ 'ಫಡಾಚಿ' ಲಾವಣಿಗಳೆಂದು ಕರೆಯುತ್ತಾರೆ. ಈ ಲಾವಣಿ ಮೇಳಗಳು ಎಷ್ಟೊಂದು ಬೆಳೆದವೆಂದರೆ ಉತ್ತರ ಭಾರತದಲ್ಲಿ ಸಂಗೀತ ಪ್ರಕಾರಗಳಾದ ಚಿಜ, ಖಯಾಲ, ಠುಮರಿ ಇವೆಲ್ಲವುಗಳ ಸಹಾಯದಿಂದ ಹಾಡಿಸುತ್ತಿದ್ದ **'ನಾಯ್ಕಿಣಿ'** ಹಾಡುಗಾರ್ತಿಗೆ ಪೈಪೋಟಿ ನೀಡಿ ಹಿಂದೆ ಸರಿಸಿದರು. ವಿಣಾ, ತಂಬೂರಿ, ಸಾರಂಗಿ, ತಬಲಾ ಇವುಗಳ ರಾಗ ತಾಳಕ್ಕೆ ತಕ್ಕಂತೆ ನೃತ್ಯ-ಗಾಯನ ಮಾಡತೊಡಗಿದರು. ಪೇಶ್ವೆ ಕಾಲದಲ್ಲಿ ಸಾಕಷ್ಟು ಬದಲಾವಣೆಗಳಾದವು. **'ಲಾವಣಿಯ ಸ್ವಾದ ನೃತ್ಯದಲ್ಲಿಲ್ಲ ಹಾಡು ಕೇಳುವುದರಲ್ಲಿ ಮತ್ತು ನೋಡುವುದರಲ್ಲಿದೆ'** ಎಂಬ ಮಟ್ಟಕ್ಕೆ ತಲುಪಿತು. ಜನರು ಇಡೀ ದಿವಸ ಕೆಲಸ ಕಾರ್ಯಗಳನ್ನು ಮಾಡಿ ಸಂಜೆಯ ಹೊತ್ತಿಗೆ ಮನೆಗೆ ಬರುತ್ತಾರೆ. ಆ ವೇಳೆಯಲ್ಲಿ ಸ್ವಲ್ಪಮಟ್ಟಿಗೆ (ಘಟಗಾ ಭರ) ಮನೋರಂಜನೆಗಾಗಿ ಲಾವಣಿ ನೋಡಲಿ (**ಫಡ**)ಕ್ಕೆ ಹೋಗುತ್ತಾರೆ. ಫಡದಲ್ಲಿ **'ನಾಚ್ಯಾ ಆಯಿಕ್ಯಾ'**_ _ _ಎಂದು ಧ್ವನಿ ತೆಗೆಯುತ್ತಾನೆ. ಅಷ್ಟರಲ್ಲಿ ಹಿಮ್ಮೇಳದವರು ಡಫ್, ತುಂತುಣಿ ಬಾರಿಸುತ್ತಾರೆ. ಸ್ತ್ರೀವೇಷಧಾರಿ 'ನಾಚ್ಯಾ' ಕಾಲಲ್ಲಿ ಗುಂಗರು ಕಟ್ಟಿಕೊಂಡು ಕುತ್ತಿಗೆಯ ಹೆಡಕ ಹಾರಿಸುತ್ತ, ಶರೀರ ಅಲ್ಲಲ್ಲಿ ಬಳಕಿಸುತ್ತ, ಕಣ್ಣು ಹೊರಳಾಡಿಸುತ್ತ ಅಂಗವೀಕ್ಷಣೆ ಮಾಡುತ್ತಾನೆ. ಆಗ ಪ್ರೇಕ್ಷಕರು ವ್ಹಾ_ _ ವ್ಹಾ_ _ ಎಂದು ಉದ್ಗಾರ ತೆಗೆಯುತ್ತಾರೆ.

ಕಲ್ಗಿ-ತುರಾ, ಭೇದಿಕ (ಸವಾಲ್-ಜವಾಬ್ ಪ್ರಶ್ನೋತ್ತರ) ಲಾವಣಿ. ಕಲ್ಗಿವಾಲೆ ನಾಗೇಶ, ತೂರಾವಾಲೆ-ಹರದೇಶ. ಹಿನ್ನೆಲೆಯ ವಾದ್ಯಗಳಾಗಿ ಡಫ್, ತುಂತುಣಿ, ದಿಮ್ಮಡಿ ಬಳಸುತ್ತಾರೆ. ಮೊದಲಿಗೆ ಗಣಪತಿ ಸ್ತೋತ್ರ. ಕಲ್ಗಿ ಸವಾಲ್ ಹಾಕಿದರೆ ತುರಾ ಉತ್ತರ ಕೊಡುತ್ತಾನೆ. ಎಲ್ಲಿಯವರೆಗೆ ಆ ಪಕ್ಷ ಸೋಲುವುದಿಲ್ಲವೋ ಅಲ್ಲಿಯವರೆಗೆ ಈ ಕಲಾಮೇಳಗಳು ನಡೆಯುತ್ತವೆ. ಐದಾರು ದಿನಗಳವರೆಗೂ ಈ ಲಾವಣಿ ಮೇಳಗಳು ನಡೆಯುತ್ತವೆ. ತುರಾ ಅವರದ್ದು ಹಸಿರು (ಹಿರವಾ) ಬಣ್ಣದ ಸಂಕೇತ. ಕಲ್ಗಿ- ತುರಾದಲ್ಲಿ

ಜಾತಿ ಭೇದ ಇರುವುದಿಲ್ಲ. ಎಲ್ಲ ವರ್ಗದ ಜನ ಇದರಲ್ಲಿರುತ್ತಾರೆ. **'ಕಲ್ಗಿ'** ಎಂದರೆ **'ಮಾಯಾ', 'ತುರಾ'** ಅಂದರೆ **'ಬ್ರಹ್ಮ'**. ಪ್ರಕೃತಿ–ಪುರುಷ ಅಥವಾ ಪತ್ನಿ–ಪತಿ (ಸ್ತ್ರೀ–ಪುರುಷ) ಎಂದರ್ಥ. ಕಲ್ಗಿ ಶಕ್ತಿ ಪಕ್ಷ, ತುರಾ ಅಂದರೆ ಶಿವಪಕ್ಷ. ಶಿವಶಕ್ತಿ ಬ್ರಹ್ಮ–ಮಾಯಾ ಪುರುಷ–ಪ್ರಕೃತಿ ಇವುಗಳಲ್ಲಿ ಯಾವುದೆ ಪ್ರಕಾರದ ರಹಸ್ಯ ಇರುವುದಿಲ್ಲ. ಅದ್ವೇತ್ ಇರುತ್ತದೆ. ಆದರೆ ಕಲ್ಗಿಯವರು ಶಕ್ತಿ ಉಪಾಸಕರು, ತುರಾದವರು ಶಿವ ಉಪಾಸಕರು. ಈ ವಾದದಲ್ಲಿ ಯಾರು ಶ್ರೇಷ್ಠರು ಎಂಬ ವಿಷಯದ ಮೇಲೆ ಸವಾಲ್–ಜವಾಬ್‌ಗಳು ನಡೆಯುತ್ತವೆ. ಕಲ್ಗಿ–ತುರಾ ಎರಡು ಶಬ್ದಗಳು ಪಾರ್ಸಿ ಭಾಷೆಯಿಂದ ಬಂದಿರುತ್ತವೆ. **ಇವುಗಳನ್ನು ಶಿರೋಭೂಷಣಗಳಲ್ಲಿ ಹಾಕಿಕೊಳ್ಳುತ್ತಾರೆ. 'ಕಲ್ಗಿ'** ಅಂದರೆ ರತ್ನ–ಹೀರಾವನ್ನು ಟೋಪ್ಪಿಗೆಗೆ ಹಚ್ಚಿರುತ್ತಾರೆ. **'ತುರಾ'** ಟೊಪ್ಪಿಗೆಯ ಕೆಳಗಡೆ ಇಳಿಬಿಟ್ಟಿರುತ್ತಾರೆ. **೧. ಕಲ್ಗಿವಾಲಾ–ಶಹಾಅಲಿ,** (ಮುಸ್ಲಿಮ್ 'ಹಿರವಾ' ಹಸಿರು ಬಣ್ಣದ–ಸಂಕೇತ) **೨. ತುರಾವಾಲಾ–ತೂಕನ್‌ಗೀರ್,** (ಹಿಂದೂ 'ಭಗವಾ' ಕೇಸರಿ ಬಣ್ಣದ ಸಂಕೇತ). **'ಡಪಾವರ ತುರಾ ಲಾವಿಲಾ ಹಿರವೇ ಫಡಕೆ ನಿಶಾನ್',** (ಡಫ್‌ಕ್ಕೆ ಗರಿ ಹಚ್ಚಿದೆ. ಹಸಿರು ನಿಶಾನೆ ಗಾಳಿಯಲ್ಲಿ ಹಾರುತ್ತಿದೆ.) ನಾಗೇಶಿ ಸಂಪ್ರದಾಯದ ಪ್ರವರ್ತಕ **ವಡವಾಳಸಿದ್ಧ ನಾಗೇಶ.** ಇವನ ಕಾಲಾವಾಧಿ ಅಂದಾಜು **೧೩೬೮–೧೪೧೮** ಇರಬಹುದು ಎನ್ನುತ್ತಾರೆ ವಿದ್ವಾಂಸರು. ಉದಾಹರಣೆಗೆ ಒಂದು ಮರಾಠಿಯ ಪ್ರಸಿದ್ಧವಾದ ಶೃಂಗಾರ ಲಾವಣಿಯನ್ನು ಇಲ್ಲಿ ಕೊಡಲಾಗಿದೆ.

"ಲಟಪಟ ಲಟಪಟ ತುಝ್ಯೋ ಚಾಲಣೆ ಮೋಠೆ ನಖರ್‍ಯಾಂಚೆ
ಬೊಲಣೆ ಮಂಜುಳ ಮೈನಾಚೆ ॥

--ಪ–

ವಯ ವರುಷೆ ಪಂದ್ರಾಚಿ ದಿಸೆ ಚಂದ್ರಾಚಿ ಪ್ರಭಾ ಢವಳಿ
ಆಕೃತಿ ಲಹಾನ್ ದಿಸೆ ಕವಳಿ
ದಿಸೆ ನಾರ ಸುಕುಮಾರ ಮುದ ರಾಖಡಿ ವೇಣಿತ ಆವಳಿ
ನರಮ ಗೋಜರೇ ಗಾಲ ಹೋಟ ಪವಳಿ
ರೂಪಸ್ವರೂಪಾಚಾ ಝೋಕ ದಿವ್ಯ ನಾರಿ ಲೋಟ ಚವಳಿ
ಜಶೀ ಚಮಕೆ ನಾಗೀನ ಗವಳಿ
ತಾರುಣಪಣ ಅಂಗಾತ ನೊಕ ಮದನಾಚೆ ಜೋರಾಚೆ
ಬೊಲಣೆ ಮಂಜುಳ ಮೈನಾಚೆ ॥

--೧–

ಡುಲತ ಡುಲತ ಚಾಲಣೆ ಬೊಲಣೆ ಬಹು ಮಂಜುಳವಾಣಿ
ನಾಹೀ ಕೋಣಿ ದುಸರಿ ಇಜವಾಣಿ
ಇಶ್ಕಿ ಯಾರ ಸರದಾರ ಕೈಕ ಸೋಡುನ ಕೆವಿಲವಾಣಿ

ಹಿಂಡತಾತಿ ವೆಡ್ಯಾವಾಣಿ
ನ ಪಡೆ ನಖ ದೃಷ್ಟಿತ ಕುಠೆ ಸೃಷ್ಟಿತ ಇಚ್ಛಾ ವಾಣಿ
ಫಂದಿ ಝೂರತಿ ಮೊರಾವಾಣಿ
ಲಖಲಖಾಟ ಚಕಚಕಾಟ ಜೈಸೇ ದುಕಾನ ಬೊಹೊರ್ಯಾಂಚೆ
ಬೊಲಣೆ ಮಂಜುಳ ಮೈನಾಚೆ"[೨೩] ॥ –೨–

ಕನ್ನಡ ಅನುವಾದ : "ಚಟಪಟ ಚಟಪಟ ಎಂಬ ಸದ್ದಿನಿಂದ ಕೂಡಿರುವ ನಿನ್ನ ನಡಿಗೆ ಬಲು ಮೋಜಿನಿಂದ ಕೂಡಿದೆ. ನಿನ್ನ ಮಾತುಗಳು ಮೈನಾಪಕ್ಷಿಯ ಮಂಜುಳವಾಣಿಯಂತಿವೆ. ನೋಡಲು ಹದಿನೈದರ ಹರೆ, ಬೆಳದಿಂಗಳ ಬಾಲೆ, ಹಚ್ಚಿದಂಗ ದೀಪ, ಚಂದ್ರನ ಬೆಳಕ ಎಳೆ ಚವಳಿಯಂತೆ ನಾಜೂಕ ನಾರಿ, ಏನ ನಿನ್ನ ರೂಪ ಸುಕುಮಾರಿ ವೇಣಿಯಲ್ಲಿ ಹಾಕಿರುವ ದಾಗಿನಾ ಬಲು ಸುಂದರವಾಗಿದೆ. ನುಣುಪಾದ ಗಲ್ಲ, ಕೆಂದೂಟಿ, ಸೌಂದರ್ಯ ಎಷ್ಟು ನಿನ್ನ ತಾರುಣ್ಯದ ಝೋಕ, ಸುರತ್ ಚಂದ್ರುಣಿ ನಿನ್ನ ಶರೀರಾಕೃತಿ ನಾಗಿಣಿಯಂತಿದೆ. ತಾರುಣ್ಯದ ಹುಮ್ಮಸ್ಸು, ನೂರಾರು ಕನಸುಗಳು ನಿನ್ನಲ್ಲಿವೆ. ನಿನ್ನ ಮಾತುಗಳು ಮೈನಾಪಕ್ಷಿಯ ಮಂಜುಳವಾಣಿಯಂತಿವೆ.

ಅಳಕುತ ಬಳಕುತ ನಡೆಯುವ ನಿನ್ನ ನಡಿಗೆ ಬಲು ನಾಜುಕ ನಿನ್ನ ಮಾತುಗಳು ಮಂಜುಳವಾಣಿಯಂತಿವೆ. ನಿನ್ನಂತೆ ಬೇರಾರೂ ಇಲ್ಲ, ಎಲ್ಲಿಯೂ ನೋಡಿಲ್ಲ, ನಿನ್ನ ಸೌಂದರ್ಯಕ್ಕೆ ಅದೆಷ್ಟೋ ಸರದಾರರು ಹುಚ್ಚರಾಗಿದ್ದಾರೆ. ಸೃಷ್ಟಿಯಲ್ಲಿ ನಿನ್ನ ಸಾಠಿ ಮತ್ಯಾರಿಲ್ಲ. ಇತರರು ನಿನ್ನ ಉಗುರಿನ ಸಮ. ಡೌಲ ಮಾಡುವ (ಛಂದಿಫಂದಿ) ಜನ ನಿನ್ನ ಮೈಮಾಟ ಕಂಡು ಬೆರಗಾಗಿದ್ದಾರೆ. ಅಂಗಡಿಗಳಲ್ಲಿ ಸಿಗುವ ಝಗಮಗಿಸುವ ರಂಗುರಂಗಿನ ಬಟ್ಟೆಯಂತೆ ಹೊಳೆಯುತ್ತಿರುವ ನಿನ್ನ ಸೌಂದರ್ಯಕ್ಕೆ ಸಾಠಿ ಬೇರಾರಿಲ್ಲ. ನಿನ್ನ ಮಾತುಗಳು ಮೈನಾಪಕ್ಷಿಯ ಮಂಜುಳವಾಣಿಯಂತಿವೆ".

ಮರಾಠಿ ಸಿನೇಮಾ ನಟರಂಗ(೨೦೧೦) ದಲ್ಲಿ **'ಮಲಾ ಜಾವುದ್ಯಾ ನಾ ಘರಿ, ಅತಾ ವಾಜಲೇ ಕೀ ಬಾರಾ'** (ನನಗೆ ಮನೆಗೆ ಹೋಗಲು ಬಿಡಿ, ಈಗ ಹನ್ನೆರಡು ಗಂಟೆ ಆಗಿದೆ.) ಹಾಗೂ **'ಅಪ್ಸರಾ ಆಲಿ'** (ಅಪ್ಸರೆ ಬಂದಳು) ಈ ಲಾವಣಿ ಹಾಡುಗಳು ಬಹಳಷ್ಟು ಪ್ರಸಿದ್ಧಿ ಪಡೆದುಕೊಂಡಿವೆ. ೧೯೭೨ರಲ್ಲಿ 'ಪಿಂಜಾರಾ' ಸಿನೇಮಾದಲ್ಲಿ ಕೂಡ **'ದಿಸಲಾಗ ಬಾಯಿ ದಿಸಲಾ, ಮಲಾ ಬಗೂನ ಗಾಲಾತ ಹಾಸಲಾಗ ಬಾಯಿ ಹಸಲಾ'** (ಕಾಣಿಸಿದನು ಬಾಯಿ ಕಾಣಿಸಿದ, ನನ್ನ ಕಂಡು ಮುಗುಳ್ನಗೆಯಿಂದ ನಗುತ್ತಿದ್ದನು.) ಎನ್ನುವ ಲಾವಣಿಯು ಬಹಳ ಲೋಕಪ್ರಿಯವಾಯಿತು. ಶ್ರೀಮತಿ ಸುರೇಖಾ ಪುಣೇಕರ ಅವರು ಲಾವಣಿ ಕಲಾಕಾರರು ಮತ್ತು ಅಭಿನೇತ್ರಿ ಎನ್ನುವುದು ಸಂತೋಷದ ವಿಷಯ. ಶ್ರೀ ವಿಜಯಸಿಂಗ ಮೋಹಿತೆ ಪಾಟೀಲ ಅವರು ಸೋಲಾಪುರ ಜಿಲ್ಲೆಯ ಅಕಲುಜದಲ್ಲಿ ಪ್ರತಿವರ್ಷ ತಮ್ಮ ಸ್ವಂತ ಖರ್ಚಿನಿಂದ ಒಂದು ದಿವಸದ ಲಾವಣಿ ಮಹೋತ್ಸವಆಚರಿಸಿ ಮಹಾರಾಷ್ಟ್ರದ ವಿವಿಧ ಭಾಗಗಳಿಂದ ಮೇಳದವರನ್ನು ಕರೆಯಿಸಿ ಲಾವಣಿ ಕಾರ್ಯಕ್ರಮ

೨೩. ಮ.ವಾ.ಧೋಂಡ : 'ಮರಾಟೀ ಲಾವಣೀ'; ಪುಟ, ೧೩೯

ಏರ್ಪಡಿಸುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಮರಾಠಿಯಲ್ಲಿ ತಮಾಶಾ, ಪೊವಾಡಾ ಮತ್ತು ಲಾವಣಿ ಮೇಳಗಳು ಇವತ್ತೀಗೂ ತಮ್ಮ ಸ್ಥಿತಿ-ಗತಿಗಳನ್ನು ಗಟ್ಟಿಯಾಗಿ ಉಳಿಸಿಕೊಂಡು ಬರುವಲ್ಲಿ ಯಶಸ್ವಿಯಾಗಿವೆ. ನಮ್ಮಲ್ಲಿ ಪ್ರಚಲಿತವಿರುವ ರಾಧಾನಾಟ, ಪಾರಿಜಾತಗಳಲ್ಲಿ ಕಂಡುಬರುವ ಸನ್ನಿವೇಶಗಳು **ತಮಾಶಾ**ಗಳಲ್ಲಿ ಕಂಡುಬರುತ್ತವೆ. ಉದಾ: ಗೌಳಣ ಈ ಪಾತ್ರ ನಮ್ಮ ಕೃಷ್ಣ ಪಾರಿಜಾತದಲ್ಲಿ ಹಾಲು ಮೊಸರು ಮಾರುವ ಗೌಳಗಿತ್ತಿಯ ಪಾತ್ರ, ಇದೇ ರೀತಿ ಕೃಷ್ಣ,ದೂತಿ ಮೊದಲಾದ ಪಾತ್ರಗಳು ಸರಿಸಮವಾಗಿವೆ. ಅದೇ ರೀತಿ ಕೃಷ್ಣ, ರುಕ್ಮಿಣಿ, ಸತ್ಯಭಾಮೆಯರ ಕೋಪ-ತಾಪ, ಸಮಾಗಮ, ಹಾಲು ಮೊಸರು ಮಾರುವ ಸನ್ನಿವೇಶ, ಮಥುರಾ ಪಟ್ಟಣ, ಪಾರಿಜಾತ ಹೂವಿನ ಪ್ರಸ್ತಾಪ, ಕುಂಜವನ, ಮೊದಲಾದ ಸನ್ನಿವೇಶಗಳನ್ನು ಮರಾಠಿ ತಮಾಶಾದಲ್ಲಿಯೂ ಕಾಣಬಹುದಾಗಿದೆ. ಅದೇ ರೀತಿ **ಪೊವಾಡಾ** ಮರಾಠಿ ಸಾಹಿತ್ಯದ ವಿಶೇಷ ಪ್ರಕಾರ. ಇದರಲ್ಲಿ ಶೂರರ ಶಕ್ತಿ, ವೀರಗಾಥೆ, ಶಕ್ತಿ-ಸಾಮರ್ಥ್ಯ ಕೀರ್ತಿ, ಸ್ತುತಿ, ವೀರಪರಾಕ್ರಮ, ಪೌರಾಣಿಕ, ಸಾಮಾಜಿಕ ಕಥಾಪ್ರಸಂಗ, ಕಾವ್ಯಾತ್ಮಕ ವರ್ಣನೆ ವೀರ ಶೃಂಗಾರರಸ ಮೊದಲಾದವುಗಳಿವೆ. ಉದಾ: ಶಿವಾಜಿ ಮಹಾರಾಜ, ಜಿಜಾಬಾಯಿ, ಪೇಶ್ವೆ, ತಾನಾಜಿ, ಮಾಲುಸರೆ, ಅಪಝುಲಖಾನಾಚಾ ವಧಾ, ಸವಾಯಿ ಮಾಧವರಾವ, ಗಿಲಿಜಾದುರ್ಗ ಹೀಗೆ ಹಲವಾರು ವಿಷಯಗಳ ಮೇಲೆ ಪೊವಾಡಾಗಳನ್ನು ಶಾಹೀರಗಳು ರಚಿಸಿ ಹಾಡುತ್ತಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನಮ್ಮಲ್ಲಿ ಪ್ರಚಲಿತವಿರುವ ರಾಣಿ ಚೆನ್ನಮ್ಮನ ಕುರಿತ ಲಾವಣಿ, ಶೂರ ಸಂಗೊಳ್ಳಿ ರಾಯಣ್ಣನ ಲಾವಣಿ, ನರಗುಂದ ಬಾಬಾ ಸಾಹೇಬನ ಲಾವಣಿ, ಚೆನ್ನವ್ವನ ಸೊಸೆ ಹೊಂಗಲ ಬಿಟ್ಟುಹೋಗುವಾಗಿನ ಪ್ರಸಂಗದ ಲಾವಣಿ, ಹಲಗಲಿಯ ಬೇಡರನ್ನು ಕುರಿತ ಲಾವಣಿ ಹೀಗೆ ಹಲವಾರು ಲಾವಣಿಗಳನ್ನು ಹೆಸರಿಸಬಹುದಾಗಿದೆ. **ಲಾವಣಿಯನ್ನು** ಕುರಿತು ಗಮನಿಸಿದಾಗ ಮರಾಠಿಯಲ್ಲಿ ಭೇದಿಕ ಲಾವಣಿ, ಬೈಟಕ್ ಲಾವಣಿ, ಶೃಂಗಾರ ಗೀತೆ, ಕಲ್ಗಿ-ತುರಾ, ಹರದೇಶಿ-ನಾಗೇಶಿ, ಶಿವ-ಶಕ್ತಿ, ಬ್ರಹ್ಮ-ಮಾಯಾ ಹೀಗೆ ಹಲವಾರು ವಿಷಯಗಳಲ್ಲಿ ಕನ್ನಡ -ಮರಾಠಿ ಲಾವಣಿಗಳಲ್ಲಿ ಸಾಮ್ಯತೆಗಳಿವೆ. ಹಿನ್ನೆಲೆಯ ವಾದ್ಯಗಳಾಗಿ ಡಫ್, ಡೋಲಕಿ, ತುಂತುಣಿ, ಚಿಟಕಿ, ಗುಂಗರುಗಳನ್ನು ಬಳಸುತ್ತಾರೆ. ನಮ್ಮಲ್ಲಿಯಂತೆ ಮರಾಠಿಯಲ್ಲಿಯೂ ಸವಾಲ್-ಜವಾಬ್‌ಗಳನ್ನು ಹಾಕಿ ಲಾವಣಿಗಳನ್ನು ಹಾಡುತ್ತಾರೆ.

ಇವೆಲ್ಲ ವಿಷಯಗಳನ್ನು ಕುಲಂಕೂಷವಾಗಿ ಗಮನಿಸಿದಾಗ ಮರಾಠಿಯ ತಮಾಶಾ, ಪೊವಾಡಾ ಮತ್ತು ಲಾವಣಿಗಳ ಪ್ರಭಾವ ನಮ್ಮ ಲಾವಣಿಗಳ ಮೇಲೆ ಆಗಿರುವ ಸಾಧ್ಯತೆಗಳಿವೆ. ಮಹಾರಾಷ್ಟ್ರದಲ್ಲಿ ಮುಸ್ಲಿಂರು, ಪೇಶ್ವೆ, ಶಿವಾಜಿ ಮಹಾರಾಜ ಮತ್ತು ಬ್ರೀಟಿಷರು ಆಡಳಿತವನ್ನು ನಡೆಸಿದ್ದಾರೆ. ಈ ಹಲವಾರು ಕಾಲಘಟ್ಟಗಳಲ್ಲಿ ಆಂತರಿಕ ವ್ಯವಹಾರ ಕೊಡುಕೊಳ್ಳುವಿಕೆ, ಭಾಷೆ-ಸಂಸ್ಕೃತಿಯ ಪ್ರಭಾವ, ಆವಕ-ಜಾವಕ ಮುಂತಾದ ವಿಷಯಗಳಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ಜನತೆಯ ಬಾಂದವ್ಯ ಮೊದಲಿನಿಂದಲೂ ಬೆಳೆದು ಬಂದಿದೆ. ಕೆಲವು ವಿದ್ವಾಂಸರು ಕನ್ನಡದ ಲಾವಣಿಗಳ ಪ್ರಭಾವ ಮರಾಠಿಯ ತಮಾಶಾ, ಪೊವಾಡಾ ಮತ್ತು ಲಾವಣಿಗಳ ಮೇಲೆ ಆಗಿರಬೇಕೆಂದು ವಾದಿಸಿದರೆ ಮತ್ತೆ

ಕೆಲವರು ಮರಾಠಿಯ ತಮಾಶಾ, ಪೊವಾಡಾ ಮತ್ತು ಲಾವಣಿಗಳ ಪ್ರಭಾವ ಕನ್ನಡ ಲಾವಣಿಗಳ ಮೇಲೆ ಆಗಿದೆ ಎಂದು ವಾದಿಸುತ್ತಾರೆ. ಅದೇನೇ ಇರಲಿ ಮರಾಠಿಯ ತಮಾಶಾ, ಪೊವಾಡಾ ಮತ್ತು ಲಾವಣಿಗಳ ಹೆಚ್ಚಿನ ಪ್ರಭಾವ ಕನ್ನಡ ಲಾವಣಿಗಳ ಮೇಲೆ ಆಗಿರುವ ಸಾಧ್ಯತೆಗಳಿವೆ ಎಂಬುದು ನನ್ನ ವ್ಯಯಕ್ತಿಕ ಅಭಿಪ್ರಾಯವಾಗಿದೆ.

'ಲಾವಣಿ' ಹಾಡುಗಳನ್ನು 'ಡಪ್ಪಿನ ಹಾಡು', 'ಗೀ ಗೀ' ಅಥವಾ 'ಜೀ ಜೀ ಪದ', 'ಹಾಡಕ್ಕಿ' ಅಲ್ಲದೆ, ಕ್ವಚಿತ್ತಾಗಿ 'ಶಾಯರಿ' ಎಂಬ ಪರ್ಯಾಯ ನಾಮಗಳಿಂದ ಕರೆಯಲಾಗುತ್ತದೆ. ಲಾವಣಿ ಹಾಡುಗಳ ಪ್ರಮುಖ ಭಾಗವಾದ 'ಹರದೇಶಿ-ನಾಗೇಶಿ' ಹಾಡುಗಳಿಗೆ 'ಕಲ್ಗಿ-ತುರಾ(ಯಿ)' ಅಥವಾ 'ಹೆಣ್ಣು-ಗಂಡಿನ ಹಾಡು' ಎನ್ನುವುದೂ ಉಂಟು. ಇದುವರೆಗೂ 'ಲಾವಣಿ 'ಕಲ್ಗಿ-ತುರಾ', 'ಹರದೇಶಿ-ನಾಗೇಶಿ' ಎಂಬ ಹಾಡುಗಳಿಗೆ ಈ ಹೆಸರುಗಳು ಹೇಗೆ ಬಂದವು ಎಂಬುದನ್ನು ನಿರ್ಧಿಷ್ಟವಾಗಿ ಗೊತ್ತುಹಚ್ಚಲಾಗಿಲ್ಲ. ಹಲವಾರು ವಿವರಣೆಗಳನ್ನೇನೊ ಕೊಡಲಾಗಿದೆಯಾದರೂ ಅವೆಲ್ಲ ಊಹಾತ್ಮಕ ನೆಲೆಯಲ್ಲಿಯೆ ನಿಂತಿವೆಯೆನ್ನಬೇಕು; 'ಲಾವಣಿ' ಪದಕ್ಕೆ ಕನ್ನಡದಲ್ಲಿ ವುತ್ಪತ್ತಿ ಕಾಣದು. ಇಂದು ಲಾವಣಿ ಎಂಬುದಕ್ಕೆ ಮರಾಠಿಯಲ್ಲಿ 'ಶೃಂಗಾರ'ಗೀತವೆಂದು ಸಾಮಾನ್ಯ ಅರ್ಥವಿದೆ. ಶ್ರೀ ಮ.ವಾ. ಧೋಂಡ ಅವರು ಬರೆದಿರುವ **'ಮರ್‍ಹಾಟೀ ಲಾವಣಿ'** (೧೯೫೬) ಎಂಬ ಪುಸ್ತಕದ ಪ್ರಸ್ತಾವನೆಯಲ್ಲಿ 'ಲಾವಣಿ' ಶಬ್ದದ ವುತ್ಪತ್ತಿ ವಿಷಯವನ್ನು ದೀರ್ಘವಾಗಿ ಚರ್ಚಿಸಿದ್ದಾರೆ.

೧. "ಹೃದಯಾಲಾ ಚಟಕಾ ಲಾವತೇ ತೀ ಲಾವಣಿ' (ಹೃದಯಕ್ಕೆ ತೀವ್ರ ಆಘಾತವನ್ನುಂಟುಮಾಡುವುದು, ಚುರುಕು ಹಚ್ಚುವುದು).

೨. ಶೇತಾತ ಲಾವಣಿ ಕರತಾನಾ ಮಟಲೇ ಜಾತೇ ತೇ ಲಾವಣಿ ಗೀತ (ಹೊಲದಲ್ಲಿ ಬಿತ್ತಿಗೆ ಮಾಡುವಾಗ ಹೇಳುವ ಹಾಡು).

೩. 'ಲೂ' (ಸಂಸ್ಕೃತ) ಅಂದರೆ ಕೊಯ್ಯುವುದು, ಇದರಿಂದ ಲಾವಣಿ ಬೆಳೆ ಕೊಯ್ಯುವಾಗ ಹೇಳುವ ಹಾಡು.

೪. 'ಲವಣ' ಎಂದರೆ 'ಸುಂದರ'; ಇದರಿಂದ ಭಾವವಾಚಕನಾಮ ಲಾವಣಿ. ಲಾವಣಿಗಳಲ್ಲಿ ಸೌಂದರ್ಯ-ವಿಶೇಷವಾಗಿ ಸ್ತ್ರೀಸೌಂದರ್ಯದ ವರ್ಣನೆ ಇರುವುದರಿಂದ 'ಲಾವಣಿ' ಎಂಬ ಹೆಸರು ಬಂದುದು.

೫. ಸಂಸ್ಕೃತ ಶಬ್ದ 'ಲಾಪನಿಕಾ' ಇದರಿಂದ ಲಾವಣಿ ಪದ ಸೃಷ್ಟಿಗೊಂಡಿದೆ".[೨೪]

ಶ್ರೀ ಮ.ವಾ. ಧೋಂಡ ಅವರು 'ಲಾವಣಿ' ಶಬ್ದಕ್ಕೆ ತಮ್ಮದೇ ಆದ ಕೆಲವು ಅಭಿಪ್ರಾಯಗಳನ್ನು ಕೊಡಲು ಪ್ರಯತ್ನಿಸಿದ್ದಾರೆ. ಆದರೆ ಇದು ಅವರ ವಯಕ್ತಿಕ ಅಭಿಪ್ರಾಯ. ಅವರು ಚರ್ಚಿಸಿರುವ ವಿಷಯಗಳಿಂದಲೇ 'ಲಾವಣಿ' ಶಬ್ದ ಹಿಗೆಯೇ ಹುಟ್ಟಿಕೊಂಡಿದೆ ಎಂದು ಹೇಳುವದು ಸಮಂಜಸವೆನಿಸಲಾರದು.

---

೨೪. ಸಂ. ಡಾ. ಆರ್.ಸಿ.ಹಿರೇಮಠ : *'ಜಾನಪದ ಸಾಹಿತ್ಯ ದರ್ಶನ ಭಾಗ-೧'* (ಪ್ರಹ್ಲಾದಕುಮಾರ ಭಾಗೋಜಿ ಅವರ ಲೇಖನ.-ಲಾವಣಿ) ಪುಟ ೨೨೩-೨೨೪.

"ಕನ್ನಡದಲ್ಲಿ ಲಾವಣಿ ಸಾಹಿತ್ಯದ ಚರಿತ್ರೆಯನ್ನು ಬಹಳ ಹಿಂದಕ್ಕೆ ಒಯ್ಯಲು ಸಾಧ್ಯವಾಗಿಲ್ಲ. ಇದುವರೆಗೆ ನಮಗೆ ದೊರೆತಿರುವ ಲಾವಣಿ ಸಾಹಿತ್ಯವನ್ನು ಗಮನಿಸಿದರೆ ಸುಮಾರು ಇನ್ನೂರು ವರುಷಗಳಷ್ಟು ಹಿಂದೆ ಇದರ ಚರಿತ್ರೆಯನ್ನು ಒಯ್ಯಬಹುದಾಗಿದೆ. ಈ ಮಧ್ಯೆ ಲಾವಣಿ, ಲಾವಣಿಗೆ ಎಂಬ ಪದಗಳು ಕುಮಾರವ್ಯಾಸ ಮತ್ತು ಕುಮಾರವಾಲ್ಮೀಕಿಗಳ ಕಾವ್ಯಗಳಲ್ಲಿ ಸಿಗುತ್ತಿರುವುದನ್ನು ಎತ್ತಿ ತೋರಿಸಲಾಗಿದೆ."[೨೫] ಆದರೆ ಈ ಶಬ್ದಗಳಿಗೆ ಲಾವಣಿ ಎಂಬ 'ಹಾಡಿನ ಪದ್ಧತಿ'ಯೆಂಬ ಅರ್ಥವಿಲ್ಲ. ಆದುದರಿಂದ ಅಷ್ಟು ಪೂರ್ವದಲ್ಲಿ ಲಾವಣಿಯೆಂಬ, ಇಂದಿನ ಹೆಸರು ಮತ್ತು ಅರ್ಥ- ಹೊಂದಿದ ಹಾಡುಗಾರಿಕೆ ಇತ್ತೆಂದು ಹೇಳಲಾಗುವುದಿಲ್ಲ. ಗುಣಚಂದ್ರನ (೧೭೦೦) ಛಂದಸ್ಸಾರದಲ್ಲಿ ಬರುವ

"ಲಘುಗಳ ಮಿಳಿತವ ಮಾಡಿ
ಕೊನೆಯಲಿ ಗುರುಗಳ ಕೂಡಿ
ಅರ್ಥದ ಸಾರವ ನೋಡಿ
ಪ್ರಾಸವ ಕೊನೆಯಲಿ ಕೂಡಿ
ಪಾದಮಿತಿಯ ಬೀಸಾಡಿ
ಲಾವಳಿ ಕೃತಿಗಳ ಪಾಡಿ"

ಎಂಬ ಲಕ್ಷಣ ಪದ್ಯವನ್ನು ಎತ್ತಿಹಿಡಿದು "ಗುಣಚಂದ್ರನ ಕಾಲಕ್ಕೆ ಲಾವಣಿ ಪ್ರತಿಷ್ಠೆಯನ್ನು ಪಡೆದಿತ್ತೆಂದೂ ಅವನು ಕಂಡಂತೆ ಅದರ ಒಂದು ಲಕ್ಷಣ ಮೇಲಿನ ರೀತಿಯದೆಂದೂ ಊಹಿಸಬಹುದು."[೨೬] ಎಂದು ಅಭಿಪ್ರಾಯ ಪಡಲಾಗಿದೆ. ಈ ಪದ್ಯದಲ್ಲಿ ಅಂತ್ಯಪ್ರಾಸ, ಕೊನೆಯ ಗುರು ಮತ್ತು ಅನಿರ್ದಿಷ್ಟ ಪಾದಸಂಖ್ಯೆ ಎಂಬ ಎರಡು ಮೂರು ಲಕ್ಷಣಗಳನ್ನು ಮಾತ್ರ ಸೂಚಿಸಲಾಗಿದೆ. ಈ ಲಕ್ಷಣ ಪದ್ಯದ ಭಾಷೆಯೇ ಆಧುನಿಕವಾಗಿರುವುದರಿಂದ ಇದು ಎಷ್ಟರಮಟ್ಟಿಗೆ ವಿಶ್ವಾಸಾರ್ಹ ಎಂದು ಸಂದೇಹ ಮೂಡುತ್ತದೆ. ಮೇಲಾಗಿ ಈ ಲಕ್ಷಣಗಳುಳ್ಳ ಸಾಹಿತ್ಯವೂ ಸಿಕ್ಕಿಲ್ಲ. ಛಂದಸ್ಸಿನ ಗ್ರಂಥಗಳಲ್ಲಿ ಅನಂತರದವರೂ ಪ್ರಕ್ಷಿಪ್ತ ಪದ್ಯಗಳನ್ನು ಸೇರಿಸಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ನಾಗವರ್ಮನ ಛಂದೋಂಬುಧಿಯಲ್ಲೂ ಇದನ್ನು ಗುರುತಿಸಲಾಗಿದೆ. ಕಿರಿಯರ ವಿಶ್ವಕೋಶದಲ್ಲಿ: ಹೀಗೆ ವರ್ಣಿಸಲಾಗಿದೆ.

"ಪುಟ್ಟಿ ಇಲ್ಲಿಗೆ ತುರಾ ಕಲ್ಗಿ ಚರ್ಚೆ ತಿಳಿಯದೋ ಜಾಹೀರಾ
ಒಂದು ಸಾವಿರಾ ಒಂಬೈನೂರ ವರ್ಷಗಳ ಮ್ಯಾಲ ಚೆಲ್ಲರಾ"

---

೨೫. ಸಂ.ಡಾ.ಬಿ.ಬಿ.ಹೆಂಡಿ, ಡಾ. ಎಂ.ಜಿ. ಬಿರಾದಾರ, ಡಾ.ಎಂ.ಎಸ್.ಲಠ್ಠೆ : 'ಕುಮಾರವ್ಯಾಸ ಭಾರತ'-೧-೭-೨೬,೨-೧೩-೨೬,೨-೨-೧೯,೩-೧೩-೧೮,೬-೨- ೧೭,೮-೩-೩ ಕುಮಾರ ವಾಲ್ಮೀಕಿ-೬-೧೪-೧೮,೬-೪೯-೩೭.(ಉಧೃತ: ಹರದೇಶಿ-ನಾಗೇಶಿ. ಪುಟ XI, ೨೦೦೮)

೨೬. ಡಾ.ಎಲ್.ಬಸವರಾಜು : 'ಕನ್ನಡ ಛಂದಸ್ಸು,' ಪೀಠಿಕೆ, ೧೯೭೪, ಪುಟ IXV ಸಾ.೨

೨೭. ಎಂ.ಜಿ. ಬಿರಾದಾರ (ಲೇ) : 'ಜಾನಪದ ಸಮಾಲೋಚನ'. ೧೯೮೧.

ಎಂಬ, ಅಧಿಕೃತವಲ್ಲದ ಸಾಲುಗಳನ್ನು ಕೊಡಲಾಗಿದೆ."[೨೭]. ಇಲ್ಲಿ ಕನ್ನಡ ಲಾವಣಿ ಸಾಹಿತ್ಯದ ಪ್ರಾಚೀನತೆಯನ್ನು ಕುರಿತು ಗಮನಿಸಿದಾಗ 'ಫ್ಲೀಟರು ಸಂಗ್ರಹಿಸಿದ ಲಾವಣಿಗಳು' ಇದರಲ್ಲಿ 'ಗಿಲಿಜಾ ದುರ್ಗದ ಪೊವಾಡಾ (ಗಿಲಿಜಾ ದುರ್ಗದ ಮೇಲೆ ದಂಡೆತ್ತಿ ನಡೆದ ನಾನಾಭಾವೂನ ಲಾವಣಿ ಕಥೆ) ದಲ್ಲಿ "ಶಕೆ ೧೬೬೫ ರಲಿ ಒಂಬತ್ತು ರಾತ್ರಿ ಒಂಬತ್ತು ಹಗಲು ಹೋರಾಡಿದ ಅನಂತರ ಆದಿತ್ಯವಾರದ ದಿವಸ ಎಲ್ಲ ಶೂನ್ಯವಾಯಿತು ಎಂದು ಪೊವಾಡಾದಲ್ಲಿ ಉಲ್ಲೇಖಿಸಿದೆ. ಉತ್ತರ ಕರ್ನಾಟಕದ ಬೆಳಗಾಂವ, ಧಾರವಾಡ, ಕಾರವಾರ ಮತ್ತು ವಿಜಾಪುರ ಜಿಲ್ಲೆಗಳು ಅಂದಿನ ಮುಂಬೈ ಪ್ರಾಂತ್ಯಕ್ಕೆ ಒಳಪಟ್ಟಿತ್ತು. 'ಪೊವಾಡಾ' ಮರಾಠಿ ಶಬ್ದವೇ ಲಾವಣಿಗೆ ಮೂಲವೆಂದು ಹೇಳುತ್ತಾರೆ. ಪೇಶ್ವೆಯವರ ಕಾಲದಲ್ಲಿ ಕನ್ನಡದಿಂದಲೇ ಮರಾಠಿಗೆ ಹೋಗಿರಬಹುದೆಂದು ಕೆಲವರ ವಾದ. ಅಕ್ಬರನ ಕಾಲದಲ್ಲಿಯೂ ಪ್ರಸಿದ್ಧ ಲಾವಣಿಕಾರರಿದ್ದರು. ಆದಿಲ್‌ಷಾಹಿಗಳ ಕಾಲದಲ್ಲಿಯೂ ಖವಾಲಿ ಮತ್ತು ಲಾವಣಿ ಹಾಡುವವರಿದ್ದರು. ಇವೆಲ್ಲ ವಿಷಯಗಳನ್ನು ಕುಲಂಕೂಷವಾಗಿ ಗಮನಿಸಿದಾಗ ತಮಾಶಾ, ಪೊವಾಡಾ ಅಥವಾ ಲಾವಣಿ ಈ ಕಲಾ ಮೇಳಗಳು ಕನ್ನಡ ಲಾವಣಿಯ ಮೇಲೆ ಪ್ರಭಾವ ಬೀರಿರುವ ಸಾಧ್ಯತೆಗಳಿವೆ. ಆದ್ದರಿಂದ ಕನ್ನಡದಲ್ಲಿಯೂ ಸುಮಾರು ೧೭–೧೮ ನೇ ಶತಮಾನದಿಂದಲೇ ಲಾವಣಿಗಳು ಪ್ರಚಲಿತದಲ್ಲಿರಬೇಕೆಂದು ಊಹಿಸಬಹುದು.

ಪಾಶ್ಚಿಮಾತ್ಯರ ಜಾನಪದ ಅಧ್ಯಯನದ ಹಿನ್ನೆಲೆ :

ಇ.ಬಿ. ಟೈಲರ್ ಪ್ರತಿಪಾದಿಸಿದ 'ಮಾನವಶಾಸ್ತ್ರಾಧಾರಿತ ಪಳೆಯುಳಿಕೆ ಸಿದ್ಧಾಂತ', ಬಿಷಪ್ ಪರ್ಸಿ ಪ್ರತಿಪಾದಿಸಿದ, ಗ್ರಿಮ್ ಸೋದರರಿಂದ ಮತ್ತು ಸರ್ ವಾಲ್ಟರ್ ಸ್ಕಾಟ್‌ನಿಂದ ಪುಷ್ಟೀಕರಿಸಲ್ಪಟ್ಟ 'ಸಾಹಿತ್ಯಕ ದೃಷ್ಟಿ ಸಿದ್ಧಾಂತ'– ಇವುಗಳು ೨೦ನೆಯ ಶತಮಾನದವರೆಗೆ ಬಂದ ಅನೇಕ ಪ್ರಸಿದ್ಧ ಜಾನಪದತಜ್ಞರನ್ನು ಒಂದೇ ಸಮನೆ ವಿಚಾರಕ್ಕೊಳಮಾಡಿವೆ. ಇದೆಲ್ಲದರ ಪರಿಣಾಮವಾಗಿ, ಜನಪದಗೀತ ಸಾಹಿತ್ಯವನ್ನು ವಿಶೇಷವಾಗಿ ವಿವೇಚನೆ ನಡೆಸಿದ ಮುಖ್ಯರ ಪೈಕಿ, ಅಮೆರಿಕದ ತಜ್ಞರಾದ ಫಿಲಿಪ್ಸ್ ಬ್ಯಾರಿ ಮತ್ತು ಹೆನ್ರಿ ಮಾರ್ವಿನ್ ಬೆಲ್ಡನ್ ಅವರಿಂದ ಹಿಡಿದು ಫ್ರಾನ್ಸಿಸ್ ಜೆ.ಜೈಲ್ಡ್, ಗೋರ್ಡನ್ ಹಾಲ್ ಗೆರೋಲ್ಡ್, ಎಂ.ಹಾಡ್ಜೆನ್, ಥಿಯೊಡರ್ ಗ್ಯಾಸ್ಟರ್, ಜೇಮ್ಸ್ ಜಾರ್ಜ್ ಫ್ರೇಜರ್, ವಿಲಿಯಂ ಆರ್.ಬಾಸ್ಕಂ, ಜೆ.ಜೆ.ರೂಸೊ, ಆಲ್ಬರ್ಟ್ ಬಿ.ಫ್ರೈಡ್‌ಮನ್, ಜಾರ್ಜ್ ಎಲ್.ಗೊಮ್ಮ್, ಡೊಗ್ಲಾಸ್ ಜೆ.ಮ್ಯಕ್ ಮಿಲ್ಲನ್, ಆನ್ರೂ ಲಾಂಗ್, ವಿಲ್ಗಸ್, ಗುಮ್ಮರೆ,ಲೂಯಿಸ್ ಪೌಂಡ್, ಫ್ಯಾನಿ ಡಿ. ಬರ್ಗೆನ್, ಜಾನ್ ಎ. ಲೊಮಾಕ್ಸ್, ಜೆ.ಎಲ್.ಕಿಟ್ರೆಡ್ಜ್, ಫ್ರಾನ್ಸ್, ರಿಕಬಿ, ಸಿಸಿಲ್ ಜೆ.ಶಾರ್ಪ್, ಮಾಡ್ ಕಾರ್ಪೆಲಿಸ್, ಮ್ಯಾಕ್ ಎಡ್ವರ್ಡ್ ಲೀಚ್, ಅರ್ಥರ್ ಪಾಮರ್, ಹಡ್ಸನ್, ಓಡುಂ - ರಿಚರ್ಡ್ ಎಂ.ಡೋರ್ಸನ್, ಅಲೆನ್ ಡಂಡಿಸ್, ಸ್ಟಿತ್ ಥಾಮ್ಸನ್(೧೯೭೬) ಮುಂತಾದವರವರೆಗೆ ಈ ವಿವೇಚನೆ ಮುಂದುವರಿದುಕೊಂಡು ಬಂದಿರುವುದು ಜಾನಪದ ಕ್ಷೇತ್ರದ ಮಹತ್ವವನ್ನು ವಿವಿಧ ವಿದ್ವಾಂಸರ ಗಣನೀಯ ಸೇವೆಯನ್ನು ಮನವರಿಕೆ ಮಾಡಿಕೊಡುತ್ತದೆ."[೨೮] ಭಾರತದೇಶದಲ್ಲಿಯೂ ಜಾನಪದ ಅಧ್ಯಯನಕ್ಕೆ ಶ್ರೀಕಾರ ಹಾಕಿದವರು ಪಾಶ್ಚಿಮಾತ್ಯರು ಎಂಬುದನ್ನು ಮರೆಯುವಂತಿಲ್ಲ.

ಭಾರತೀಯ ಜಾನಪದ ಅಧ್ಯಯನದ ಹಿನ್ನೆಲೆ :

ಭಾರತೀಯ ಜಾನಪದ ಅಧ್ಯಯನದ ಹಿನ್ನೆಲೆಯನ್ನು ಗಮನಿಸಿದರೆ ಫ್ರಾನ್ಸ್ ದೇಶದ ಕ್ರೈಸ್ತ ಧರ್ಮಪ್ರಚಾರಕರಾದ **ಅಬೆ ಜೆ.ಎ.ದುಬೊಯಿಸ್** ಅವರು (೧೭೭೦--೧೮೪೮)ರಲ್ಲಿ ರಚಿಸಿದ ***'Hindu Manners Customs and Ceremnies'*** ಎನ್ನುವ ಗ್ರಂಥವು ಭಾರತೀಯ ಜಾನಪದ ಅಧ್ಯಯನದ, ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದ ಅಧ್ಯಯನದ ಮೊದಲ ಅಧೀಕೃತ ಗ್ರಂಥ ಎನ್ನುವ ಖ್ಯಾತಿಪಡೆದಿದೆ. **ದುಬೊಯಿಸ್** ಅವರು ಕ್ರೈಸ್ತ ಧರ್ಮಪ್ರಸಾರ ಕಾರ್ಯದ ಜೊತೆಗೆ ಶ್ರೀರಂಗಪಟ್ಟಣ ಹಾಗೂ ಹಾಸನ ಜಿಲ್ಲೆಯ ಸಾತಹಳ್ಳಿಯಲ್ಲಿ ನೆಲೆಸಿ ಜಾನಪದರ ಸೇವಾ ಕಾರ್ಯ ಮತ್ತು ಕನ್ನಡ ಜಾನಪದ ಸಂಸ್ಕೃತಿ ಕುರಿತು ಪ್ರಾಮಾಣಿಕ ಕೆಲಸಮಾಡಿದ್ದನ್ನು ಈ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

Annals and Antiquities of Rajasthan' (೧೮೨೯) ಎನ್ನುವುದು **ಕರ್ನಲ್ ಟೋಡ್** ಅವರ ಪ್ರಸಿದ್ಧ ಕೃತಿಯಾಗಿದೆ. **ಟೋಡ್** ಅವರು ರಾಜಸ್ಥಾನ ಪ್ರದೇಶದಲ್ಲಿ ಸಂಚರಿಸಿ ರಾಜಸ್ಥಾನದ ಪ್ರಾಚೀನ ಪರಂಪರಾಗತ ಐತಿಹ್ಯ ಪುರಾಣ, ವೀರಗಾಥೆ, ಜನಪದ ನಂಬಿಕೆ, ಆಚರಣೆ ಮುಂತಾದ ವಿಷಯಗಳನ್ನು ಸಂಗ್ರಹಿಸಿ ಭಾಷಾಂತರಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ಹಾಗೆಯೇ **ಸಿ.ಸ್ವಿನ್ನರಟನ್** ಅವರು ವೀರನಾಡೆನಿಸಿದ ಪಂಜಾಬಿನ ಜನಪದ ಕತೆಗಳನ್ನು ತುಂಬಾ ಆಸ್ಥೆಯಿಂದ ಸಂಗ್ರಹಿಸಿ ***'Romantic Tales from Punjab'*** ಎಂಬ ಹೆಸರಿನಿಂದ ಹೊರತಂದಿದ್ದಾರೆ. **ಆರ್.ಸಿ. ಟೆಂಪಲ್** ಅವರು ***'The Punabi Lyrics and Proverbs'*** ಎಂಬ ಕೃತಿಯನ್ನು ರಚಿಸಿದರೆ, ***'The Tales of the Punjab'*** ಎನ್ನುವ ಕೃತಿಯುನ್ನು **ಸಿ.ಎಫ್. ಓಸ್‌ಬೋರ್ನ್** ಅವರು ರಚಿಸಿದ್ದಾರೆ. **ಎಫ್.ಎ.ಸ್ಟೀಲ್** ಅವರು ***'The tales of the Punjab'*** ಎಂಬ ಕೃತಿ ರಚಿಸಿದ್ದಾರೆ. ಹಾಗೆ ನೋಡಿದರೆ ***'Hatim's Tales'*** ಎಂಬ ಹೆಸರಿನ ಕಾಶ್ಮೀರದ ಜನಪದ ಕಥಾ ಸಂಕಲನವೊಂದು ೧೯ನೇ ಶತಮಾನದಲ್ಲಿ ಪ್ರಕಟವಾಗಿರುವುದು ಕಂಡುಬರುತ್ತದೆ. ಇನ್ನು **ರೆವರೆಂಡ್ ವಿಲಿಯಂ ಮಾರ್ಟನ್** ಅವರು ರಚಿಸಿದ ***'A Collection of Proverbs, Bengali and Sanskrit with their Translation and application in English'*** ಎಂಬ ಕೃತಿಯು ಕಲ್ಕತ್ತೆಯಿಂದ ೧೮೮೩ರಲ್ಲಿ ಪ್ರಕಟವಾದ ವಿಶಿಷ್ಟ ಕೃತಿ ಎನಿಸಿದೆ. **ರೆವರೆಂಡ್ ಜೇಮ್ಸ್ ಲಾಂಗ್** ಅವರ ***'Bengali Proverbes'*** ಎಂಬ ಕೃತಿಯು ೧೮೫೧ರಲ್ಲಿ ಪ್ರಕಟವಾಯಿತು. **ರವಿಪತಿ ಗುರುವಾಯೂರು** ಅವರು ***'A collection of Telugu proverbs'*** ಎಂಬ ಕೃತಿಯನ್ನು ೧೮೬೮ ರಲ್ಲಿ ಪ್ರಕಟಿಸಿದರು. **ಶ್ರೀಮತಿ ಮೇರಿ ಫ್ರೇರ್** ಅವರು ಸಂಗ್ರಹಿಸಿ ೧೮೬೮ರಲ್ಲಿ ಪ್ರಕಟಿಸಿದ ಮಹಾರಾಷ್ಟ್ರದ ೨೪ ಜನಪದ ಕತೆಗಳ ***'Old Deccan Days'*** ಎಂಬ ಇಂಗ್ಲೀಷ ಗ್ರಂಥವು ಅರ್ಥಪೂರ್ಣವಾಗಿ ಮೂಡಿಬಂದಿದೆ.

---

೨೮. ಡಾ. ಸಂ. ತಪಸ್ವೀಕುಮಾರ : 'ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ', ೧೯೮೧, ಪುಟ. ೬೧.

ರೆವರೆಂಡ್ ಪಿ. ಪರ್ಸಿವಲ್ ಅವರು ೧೮೭೪ ರಲ್ಲಿ ***'Tamil proverbs'*** ಎಂಬ ಕೃತಿಯನ್ನು **ಜೆ.ಜೆ.ಸ್ವೀಕರ್** ಅವರು ೧೮೭೨ ರಲ್ಲಿ ***'Marathi Proverbs'*** ಎಂಬ ಗ್ರಂಥವನ್ನು ರಚಿಸಿದರು. ೧೮೭೧ರಲ್ಲಿ **ಚಾರಲ್ಸ್ ಇ.ಗೋವರ್** ಅವರ ***'The Folksongs of Southern India'*** ಕೃತಿ ಪ್ರಕಟವಾಯಿತು. ನಂತರ ೧೮೭೨ ರಲ್ಲಿ **ರೆವರೆಂಡ್ ಎಫ್ ಕಿಟ್ಟೆಲ್‌ರ** ***'On the Dravidian Element in Sanskrit Dictionaries'.*** ಕೃತಿ ಪ್ರಕಟವಾಯಿತು. **ಶ್ರೀ ವಿ.ಎನ್.ನರಸಿಮ್ಮೆ** ಅಯ್ಯಂಗಾರ ಅವರ ***'The Bhutas of Nagara Malnad in Maisur'*** ಮಲೆನಾಡಿನ ಭೂತಾರಾಧನೆಯ ವಿಷಯವನ್ನೊಳಗೊಂಡ ಲೇಖನವಾಗಿದೆ. ೧೮೭೪ರಲ್ಲಿ ಬರೆದ **ಕರ್ನಲ್ ಮೆಕಂರಿಖಿ, ಮೋನಿಯರ್ ವಿಲಿಯಮ್ಸ್, ಜೇಮ್ಸ್ ವಿಲ್ಸನ್, ಸಿ.ಇ.ಗೋವರ್, ಆರ್.ಸಿ.ಟೆಂಪಲ್, ಜಿ.ಎ.ಗ್ರಿಯರಸನ್** ಪ್ರಕಟಸಿದ ಭೋಜಪುರಿ ಮಹಾಕಾವ್ಯ ಮೊದಲಾದ ವಿದ್ವಾಂಸರು ಜಾನಪದ ಅಧ್ಯಯನ ಹಾಗೂ ಭಾರತೀಯ ಸಂಸ್ಕೃತಿಯ ಮೂಲಚೂಲಗಳನ್ನು ಅಧ್ಯಯನ ಮಾಡುವುದರಲ್ಲಿ ಪ್ರಯತ್ನಿಸಿದ್ದಾರೆ. ಕನ್ನಡ ಜನಪದ ಗೀತೆ ಲಾವಣಿ ಸಂಗ್ರಹಣೆ ಹಾಗೂ ವಿಶ್ಲೇಷಣೆಯ ದೃಷ್ಟಿಯಿಂದ ಪ್ರಥಮ ಪ್ರಯತ್ನ ನಡೆಸಿದ **ಜಾನ್ ಎಫ್.ಫ್ಲೀಟರು** ***'A Selection of Kannarese Ballads'*** ಎಂಬ ಲೇಖನಮಾಲೆಯನ್ನು ೧೮೮೫ರ ***'Indian Antiquary'*** "[೨೯] ಯಲ್ಲಿ ಆರಂಭಿಸಿ ೧೮೯೦ರ ವರೆಗಿನ ಐದು ಸಂಪುಟದಲ್ಲಿ ಮುಗಿಸಿದರು. ಇವು ಅನೇಕ ವಿದ್ವಾಂಸರ ಗಮನ ಸೆಳೆದವು."[೩೦]

---

೨೯. I.A.Vol.XIV, Nov.1885, 'The Insurrction of Rayanna of Sangolli, pp.293-303 , I. A.Vol.XV, Dec.1886, 'The Income Tax', pp. 349-353, I.A.Vol.XVI Dec. 1887, 'The Bedas of Halagali, pp.356-361, I.A. Vol.XVIII, Dec.1889, 'The Crime and Death of Sangya, pp. 353-362, I.A.Vol.XIX, Dec. 1890, The Daughter-in-law of Channavva of Kittur', pp. 413-423. ಸುಪ್ರಸಿದ್ಧವಾದ ಈ ಐದು ಲಾವಣಿಗಳ. ಕನ್ನಡ ಸಂಗ್ರಹ 'ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು' ಸಂಪಾದಕರು: ಕ್ಯಾತನಹಳ್ಳಿ ರಾಮಣ್ಣ : ಪ್ರಕಾಶಕರು: ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಮಾಲೆ ೧೯೭೨, ಮೈಸೂರು ವಿಶ್ವವಿದ್ಯಾಲಯ ಉಧೃತ: ಡಾ. ನಂ. ತಪಸ್ವೀಕುಮಾರ : *"ಜಾನಪದದ ಸಂಕ್ಷಿಪ್ತ ಇತಿಹಾಸ"*; ೧೯೮೧, ಪುಟ ೬೧.

೩೦. *'ಫ್ಲೀಟ್‌ರು ಸಂಗ್ರಹಿಸಿದ ಲಾವಣಿಗಳು'* ಕೃತಿಯಲ್ಲಿ ಧಾರವಾಡ, ಬೆಳಗಾವಿ ಮತ್ತು ವಿಜಾಪುರ (ಅಂದಿನ ಮುಂಬೈ ಪ್ರಾಂತ್ಯದಲ್ಲಿ) ಜಿಲ್ಲೆಗೆ ಸೇರಿದವುಗಳೆಂಬುದಂತೂ ನಿಜ. ಜಾನ್ ಫ್ಲೀಟರು ೧೮೬೭ ರಲ್ಲಿ ಭಾರತಕ್ಕೆ ಬಂದರು. ಅವರು ಮುಂಬೈ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟಂಟ್ ಕಲೆಕ್ಟರ್ ಹುದ್ದೆಗೆ ಸೇರಿದರು. ಆ ಮೇಲೆ ಕೊಲ್ಲಾಪುರ, ಸೋಲಾಪುರ ಮುಂತಾದ ಕಡೆಗಳಲ್ಲಿ ವಿದ್ಯಾಧಿಕಾರಿ, ಅಸಿಸ್ಟಂಟ್ ಪೋಲಿಟಿಕಲ್ ಏಜೆಂಟ್, ಶಾಸನಶಾಸ್ತ್ರಜ್ಞ, ಜೂನಿಯರ್ ಕಲೆಕ್ಟರ್, ಸಿನಿಯರ್ ಕಲೆಕ್ಟರ್, ಕಸ್ಟಮ್ಸ್ ಕಮಿಷನರ್ ಇವರು ನಿರ್ವಹಿಸಿದ ಕೆಲವು ಹುದ್ದೆಗಳು. ಇಂಥ ಪ್ರಮುಖ ಹುದ್ದೆಗಳಲ್ಲಿದ್ದುಕೊಂಡು ಕನ್ನಡ ಭಾಷೆ, ಸಾಹಿತ್ಯ, ಶಾಸನಶಾಸ್ತ್ರ ಹಾಗೂ ಲಾವಣಿಗಳ ಬಗ್ಗೆ ಅಧ್ಯಯನ ಮಾಡಿರುವುದನ್ನು ನೋಡಿದರೆ ಯಾರಿಗಾದರೂ ವಿಸ್ಮಯ ಆಗುತ್ತದೆ.

ಕನ್ನಡ ಜಾನಪದ ಅಧ್ಯಯನದ ಹಿನ್ನೆಲೆ

ಕನ್ನಡ ಜಾನಪದ ಸಾಹಿತ್ಯವು ಪ್ರಾಚೀನ ಪರಂಪರೆಯನ್ನು ಹೊಂದಿದ್ದರೂ, ಪಾಶ್ಚಿಮಾತ್ಯ ವಿದ್ವಾಂಸರು ಆ ಕುರಿತು ನಮ್ಮ ಗಮನ ಸೆಳೆದರು. ನಮ್ಮಲ್ಲಿ ಜ್ಞಾನೋದಯವಾಗದೇ ಸಾವಕಾಶವಾಗಿ ನಮ್ಮ ಕಣ್ಣು ತೆರೆದು ಅಧ್ಯಯನದ ಕಾರ್ಯ ಪ್ರಾರಂಭವಾಯಿತು. ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಪ್ರಕಟಿಸುತ್ತಿದ್ದ 'ಪರಿಷತ್ ಪತ್ರಿಕೆಯಲ್ಲಿ (೧೯೧೯ ರಲ್ಲಿ) ಪ್ರಕಟವಾದ **'ಲಾವಣಿಗಳು'** ಎಂಬ ಲೇಖನವೇ ಮೊದಲ ಲೇಖನವಾಗಿದೆ. ಈ ಸಂದರ್ಭದಲ್ಲಿ **ಮಾಸ್ತಿ ವೆಂಕಟೇಶ ಅಯ್ಯಂಗಾರ** ಅವರು ಜನಪದ ಸಾಹಿತ್ಯದ ಕ್ಷೇತ್ರಕಾರ್ಯ ಮಾಡುವ ಕೆಲಸವನ್ನು ಆರಂಭಿಸಿದ್ದರು. ಅವರ ಜನಪದ ಲಾವಣಿಗಳನ್ನು ಕುರಿತು ಸಂಪಾದಕರ ಕೆಲವು ನುಡಿಗಳು ಗಮನಾರ್ಹವೆನಿಸಿವೆ. ೧೯೧೯ರ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ಸಂಪುಟ ಸಂಚಿಕೆ ೪, ಪುಟ ೬೦-೬೧ರಲ್ಲಿ ನಂಜನಗೂಡಿನ ಲಾವಣಿ ಕುರಿತು **ರಾವಬಹಾದ್ದೂರ ಸಿ. ಹನುಮಂತೇಗೌಡರು** ಈ ಕುರಿತು ಒಂದು ಲೇಖನ ಬರೆದಿದ್ದಾರೆ. ೧೯೭೧ರ ಜುಲೈ ತಿಂಗಳಲ್ಲಿ ಇದೇ ಪತ್ರಿಕೆಯಲ್ಲಿ **ಎಚ್.ಕೆ.ಮಲ್ಲಪ್ಪನವರ** 'ಕನ್ನಡ ಗಾದೆಗಳ ಜೀರ್ಣೋದ್ಧಾರ' ಎನ್ನುವ ಲೇಖನ ಸಹ ಪ್ರಕಟವಾಗಿದೆ. ಹಾಗೆಯೇ ೧೯೨೩ ನವಂಬರ್ ತಿಂಗಳಲ್ಲಿ ಬಿಜಾಪುರದಲ್ಲಿ ಜರುಗಿದ ಒಂಭತ್ತನೆಯ 'ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಗೆಳೆಯರ ಗುಂಪಿನ ಪ್ರಮುಖರಾದ **ಮಧುರಚೆನ್ನರು** 'ಹಳ್ಳಿಯ ಹಾಡುಗಳು' ಎಂಬ ಉಪನ್ಯಾಸ ನೀಡಿದರು. ಮುಂದೆ ಹಲವಾರು ಜಾನಪದ ವಿದ್ವಾಂಸರು ಜಯಕರ್ನಾಟಕ ಪತ್ರಿಕೆಯಲ್ಲಿ ಜನಪದ ಸಾಹಿತ್ಯ ಕುರಿತಾದ ಲೇಖನಗಳನ್ನು ಬರೆದರು. ಇವರಲ್ಲಿ ಪ್ರಮುಖವಾಗಿ **ಶ್ರೀಮಾಸ್ತಿ ವೆಂಕಟೇಶ ಅಯ್ಯಂಗಾರ, ಶ್ರೀ ಪ್ರಹ್ಲಾದ ನರೇಗಲ್, ಶ್ರೀ ಬೆಟಗೇರಿ ಕೃಷ್ಣಶರ್ಮ** ಮುಂತಾದವರನ್ನು ಹೆಸರಿಸಬಹುದು. ೧೯೩೧ರಲ್ಲಿ ಪ್ರಥಮ ಮುದ್ರಣ ಕಂಡ **'ಗರತಿಯ ಹಾಡು'** ಜಾನಪದ ಸಾಹಿತ್ಯದ ಅತ್ಯಮೂಲ್ಯ ಶ್ರೇಷ್ಠಕೃತಿಯಾಗಿದೆ. **ಹಲಸಂಗಿ ಗೆಳೆಯರ** ಗುಂಪಿನ ಸಾಮೂಹಿಕ ಶ್ರದ್ಧೆಯಿಂದ ಮೂಡಿ ಬಂದ ಈ ಕೃತಿಯಲ್ಲಿ ೮೦೦ ತ್ರಿಪದಿಗಳಿವೆ. ಜೊತೆಗೆ **ಬೇಂದ್ರೆಯವರ** ಪರಿಚಯಾತ್ಮಕವಾದ ಬರಹವೂ ಇದರಲ್ಲಿದೆ.

ಅವರು ಸಂಗ್ರಹಿಸಿದ ಲಾವಣಿಗಳಲ್ಲಿ ಸಂಬಂಧಿಸಿದ ಹಲಗಲಿ, ಗಲಗಲಿ, ಬಾದಾಮಿ ಮತ್ತು ತೇರದಾಳಕ್ಕೆ ಸಂಬಂಧಪಟ್ಟ ವಿಷಯವನ್ನೊಳಗೊಂಡ ಎಂಟು-ಹತ್ತು ಲಾವಣಿ ಹಾಡುಗಳಿವೆ. (೧೯೭೭ರ ಜಿಲ್ಲಾ ವಿಭಜನೆಯಿಂದಾಗಿ ಇಲ್ಲಿ ಪ್ರಸ್ತಾಪಿಸಿರುವ ಊರುಗಳು ಇಂದು ಬಾಗಲಕೋಟ ಜಿಲ್ಲೆಯಲ್ಲಿ ಬರುತ್ತವೆ). ಫ್ಲೀಟರು ಸಂಗ್ರಹಿಸಿದ ಲಾವಣಿಗಳಲ್ಲಿ 'ಬಾದಾಮಿ ಕಿಲ್ಲೆ ಕೆಡವಿದ ಪದ' (ಬಾಳಿ ಇಂಟಿ ಗುಳೇದಗುಡ್ಡ ೨೯ನೇ ಜಾನೇವಾರಿ ೧೮೭೪) 'ಮಂಡ್ರೋಲ ಸಾಹೇಬರ ಪದ (ಪರಯ್ಯಾ ಬಿಂನ ವೀರಭದ್ರಯ್ಯಾ ಗಣಾಚಾರಿ ಬಾದಾಮಿ ೫ ನೇ ಫೆಬ್ರುಅರಿ ಸನ್ ೧೮೭೪ ಇಸವಿ) 'ಗಲಗಲಿ ದೇಸಾಯಿಯ ಪದ' (ಬಾಳಿ ಇಂಟಿ ಗುಳೆದಗುಡ್ಡ ೩೦ ನೇ ಜಾನೆವಾರಿ ೧೮೭೪) 'ಹಲಗಲಿಯ ಪದ' (ಬಾಳಿ ಇಂಟಿ ಗುಳೇದಗುಡ್ಡ ೩೦ನೇ ಜಾನೆವಾರಿ ೧೮೭೪, ಇ) 'ಕಿತ್ತೂರ ಚೆನ್ನವ್ವ ಪದ' (ಬಾಳಿ ಇಂಟಿ ಗುಳೇದಗುಡ್ಡ ೩೦ ನೇ ಜಾನೆವಾರಿ ೧೮೭೪. ಇ) ಈ ಮೇಲಣ ವಿಷಯದಿಂದ ತಿಳಿದುಬರುವುದೇನಂದರೆ ವಿಜಾಪುರ ಜಿಲ್ಲೆಯಲ್ಲಿ ಜನಪದ ಸಂಗ್ರಹದ ಕಾರ್ಯ 'ಹಲಸಂಗಿ ಗೆಳೆಯರ' ಗಿಂತ ೫೦-೬೦ ವರ್ಷ ಮೊದಲೇ ಆರಂಭಗೊಂಡಿತ್ತು ಎನ್ನಬಹುದು.

ಶ್ರೀ ಬಿ.ಎಂ.ಶ್ರೀಯವರ ಪ್ರೋತ್ಸಾಹದ ಮೇರೆಗೆ ಕಲಬುರ್ಗಿ, ಬೆಳಗಾವಿ ಮತ್ತು ಮೈಸೂರು ನಗರಗಳಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ತಾವು ಜನಪದ ಸಾಹಿತ್ಯದ ಕುರಿತು ಚರ್ಚಿಸಿದ್ದನ್ನು **ಬೇಂದ್ರೆಯವರು** ಇಲ್ಲಿ ಅಭಿಮಾನದಿಂದ ಸ್ಮರಿಸಿಕೊಂಡಿದ್ದಾರೆ. ಕನ್ನಡ ಜಾನಪದ ಅಧ್ಯಯನದಲ್ಲಿ ಆಸಕ್ತಿ ತೋರಿ ಕಾರ್ಯಮಾಡಿದವರಲ್ಲಿ **ರೆವರೆಂಡ್ ಕಿಟ್ಟೆಲ್, ಶ್ರೀಕಂಠೇಶಗೌಡ, ಹನುಮಂತೇಗೌಡ, ಮಾಸ್ತಿ, ಹಲಸಂಗಿ ಗೆಳೆಯರು, ಬೆಟಗೇರಿ ಕೃಷ್ಣಶರ್ಮ, ಬೇಂದ್ರೆ, ಬಿ.ಎಂ.ಶ್ರೀ, ಕೃಷ್ಣಮೂರ್ತಿ, ತೀ.ನಂ.ಶ್ರೀ, ಗೊರೂರು, ಅ.ನ.ಕೃ, ದೇ.ಜ.ಗೌ. ಹಾಮಾನಾ, ಜೀ.ಶಂ.ಪ, ಗದ್ದಗಿಮಠ, ಡಾ.ಹಕಾರಿ** ಮೊದಲಾದ ಜಾನಪದ ವಿದ್ವಾಂಸರು ಕನ್ನಡ ಜಾನಪದ ಸಾಹಿತ್ಯದ ಅಧ್ಯಯನ ಕೈಕೊಂಡು ಆ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ"[೩೧]. ಆ ಎಲ್ಲ ಹಿರಿಯ ವಿದ್ವಾಂಸರು ಹಾಕಿದ ಬುನಾದಿಯ ಮೇಲೆಯೇ ಇಂದಿನ ವಿದ್ವಾಂಸರು ಕೂಡಾ ನಡೆದು ಶ್ರದ್ಧೆಯಿಂದ ಕೆಲಸಮಾಡಿ ಕ್ಷೇತ್ರಾಧ್ಯಯನದ ಮೂಲಕ ಇನ್ನೂ ಹೆಚ್ಚು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಜನಪದ ಸಾಹಿತ್ಯದಲ್ಲಿ ಬಹಳಷ್ಟು ಕೃತಿಗಳನ್ನು ಹೊರತಂದು ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಲಿ ಎಂದು ಬಯಸುತ್ತೇನೆ.

---

೩೧. ಡಾ. ನಂ. ತಪಸ್ವೀಕುಮಾರ : ವಿವರಣೆಗೆ ನೋಡಿ: 'ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ', ೧೯೮೧.

೧. ಗಣಪತಿ ಸ್ತೋತ್ರ

ನಮೋ ನಮೋ ಶ್ರೀ ಗಣರಾಯ ನಿಮಗೆ
ನಮೋ ನಮೋ ಎಂದು ಭಜಿಸುವೆ ನಿಮಗೆ ॥

–ಪ–

ಗಣಪತಿ ಗಣರಾಯ ನೀ ಬಂದರೆ ಶುಭಾಶಯ
ಪ್ರಸನ್ನಾಗೋ ನಿನ್ನ ಸ್ಮರಿಸುವೆ ಸಭಾದೊಳು
ನಮೋ ನಮೋ– – ॥

–೧–

ಆರ ಶಾಸ್ತ್ರವ ಓದಿ ವಿದ್ಯಕ ಮೊದಲಾಗಿ
ಬುದ್ಧಿವಂತ ನಿಮ್ಮ ಮುದ್ದು ಮೂಷಕವಾಹನ
ನಮೋ ನಮೋ– – ॥

–೨–

ದೇಶಕಧಿಕವಾದ ವಾಸುಳ್ಳ ಶ್ರೀಸಂಖ
ಈಶ ಚನಬಸು ಬಾಪು ಮಾಡ್ಯಾರೋ ನಿಮ್ಮ ಸ್ತುತಿ
ನಮೋ ನಮೋ– – ॥

–೩–

****

೨. ಸಾಂಭ ಎರಡಕ್ಷರ

ಸಾಂಭ ಎರಡಕ್ಷರ ಕುರುಡಾಗಿ ಹೇಳ್ತಿನಿ
ಮಾರ್ಗ ಅವು ಬ್ಯಾರಿ
ದೇಹ ಇಳಿತ ಬಂದಾಗ ತಿಳಿತ ಬರುವುದು ಉಳಿತ ವೈಕುಂಠ ಹರದಾರಿ
ಎಡವಿದ ಕಾಲ ಎತ್ತಿಟ್ಟ ನಡಿಬೇಕ
ಇಟ್ಟಿರಬೇಕ ಮನಾ ಹುಸ್ಯಾರಿಕಿ
ಹದಿನೆಂಟ ಚಿಂತಿ ಹಾಸಿಕೊಂಡು ಮ್ಯಾಗ
ಮಲಗಿದೇನ ಎಚ್ಚರಿಕಿ
ಎಚ್ಚದೊಳಗಿನ ಮಶ್ಚರ ದೇಹ
ಅಚ್ಚ ಹಸಿರು ಇದು ಹೊರಬಳಿಕಿ
ಇಟಾಳ ದೇಹ ಕುಟಾಳ ಭಾಳ ಐತಿ
ಕುಟಾಳ ಕೂಡ್ಯಾದ ಸರಿ ಬೆರಕಿ
ನಿನ್ನ ಹಿಂದ ನನ್ನ ಹಿಂದ ನನ್ನ ಮುಂದ ಅದರ ಹಿಂದ
ಮತ್ತೊಂದ ಆಗುವದು ತಿಳವಳಿಕಿ
ಓಂ ನಾಮನೆ ಧರ್ಮ ಐದ ಅಕ್ಷರ
ಕೂಡಿಸಿ ಕುಂಬಾರ ಮಾಡಿದ ಮಡಿಕಿ ॥

– ಚಾಲ–

ಮಡಿಕಿ ವಳಗ ಮನಾ ತೊಡಿಕಿ
ಹುಡುಕಿ ನಾ ಕಿಡಕಿ ಬಾಗಿಲ ತೆರೆದಿನೊ
ಗುರು ಚರಣ ಕಮಲಕ ಎರಗಿನೊ
ಚರಣ ಕರುಣದಿಂದ ಶರಣ ಸಂತತಿ
ಮರಣದ ಹಾದಿ ಮರೆತೆನೊ
ಮಾಯಾ ಮರ್ಜಿ ಫರ್ಜಿ ಹರಿದೆನೊ
ಫರ್ಜಿ ಹರಿದು ಪಾರಾಗಿ ಹೋಗಿ
ನೀಗಿ ನಿರಂಬಳ ಆಗುದು ನಿಜ ಭಾರಿ
ಹೇಹ ಇಳಿತ ಬಂದಾಗ ತಿಳಿತ ಬರುವದು ಉಳಿತ ವೈಕುಂಠ ಹರದಾರಿ ॥

–೧–

ಹುಟ್ಟಿ ಹುಟ್ಟಿ ಇದು ನಟ್ಟೈತಿ ತಮ್ಮ
ಬಿಟ್ಟಿಲ್ಲ ಇದು ಯಾರ್‍ಯಾರಿಗಿ
ಹುಟ್ಟುವುದು ಸಾವೂದು ಸಕಲರಿಗಿ

ಇದರ ಭೇದ ತಿಳಿಯಲಿಲ್ಲ ಒಬ್ಬರಿಗಿ
ಭೇದ ತಿಳಿದ ವಾದ ಅಳದ ನಡಿಯಬೇಕ
ಸಾಧುರ ಪಾದಕ ಸಣ್ಣಾಗಿ
ಸಣ್ಣ ಸೂಕ್ಷ್ಮ ಧುಮ್ಮ ಧೂಸರಾಗಿ
ಹೋಗಿ ಹೊಂದ ಗುರು ಪಾದಿಗಿ
ಪಾದ ಅಪಾದ ಅದ್ವಯ ತದ್ವಯ
ತನ್ಮಯ ದೋಗೆ ತಾ ತೂಗಿ
ತೂಗತ್ತೈತಿ ಮನಾ ಕೋನಿಯ ಮ್ಯಾಗ
ತಿಳಕೊಂಡು ಇರು ಗುರು ಮಗನಾಗಿ
ಮಗನಾಗಿ ಇರಬೇಕ ಜಗದೊಳಗ
ಜಿಗದ ಕಡ್ಯಾಕಾಗಿ
ಇಡಬಾರದು ಮಾಯದ ಸಲಿಗಿ
ಸಲಿಗಿ ಮಾಯಾ ಎರಡು
ತಲಿಗಿ ಏರಿ ನಿನ್ನ ವೋದು ಹಾಕುವ ಬಲೀಗಿ
ನಿನ್ನ ವಮ್ಮಿ ಮಾಡ್ಯಾವ ಸುಡಗಿ
ಸುಡಗಿ ಆದೀತ ಸುಗ್ಗಿ ತೀರಿತು ಹಿಗ್ಗಿ
ಸಂತೋಷ ದೇಹ ಮಣ್ಣ ಮರಿ
ಇಳಿತ ಬಂದಾಗ ತಿಳಿತ ಬರುವದು ಉಳಿತ ವೈಕುಂಠ ಹರದಾರಿ ॥

–೨–

ಹುಟ್ಟಿ ಬಂದೆವಪ್ಪ ಹೊಟ್ಟೆಯ ಸಲುವಾಗಿ
ಎಷ್ಟ ಕಷ್ಟ ಕಾಯದ ಕರ್ಮ
ಹಸುವಸಂಬುದು ಅಸುವಲ್ಲದನಾಯಿ
ತುಸು ತಾಳುವದಿಲ್ಲ ಹೆಚ್ಚು ಕಮ್ಮಿ
ಕಮ್ಮ ನಮ್ಮ ಅದು ದುಷ್ಟ ಬ್ರಹ್ಮಗೇರಿ
ಓದಿಕೊಳ್ಳಿರಿ ನೀವು ಓಂ ನಾಮ
ಓಂ ನಾಮ ಮೂರಕ್ಷರ ಮುಗದಿಂದ
ಮುಂದೆ ಕಲಿಯಬೇಕ ಸಿ ಧರ್ಮ
ಧರ್ಮ ಧೀರ ನಮ್ಮ ಗುರುವ
ಸೌದಾಗಾರ ಸಾಕ್ಷಾತ ಹೇಳಿದ ತುಕಾರಾಮ
ರಾಯರ ದೇಹ ರಂಗ ಮಂಟಪದಲ್ಲಿ
ಸದಾ ಇರಾಂವ ಜೀವಶಿವಾತ್ಮ
ಆತ್ಮದೊಳಗೆ ಗುರು ಇರಾಂವ ಒಬ್ಬನೆ
ವಜ್ರ ಬಾಗಿಲ ಉನ್ನನ್ಮನಿ

ಇದು ತಿಳಿದವರಿಗಿ ಸಾವ ಸನಿ
ಸಾಧೂರ ಬಗಲಾನ ಸಣ್ಣ ಕೂಸ ಗೋಪಾಳ
ದುರದುಂಡಿ ಬೆಲ್ಲದ ಕೆನಿ ಸವಿ
ಸುರದಾಂವಗ ಅಮೃತ ಹನಿ
ಕವಿ ಅಣ್ಣಾರಾಯ ಎಂಕಣ್ಣ
ಹೇಳತಾರ ಛಂದ ಕೇಳಿರಿ
ಅನುಭವದ ಝುರಿ
ಇಳಿತ ಬಂದಾಗ ತಿಳಿತ ಬರುವದು ಉಳಿತ ವೈಕುಂಠ ಹರದಾರಿ ॥

–೩–

****

೩. ಗುರು ಶಿಷ್ಯಾರ ಮಾತ

ಗುರು ಶಿಷ್ಯಾರ ಮಾತ ಹೆಂಗಿರಬೇಕ ಹಂಗಿರಬೇಕು
ಕಲಿ ಉಪರಾಟಿ ದಿನ ಬಂದು ಉಳಿಲಿಲ್ಲಾ
ಕಲಿ ಸಂವತ್ಸರ ಕೆಟ್ಟ ಕುಣುತಾದ
ಭೂಮಿ ಆಕಾಶಕ್ಕ ಬಿನಮೂಲ ॥

ಹಡ್ಡಿ ತಗದರ ಮಸ್ತ ಗುಡ್ಡ ಹೊಂಡತೈತಿ
ಕಡ್ಡಿಯಷ್ಟ ಪುಣ್ಯ ಯಾವಲ್ಲೈತೀ
ಪಾಪ ಹೆಚ್ಚಾಗಿ ಫರಾರಿ ಹಚೈತಿ
ಮಾನವ ಮಂದೀಗಿ ಎಲ್ಲಿ ತಿಳುತೈತಿ
ಬಾವಾ ಬೈರಾಗಿ ಭಿಕ್ಷಕ ಬಂದರ
ದುಡ್ಡ ಕೊಡದೇ ಹಿಂಗ ಗ್ವಾಳೇ ಮಾಡತೀ ॥

ಖಟ್ಲೇ ಮೈ ಮ್ಯಾಲ ಬಂದು ವಾರಂಟ ಹುಟ್ಟಿದರ
ಹಜಾರ ರೂಪಾಯಿ ಕೊಟ್ಟ ವಕೀಲ ಇಡತೀ
ಜಂಗ ಕಟ್ಟಿ ಮನೀಗಿ ಜಂಗಮ ಬಂದರ
ಹಿಟ್ಟ ನೀಡದೇ ತಿರಗಿ ಹಚಗೋಡತೀ
ರಂಡ್ಯಾರ ಬೇಡಿದರ ಇಲ್ಲ ಅನಂಗಿಲ್ಲ
ದೇಣಿ ಕೊರದಕೇರಿ ತಂದ ಕೊಡತೀ
ಖರೇ ದಿನಸಕ್ಕ ಮಂದಿ ಖರ್ಚ ಮಾಡೂದಿಲ್ಲ
ಸುಳ್ಳ ದಿನಸಕ್ಕ ಎಷ್ಟ ಮೆಚ್ಚೇತಿ
ಒತ್ತಿ ಹೇಳಿದರ ಮತ್ತ ಸಿಟ್ಟೇಗಿ ಬಂದೀರಿ
ಥ್ವಾಡೆ ಥ್ವಾಡೆ ಹೇಳತೀನ ಮುಚೈತಿ ॥

ಪುಣ್ಯ ಎಂಬುದು ಈಗೆಲ್ಲಿ ಐತಿ —ಚಾಲ—
ಎರಡ ವರ್ಷಕ್ಕೊಮ್ಮಿ ಬರ ಬರತೈತಿ
ಅಣ್ಣ ತಂಗೀಗಿ ಹಾದರ ಹುಟ್ಟೈತಿ
ಅದರಿಂದ ಮಳಿ ಬೆಳಿ ಕಮ್ಮ ಆಗೈತಿ
ಕೇಳಾವ್ರಕ್ಕಿಂತ ಹೇಳಾವ್ರ ಹಂತೇಕ
ಮಸ್ತು ಇರತೈತಿ
ಹಿಂದಿನವರಿಗಿ ಹೇಳೂದ ಈ ರೀತಿ ॥

ಕೈಯ ಜೋಡಿಸಿ ನಾ ಖರೇ ಹೇಳತೀನಿ —ಕೂಡಪಲ್ಲ—
ಕಡಿ ಆಟಕ ಬಿಡಬ್ಯಾಡ್ರಿ ಅಕಲ
ಕಲಿ ಸಂವತ್ಸರ ಕೆಟ್ಟ ಕುಣುತಾದ ॥ —೧—

ಕಲಿ ಕೆಟ್ಟಂಗ ಮತ್ತ ಕುಲ ಕೆಟ್ಟಿತ್ತಪ್ಪ
ಮಸ್ತಕ ಆಧಾರ ಉಳಿಲಿಲ್ಲಾ
ಪಟ್ಟದ ಐಗೋಳ ಇಟ್ಟಾರ ರಂಡ್ಯಾರ
ತೊಟ್ಲ ತೂಗತಾರ ಹೆಂತಾ ಬಲಾ
ಗುರು ಹಿಂಗ ಮಾಡಿದ ಮ್ಯಾಲ
ಶಿಷ್ಯರ ಹೆಂಗ ಮಾಡಬೇಕ
ಹೊಲಗೇರಿಗಿ ಹೋಗುದಕೇನ ಅಡ್ಡಿಯಿಲ್ಲ
ಗುರುಗ ಶಿಷ್ಯ ಬುದ್ದಿ ಹೆಂಗ ಹೇಳತಾನ
ತನ್ನ ಮುಕುಳಿ ಬಡ್ಯಾಗ ಇಟಗೊಂಡ ಹೊಲಸಾ
ಹೇಳಲಾರದೆ ಕೇಳಲಾರದೆ ಕೆಟ್ಟಿತ ಕುಲಾ
ಮಠಪತಿ ಐನಾರ ಲಿಂಗಾ ಕಟ್ಟೂದ ಬಿಡವಲ್ಲಾ
ಅಲಾಬದಾಗ ಫಕೀರಾಗಿ ಕಂದೂರಿ ಮಾಡತಾರ
ಲಿಂಗಾಕಟ್ಟಿ ಇವರಿಗೇನು ಫಲಾ
ಊರ ಹೊರಗ ಸೆರೆ ಕುಡಿಲಾಕ ಹೋಗತಾರ
ರೊಕ್ಕಾ ಇಲ್ದಿದ್ರ ಹಿಡದ ತರತಾರ ಕೈ ಕಾಲಾ ॥

ಪುರಾಣ ಹಚ್ಚು ಪುಣ್ಯೆ ಯಾಂವಗಬೇಕಾಗ್ಯೆತಿ —ಚಾಲ—
ಜೋಗತ್ಯಾರ ಗತಿಗೆಟ್ಟ ಮಾನ್ಯೆತಿ
ಹರಿದಾಸರ ಕೀರ್ತನ ಮನಗೇತಿ
ಮನಿ ಮನಿಗಿ ಗೊಂದಲ ನಡದ್ಯೆತಿ
ಮನ್ಯಾನ ದೇವ್ರ ದೀಪಾ ಕಾಣದೆ ಕೂತಿರ್ತ್ಯೆತಿ
ಲಾಲಸಾಬಗ ಹಿಲಾಲ ಎಷ್ಟೋ ಹಚ್ಚಿರತ್ಯೆತಿ ॥

ಹಿಂತಾ ಕುಲಾ ಹಿಂಗಾದ ಮ್ಯಾಲ —ಕೂಡಪಲ್ಲ—
ಉಳಿಕಿದ ಇನ್ನೇನ್ಯೆತಿ
ಸಾರಾಂವ ಸಾರಿದ ಮಗಾ ಸುಳ್ಳಲ್ಲ
ಕಲಿ ಸಂವತ್ಸರ ಕೆಟ್ಟ ಕುಣುತಾದ ॥ —೨—

ಕಾಶಿಯಾತ್ರಾ ಮಾಡೂ ಮಂದಿ
ಕೈಲಾಸಕ್ಹೋದಾರಪ್ಪಾ

ರೂಪಾಯಿ ತಗೊಂಡೊದ್ರ
ಸಂಗಾಟ ನೂರಾರ
ಹಡದ ತಂದಿ ತಾಯಿನ ಮನಿಯಾಗ ಬಿಡತಾರ
ಸಂಗಾಟ ಬರ್ತಾರ ರಂಡ್ಯಾರ
ಪಾತ್ರದವರಿಗೀಗ ಯಾರ ಕೇಳೂದಿಲ್ಲ
ಮಾರ್ಕೊಂಡ ತಿಂತಾವ ಗುಳಸಾರ
ಊರ ಮನಿ ಹೆಂಗ್ಸರ ಮಸ್ತ ಆದಾವಪ್ಪ
ಗಂಡನ ಬಿಟ್ಟ ತಿರಗತಾವ ನೂರಾರ
ಮಾವನ ಮಂದೀಗಿ ನಾ ಇನ್ನೇನ ಹೇಳಲಿ
ಇದ್ದಂಗ ಆದಿತಂದ್ರ ಹೂನ್ನಾರ
ಮತಭೇದ ಮಾಡಿದರ ನರಕ
ಬೀಳೂದಂತ ಹಿಂಗ ಹೇಳತಾರ ಹಿರೇರ
ತುಳಸಿ ಮಣಿ ಹಾಕಿ ವಾರಕರಿ ಆಗಿ
ಪಂಡ್ರಾಪುರಕ ಇವ್ರ ಹೋಗಾವ್ರ
ಹುಣ್ಣಿ ಹಚಗೊಂಡವ್ರು ಯಮನೂರಿಗಿ ಹೋಗ್ತಾರ
ಬೇಡಿ ಹಾಕಿ ಮಾಡತಾರ ಬೆಸ್ತಾರಾ
ಎಲ್ಲಿ ನೋಡಿದರ ಏನೇನಿಲ್ಲಾ
ಎಲ್ಲಮ್ಮನ ಜಾತ್ರ್ಯಾಗ
ಮುಲ್ಲಾಂದೇನೈತಂತಾರ ಎಲ್ಲಾರಾ
ಮುಲ್ಲಾನ ಮನಿಯಾಗೀಗ ಯಲ್ಲವ್ವ ಸೇರ್ಯಾಳ
ಉಘೋ ಉಘೋ ಅಂತಾರ ಮುಸಲರ ॥

ಹೆಂತಾವು ಬಂದು ದಿನ ಏನ ಇದ ಹೊತ್ತಾ —ಚಾಲ—
ದೇವ್ರ ಬದಲಾದು ಒಂದಕೊಂದು ಪರತ
ಏನ ಉಳಿಲಿಲ್ಲ ಹೆಣ್ಣ ಗಂಡಿನ ಮಾತಾ
ಜಾತಿ ಕೆಟ್ಟ ಹ್ವಾದೀತ ಅನರ್ಥಾ
ಸೌದಾಗರ ಹೇಳಿದ ಈ ಗುರ್ತಾ
ಹರಿದಾಸ ಅನಿಸಿಗೊಂಡ ಸ್ವತಾ ॥

ತೇಗದಾಳ ತುಕಾರಾಮ ಪದಾ ಮಾಡಿ —ಕೂಡಪಲ್ಲ—
ಇಟ್ಟಾನ ಪೃಥ್ವಿಯ ಮ್ಯಾಲಾ
ಕಲಿ ಸಂವತ್ಸರ ಕೆಟ್ಟ ಕುಣುತಾದ ॥ —೩—

೪. ಡೊಂಬರಾಟಿನಂಗ ಪ್ರಪಂಚದಾಟ

ಡೊಂಬರಾಟಿನಂಗ ಪ್ರಪಂಚದಾಟ
ಜಂತ್ರಲಾಗಾ ಅಂತರಲೊಗದಿ
ಗರುವಂಬು ಗನಿ ನಡಿಸಿ
ಮರುವ ಮನಿಯ ಹೂಡಿ
ಅದರ ಮ್ಯಾಲ ನಿಂತ ಓಡ್ಯಾಡಿದಿ ॥

ಹುದುಕಿನಲ್ಲಿ ಹುಟ್ಟಿ ಬಂದ ಕೂಸಿಗಿ
ಸಾವಿನ ಅಂಜಿಕಿ ಮುಂದಿಂದ
ಹಿಂದ ಸತ್ತರಿಂಗ ಮುಂದ ಸಾವೂದು
ಅದಕ ಅಂಜಿದರೇನಾಗುವದಾ
ಭಿಕ್ಕಿ ಬೇಡಿ ತಿಂದ ಬದುಕೀನ ಅಂತಾದ
ಭೀಕಾರಿ ಜಲುಮಿದು ಮನಸ್ಯಾರದ ॥

ಭಾಳ ಬಡವ ಒಳೆ ದೌಳವನಾದರ
ಕೂಳ ಇಲ್ಲದೆ ಸತ್ತ ಹೋಗುವದಾ
ನಾವೇನ ನೀವೇನ ಯಾಂವಾದರೇನ
ಹಾವಿನಂಗ ಹರದಾಡುವದಾ ॥

ಹರದಾಡಿ ಮಾಡ್ತಿ ಜಿನಗಾನಿ —ಚಾಲ—
ಮಕ್ಕಳಾ ಮನೀ ವ್ಯರ್ಥ ಜನ್ಮ
ನಿಂದಲ್ಲ ಹೊತ್ತಿರೂ ಚರ್ಮ
ಬರ ಬರತ ಜನಕ ದೊಡ್ಡಾಂತ
ಮನಕ ಸಣ್ಣಾವ ದಿನಕ ಕಮ್ಮಾ
ಹಿಂಬರಿಕಿ ನಡದ್ಯೋ ತಮ್ಮಾ
ಮಟ್ಟಿ ಎತ್ತಿನಂಗ ಸರದ್ಯಾಡಿ ಸತ್ತೀ
ಗೊತ್ತಿ ತಿಲ್ಲಾಕ ಮತ್ಯಾಕ ಬಂದಿ
ಗರುವಂಬು ಗನಿ ನಡಿಸಿ ॥

ಪ್ರಪಂಚದಾಟ ಬಲು ಜೂಜಾಟ
ಮರ್ತ್ಯಲೋಕದೊಳಗ ಮಾಯಾದ ಫಾಸಿ
ಈ ಫಾಸಿಯೊಳಗ ಯಾಂವ ಪಾರ ಆಗತಾನ

ಅಂವಗ ಅನಬೇಕ ಯೋಗಿ ಋಷಿ
ಯೋಗಿ ಋಷೇಶ್ವರ ಮಹಾ ಮೌನೇಶ್ವರ
ತಲೆಬಾಗಿ ನಿಂತಾರ ಕೈಜೋಡಿಸಿ
ಅಪಾಯು ಯಾವ ಆತ್ಮ ಸ್ವರೂಪ
ಆ ರೂಪ ತಾನೇ ಜಗದೀಶ ॥

ಜಗದೇಶಾಗ ಜಾತಿಲ್ಲ ಅಜಾತಿ
ಆತ್ಮನ ತಿಳಕೋರಿ ಮನಾಸೋಸಿ
ಮನಾ ಉಡಾಳ ದನ
ಹತ್ತಬ್ಯಾಡ ಅದರ ಬೆನ್ನ
ಮಾಯಾ ಮೇವ ಹಾಕಿ
ಮಮತಾ ನೀರ ಕುಡಸಿ ॥

ನೀರ ಕುಡಿಸಿ ಸಮಾಧಾನ ಮಾಡಿ —ಚಾಲ—
ಹಿಡಿಯೋ ಕಿವಿ ಗಡ್ಡಿ
ಹಾಕ ಮೂಗದಾಣ
ಶಿವಧಾಗ ಜೀವ ಡಬ್ಬಣ
ಆ ಡಬ್ಬಣ ಧಾರ ಎರಡು ಜೋಡಿ
ದೇಹ ಜೀವ ಕೂಡಿ
ಅಗಲಿದ ಪ್ರಾಣ
ಶಿವಗ್ಯಾತರಂತ ಕರುಣ ॥

ಕರುಣ ಕಡಿಗೇ ಇಲ್ಲ —ಕೂಡಪಲ್ಲ—
ಮಾಯಾ ಮೊದಲೇ ಇಲ್ಲ
ನ್ಯಾಯ ಇಲ್ಲದೆ ಅಚೂತ ಉಳದಿ
ಗರುವೆಂಬ ಗನಿ ನಡಿಸಿ ॥

ಗಾಳಿಗಿಟ್ಟ ದೀಪ
ಇದ್ದರ ಇತ್ತು ಹೋದರ ಹೋತು
ಭರವಸ ಇಲ್ಲ
ನೀವೇನ ನಾವೇನ ಯಾಂವಾದರೇನ
ತುಂಬಿದ ಹೊಳ್ಯಾಗಿನ ಹರಗೋಲ ॥

ಅರಸ ಪ್ರಧಾನಿ ಆಗಿ ಹುಟ್ಟಿ ಬಂದ ಮ್ಯಾಗ
ಸಾವು ಯಾರಿಗೇನ ಬಿಟ್ಟಿಲ್ಲ

ಹುಟ್ಟುದು ಸಾವುದು ಅಳದ ಬಳಸ್ತಿರಿ
ಮಾಪ ತುಂಬಿದ ಮ್ಯಾಲ ಬುಡಮೇಲ ॥

ಸಾದೂರ ಕೈಯಾಗಿನ ಗಿಂಡಿ
ಗೋಪಾಳ ದುರದುಂಡಿ
ಮಾಡಿದ ಪದಕ ಬೈಲ ಮಾಡವರ
ಯಾರಿಲ್ಲ ಇದಕ ॥

ತಿಳಿದಾಂವ ತಿರಳ ಹಿತ್ತಗಾರ
ಅದಕ ಮುತಗಾರ ಹೇಳಿದ ಬಳಿಕ
ಪರೀಕ್ಷೆ ಮಾಡ್ಯಾನ ಪತ್ತಾರ ಅದಕ
ಕವಿ ಎಂಕಾ ಅಣ್ಣಾರಾಮ ಹಾಡತಾರ –ಕೂಡಪಲ್ಲ–

ನೈನ ಮಾರ್ಗ ಹಿಡದಂಗ ಹಾದಿ
ಗರುವೆಂಬ ಗನಿ

****

೫. ಕನಸೊಂದ ಬಿತ್ತ ಅದರ ಹಾರಗೆಡಲಿ

ಊಟಾ ಮಾಡಿ ಮಧ್ಯಾನದಾಗ
ಮನಗಿದ್ದನೆವ್ವ ಹೊಸ ಮನ್ಯಾಗ
ಕನಸೊಂದ ಬಿತ್ತ ಅದರ ಹಾರಗೆಡಲಿ ॥ –ಗಂಡು–

ನೀ ಕಂಡಂಗಾತ ಕಣ್ಣಚೂಟಿ ಕೈ ಸನ್ನಿಲೆ
ಉಬ್ಬಿ ಉಡದಾರ ಹರಿತ ಹುಡಗ ಹಿಗ್ಗೂತಲಿ
ಬಂದಂಗಾತ ನಿನ್ನ ಮನಿಗಿ
ತಂದಂಗಾತ ಗೋಧಿ ಕಡ್ಲಿ
ಉಂಡಂಗಾತ ಹೋಳಿಗಿ ಹುಗ್ಗಿ
ಅಡಿಗಿ ಮನೆಯಲ್ಲಿ ಮುಂದ
ಮಲಗುಬಾವಲ್ಲಿ ॥ –ಪಲ್ಲ–

ಸಿಸ್ತ ನಡುವಿನಂಕಣದಾಗ
ಮಸ್ತ ಕೌದಿಕಂಬಳಿ ಹಾಸಿ
ಸ್ವಸ್ತ ಮಲಗಿದಂಗಾತ ಇಬ್ರೂಕೂಡಿ
ನನಗ ವಸ್ತು ಒಂದ
ಮಾಡಿಸಿಕೊಡು ಅಂದ್ಯ ಖೋಡಿ
ಸುಮ್ಮ ಹೂಂ ಹೂಂ ಅಂದೆ
ಅಕಿ ಮಾರಿ ನೋಡಿ
ಕೂಡಿದಂಗಾತ ಇಬ್ರೂ
ನೋಡಿದಂಗಾತ ಯಾರೋ
ಓಡಿದಂಗಾತ ನಮ್ಮ ಮನೀಕಡಿ
ಜಿಗದ ಲಗೂ ಮಾಡಿ
ಖಬರಗೆಟ್ಟಿ ಓಡುವಾಗ
ಕಲ್ಲ ಒಂದ ಎಡಿವಿ ನಾ
ಹಲ್ಲ ಮುರಕೊಂಡ ಬಿದ್ದೀನಪ್ಪಾ ಧ– – ಡಿ– – ಡಿ – –ಡಿ– – – ॥

ಭಾಳ ಗುಲ್ಲಅಂತಾರ ನಮ್ಮ ಮನೀಕಡಿ
ಅಂಜಿ ಹೇತಕೊಂಡ ಧೋತ್ರೆಲ್ಲ ಆತರಾಡಿ
ಹೋದಂಗಾತ ನಮ್ಮ ಮನೀಗಿ

ಬೈದಂಗಾತ ನಮ್ಮವ್ವ
ಹೊಡದಂಗಾತ ಹುಟ್ಟ ತಗೊಂಡ ಸಿಟ್ಟ ಮಾಡಿ
ಛೀ ಹೋಗೋ ಮಾನಗೇಡಿ ॥

ವರದಿ ಕೊಟ್ಟಂಗಾಗಿತ್ತ ನೀ ಹೋಗಿ —ಚಾಲ—
ಗೌಡ ಕುಲಕರ್ಣೇರೀಗಿ
ಮಾಡಿದಿ ಧಗಿ ಕೇಳಲಿಲ್ಲ ಇಷ್ಟಾ
ಕರಸಿ ಹಾರಸೋನು ಅಂತಾರ ಅವ್ನ ಚಟ್ಟಾ
ಕರದಂಗಾತ ಚಾವಡೀಗಿ
ನೆರದಂಗಾತ ಭಾಳ ಮಂದಿ
ಹರದಂಗಾತ ನಿನ್ನ ಕುಪ್ಪಸ ಹಾರಗೇಡಲಿ
ಗೌಡ್ರ ಬರದಂಗಾತ ರಿಪೋರ್ಟ ನನ್ನ ಮ್ಯಾಲ
ಬಡವನ ಸೊಕ್ಕ ಮುರಿತಂತಾರ
ಬಿತ್ತ ಭಾಳ ಜೋಲಿ
ಬಂದಂಗಾತ ನಿನ್ನ ಮನಿಗಿ ॥

ಮಾನಗೇಡಿ ಮೂಳಾ ನಿನ್ನ —ಹೆಣ್ಣು—
ಮನಸಿನ್ಯಾಗ ನೆನಸುದಿಲ್ಲ
ಕನಸಿನ್ಯಾಗ್ಯಾಕ ಬಂದಿ ನಮ್ಮನಿಗಿ
ನಿನ್ನ ಹಾಂಟ ಹರಿಸಿ ಹಂಚ
ಮುಚ್ಯಾರ ಹೋಗೋ ತಿರಗಿ
ನಿನ್ನ ಕುಂಡ್ರಿಸಿ ಕುಳ್ಳ ಒಟ್ಯಾರೇನ ಲಂಡ್ಯಾನಹರಿಗಿ
ಸತ್ತ ನಂದರ ಅತ್ತಾರೇನ ಮನಿಯಾಗ
ಹೊತ್ತಾರ ಕಂಬಳಿ ಸನಕಿ ಹೆಡಗಿ
ಹುಟ್ಟಾ ನಮ್ಮ ವಂಶದಾಗ
ಕೆಟ್ಟ ಅನಿಸಿಕೊಂಡಿಲ್ಲ
ಬಟ್ಟ ಮಾಡಿ ತೋರಿಸಿಕೊಂಡಿಲ್ಲ
ಒಬ್ಬರ ಕಡಿ
ನಮ್ಮ ತಾಯಿ ಕೀರ್ತಿ
ಸಾರತದ ಗರತಿ ಗಂಗಿ
ಮುತ್ತೈದಿ ಗಂಡನ ಬಿಟ್ಟ
ಮತ್ತೊಬ್ಬನ ನೋಡೂದಿಲ್ಲ
ನನ್ನಿಂದ ಊರಿಗೆಲ್ಲ ತಿಳದತಿ ಬಾರಿಗಿ ॥

ಬಂಟ ಮಾತನಾಡಿದಿ ಸುಗಜಾಣ —ಚಾಲ—
ಹೊಡದಂಗ ಬಾಣಾ
ನಿನ್ನ ಕನಸಿನಾಗ ಯಾಕ ಬಂದೆ ನಾನಾ
ನನ್ನ ಹ್ಯಾಂಗ ಕೇಳುವಂಗ ಆತ ನೀನಾ ॥

ನಿನ್ನ ಕಡದ ಹೊಡದ ಬಡದ ಚಲ್ಲಿದಾರೊ —ಕೂಡಪಲ್ಲ—
ಭೂಮಿ ಮ್ಯಾಲ
ಹಿಂತಾ ಬಂಡಲತನ ಹೇಳಲಾಕ
ಕಲಿತೀದ್ಯಾವಲ್ಲಿ
ಬಂದಂಗಾತ ನಿನ್ನ ಮನಿಗಿ ॥

ಸುಳ್ಳಲ್ಲ ಗುಳ್ಳವ್ವನ ಆಣಿ —ಗಂಡು—
ಮಳ್ಳ ಆದಿ ತೀರಾ ನೀನು
ಭಾಳ ಗೊಳ್ಳಾಗಿ ಸರಕಾರ ಕಟ್ಟಿ ಕಂಡಿತ್ತಾ
ನೀ ಕರದ ಎನ್ನ ಮ್ಯಾಗ ತಿರಗಿ ಬಿದ್ದಂಗಾದಿತ್ತ
ಊಟ ವತ್ತಟ್ಟಿನೆ ನನಗ ಛೀ ಛೀ ಅಂದಂಗಾದಿತ್ತ
ಹೋದಂಗಾತ ಜತ್ತೀಗಿ ಇದ್ದಂಗಾತ ಕಚೇರ್‍ಯಾಗ
ಹೋದಂಗಾತ ನನ್ನ ಕಾಲ ಹೊರಕಡಿಗಿ ಹತ್ತಿತ್ತ ॥

ಏನ ಹೇಳಲಿ ಅಂತ ಸರಕಾರದಾಗ ಚೌಕಾಸಿ ಆದಿತ್ತ
ಮನೀಗಿ ಹೋದದ್ದ ಖರೇ ಆದಿತ್ತ
ಚಾರಸೇ ಅಟ್ಠೇಚಾಳೀಸ ಕಲಮ
ಗುನ್ಹಾ ಇಟ್ಟಂಗಾದಿತ್ತ
ಅದಕ ತಿರಗಿ ತಕರಾರ
ನಾನು ಕೊಟ್ಟಂಗಾಗಿತ್ತ ॥

ಇಟ್ಟಂಗಾತ ವಕೀಲನೊಂದು
ಕೊಟ್ಟಂಗಾತ ರೂಪಾಯಿ ಒಂದ ಹತ್ತಿಪ್ಪತ್ತು
ಫಕ್ಕನೇ ಎಚ್ಚರಕಿಯಾದಿತ್ತ
ಹಿಂಗ ಆದಂಗಾದಿತ್ತ ಭಾಳದಿನಾ
ಆಕ್ಕಿತ್ತ ಈಸ ದಿನಾ
ಹಾಕಿತ್ತ ಘೋಳಕ ಬತ್ತಿ
ಬಿದ್ದಂಗಾತ ಚಟಕ್ಕ ॥

ಆದಂಗ ಆಯಿತ ಖರೆ ಖರೆ —ಕೂಡಪಲ್ಲ—
ಹೋದಂಗ ಆಯ್ತು ಖಟ್ಲೆ ದೂರ
ಬೈದಂಗ ಆಯ್ತು ನಾ ನಿನಗ ಹಾರಿಹಾರಿ
ಪಾರ ಆದ್ನೊ ದೇವರ ನಿನ್ನ
ದಯ ಇರಲಿ ಒಮ್ಮಿ ಹೋದ್ನಿ ಖರೆ
ಸುಳ್ಳು ನಾ ಯಾಕ ಹೇಳ್ಳಿ
ಬಂದಂಗಾತ ನಿನ್ನ ಮನಿಗಿ ॥

ಕಾಂತ ಕೇಳ ನನ್ನ ಮಾತಾ —ಚಾಲ—
ಶಾಂತ ಇಲ್ಲ ನನ್ನ ಜೀವಕ
ಹೆಂತಾ ಕೆಟ್ಟ ಕನಸ ಬಿತ್ತಾ ನನ್ನ ಹಾಂಟ್ಯಾಂದು
ಪೂರ್ವಿ ಋಣಾನುಬಂದ ಇತ್ತ ಏನ ನಂದು ನಿಂದು
ಆಗಿ ಹೋತ ಭಾಳ ಗೋಳ
ಮಂದಿ ಮಕ್ಕಳ ಬಳಗದೊಳಗ
ಕೂಡ್ಲಿ ಅಂತಾಳ ಇನ್ನ ನಂದು ನಿಂದು ಗೆಳತನಾ
ಒತ್ತಿ ಹಿಡದು ತೆಕ್ಕಿ ಹೊಡದು
ಕುಂತಾಳ ತೊಡಿಮ್ಯಾಲ
ಅಂತಾಳ ಪ್ರಿಯಾಗ
ನಡೀಲಿ ನಂದು ನಿಂದು ಹಿಂಗ
ಸ್ವಾಮಿ ಶಂಕರಲಿಂಗನ ದಯಾ ಇರಲಿ
ನಮ್ಮ ಮ್ಯಾಗ ॥

ಮೋಜ ಭಾಳ ಮುಚ್ಚಂಡಿ ಊರ
ತೇಜ ಭಾಳ ತೆಳಕಡಿ ಓಣಿ
ಪೋಜ ಭಾಳ ಹುಡಗರ ಟೋಳಿಗಿ
ಶಂಕರಲಿಂಗನ ಗೊಂಚಲ ನೋಡಿ
ಮೆಚ್ಚಿದಾಳ ಹುಚ್ಚ ಹೊಯಿಮಲ್ಲಿ
ಬಂದಂಗಾತ ನಿನ್ನ ಮನಿಗಿ ॥

****

೬. ಈಗಿನ ಮನದಾನ ಮಾತ

ಮನದಾನ ಮಾತ ಚಾಲ ಚಲಾವಣೆ ರೀತಿ
ಯಾತರ ಕಡಿಂದ ತಪ್ಪಿತಪ್ಪ ನಡೆನುಡಿ
ಈಗ ಹ್ಯಾಂಗ ರಾಜಾ ಹಂಗ ಪ್ರಜಾ
ಇರುವುದು ಅವರ್ನ ನೋಡಿ
ಈಗ ಇಂಗ್ರೇಜಿ ಸರಕಾರ ಬಂದು
ಇಟ್ಟಾರಪ್ಪಾ ಕಾಯ್ದೆ ಮಾಡಿ ॥ —ಪ—

ಬಲಿಷ್ಟತನ ಬಂಡಾಯಕ್ಕೋತ
ಹೆಂಡ್ರಗೆಲ್ಲಾ ಅಂಜುದಾತ
ಸುಳ್ಳ ಒಯ್ದು ಖರೆ ಮಾಡೂದು ವಕಿಲ್ರ ಕಡಿ
ಕಾಯ್ದೆ ಕಳಾ ಬಲ್ಲಾವಿಟ್ಟಾನಪ್ಪ ಬಂಗಾರ ಕಡಿ ॥

ನಿರಂಬಳಾದ ಕಾಮಗಾರ
ಊರ ಗೌಡ ಕುಲಕರ್ಣಿವ್ರ
ಮೊದಲ ಮಾಡಿ ಹೇಳತೀನಿ
ಎಲ್ಲಾರ ಮಾತಾ ॥

ಈಗ ಮಾರಿ ನೋಡಿ
ಮಾತ ಹೇಳೂ ಮಂದಿಯಾದಿತ್ತಾ
ಕೈಯಾಗ ದುಡ್ಡ ಇದ್ರ
ನ್ಯಾಯ ಮಾಡತಾರ ಶಿಸ್ತಾ
ದುಡ್ಡ ಒಂದ ಇಲ್ಲದಿದ್ರ
ಯಾರೂ ಕೇಳೂದಿಲ್ಲ ಅವ್ನ
ಹೊಲ್ಯಾ ಮಾದ್ರ ನಂಬೂದಿಲ್ಲ
ಹ್ವಾರೆ ತಪ್ಪಿತ್ತಾ ॥

ಒಂದ ದುಡ್ಡ ಇಲ್ಲದಕ್ಕ ಛೀ ತನ ಬಂತಾ
ಸಣ್ಣ ದೊಡ್ಡವರೆಲ್ಲ ಈಗ ಶಾಣ್ಯಾತನ ಕಲ್ತಾರಪ್ಪ
ಹುಶಾರತನದಿಂದ ಹುಟ್ಟಸೂ ಬೇತಾ
ಈಗ ಸರಕಾರ ಸಾಲಿ ಏನ ಬಲ್ಲಿ

ಪುಕ್ಕಟ ಆದಿತ್ತಾ! ಮುಂದ
ಕಾಯ್ದೆಕ ಬಂದ ಕಲುತಾರ
ಇಂಗ್ರೇಜಿ ಮತ್ತಾ ॥

ಬಿ.ಎ; ಎಲ್.ಎಲ್.ಬಿ ಪಾಸಾಗಿ ಪಗಾರ ಅಂವಗ ಹೆಚ್ಚಾಗಿ
ಕುಪೇಂದ್ರ ಆಗಿ ಕುಂತಾರಪ್ಪ ಅದ್ಭುತ
ಬಾಕಿ ಕೋರಿ ಹೊರು ಮಂದಿಗೆಲ್ಲ ಏನ ಗೊತ್ತಾ ॥

ಎಷ್ಟೋ ಮಂದಿ ಮಾಡತಾರ ಹೊಲಾ ನೆಲಾ —ಚಾಲ—
ಹೊಟ್ಟಿ ತುಂಬ ಕೂಳ ಸಿಗುದಿಲ್ಲಾ
ಎರಡ ವರ್ಷಕ್ಕೊಮ್ಮೆ ದುಸ್ಕಾಲ
ಈಗ ಬರತಾವಪ್ಪ ಮ್ಯಾಲಿಂದ ಮ್ಯಾಲ
ಬಾಕಿ ಭಾಳ ತಗಾಯಿ ತಂದಾರಲ್ಲ
ಸಂಸ್ಥಾನದ ಸೂಟ ಆಗಲಿಲ್ಲಾ ॥

ಲಾಯಕತನ ಉಳಿಲಿಲ್ಲ ರೀತಿ ಚಾಲಿ ನಡಿಲಿಲ್ಲ (ಕೂಡನುಡಿ)
ಕೊಟ್ಟ ದೇಣೆ ಹುಟ್ಟಲಿಲ್ಲ ಮಂಡರ ಕಡಿ
ಈಗ ಖೊಟ್ಟಿ ಕಾಯ್ದೆ ಹುಟ್ಟಸ್ತಾರ ಕಲ್ಪನಾಮಾಡಿ
ಸರಕಾರದಾಗ ತಗೋತಾರ ದಾವೆ ಮಾಡಿ ಬಲಿಷ್ಟಾನ ॥ —೧—

ಹಿಂದೂಸ್ತಾನದಾನ ಮಂದಿ ಒಂದರ ಹೂಂಟ್ಯಾಗ ಬಂದಿಲ್ಲ
ಮುಂದ ನಿಂತ ಕಾದುವಂತ ಮಂದಿಯಲ್ಲ
ಈಗ ಹಿಂದ ನಿತ್ತ ಒಗಿತಾರ ಭಾಳ ಕಲ್ಲ
ಖಟ್ಲೆ ಮೈ ಮ್ಯಾಲ ಬಂದರ ವಾರಿ ಆಗತಾರಲ್ಲ
ವಿಶ್ವಾಸ ನಂಬಿಗಿ ಇಲ್ಲದಿಲ್ಲ ಅದ್ಯಾರಿಗಿ
ಕಳ್ಳ ಕತ್ರಿ ಮಾಡೂದೇನ ಕಡಿಮಿಲ್ಲ
ಈಗ ಸುಳ್ಳ ಹೇಳಿ ಸುಲಿತಾರ ಮೈ ತೊಗಲ ॥

ಹಚ್ಚು ಚುಚ್ಚು ಮಂದಿ ಈಗ ಹೆಚ್ಚಾತ ನಾಡಮ್ಯಾಗ
ಲುಚ್ಚ್ಯಾತನದಾಗ ಆಗ್ಯಾರ ಮಿಗಲ
ಶಾರ ಮುಂಬೈ ಪುಣೇದ ಭಮಟ್ಯಾರ ಮ್ಯಾಲ
ಈಗ ಹಳ್ಳಿ ಮಂದಿ ಮಳ್ಳ ಅನೂದು ಸೊಯಿ ಇಲ್ಲ
ಹಗಲ ಇರುಳ ಮಾತಾಡಿದ್ರ ತಗಲತನದ ಮಾತಗಳು
ಬಗಲ ಮುಂಡಿ ಮಾಡುದಕ್ಕ ಕಡಮಿಯಿಲ್ಲ
ಈಗ ಸತ್ಯ ಹೇಳವ್ರದ ಅಡಗಿತ್ತ ಸಲ್ಲ

ಆಚಾರ ವಿಚಾರ ಎಲ್ಲಾ ಅವಿಚಾರ ಆದಿತಪ್ಪ
ಶಿವಭಕ್ತ ಮಂದಿ ಒಳಗ ಸೇರಿತ್ತಲ್ಲ
ಸುಳ್ಳೆ ಬ್ರಾಹ್ಮಣರು ಮಾಡವರು ಒಣ ಡೌಲ ॥

ಮಡಿ ಮೈಲಿಗಿ ಮನ್ಯಾಗ ಮೀಸಲಾ
ಕೆಲಸ ಮಾಡವ್ರು ಈಗ ಎಷ್ಟೋ ಮಂದಿ ಕೆಟ್ಟಾರಪ್ಪ
ಮಾಂಸ ತಿಂತಾರಂತ ಮಾತಾಡುವರೆಲ್ಲಾ
ಇದು ಸರ್ವರಿಗಿ ಸುದ್ದಿ ಐತಿ ಕೋಳೂದಿಲ್ಲ ॥

ಅಂಗಿಗುಂಡಿ ಕುಣಿಕಿ ಎದಿಮ್ಯಾಲ —ಚಾಲ—
ಎಲುವಕಟ್ಟಿ ಬಿಟ್ಟಾರ ಸರುವೆಲ್ಲ
ನೀರ ಕುಡಿತಾರ ನಳದಾಗ ತೊಗಲ
ಅಲ್ಲಿ ಹೆಂಗ ಮಾಡಬೇಕ ಶೀಲ
ಜಾತಿ ಧರ್ಮ ಶಾಸ್ತ್ರ ಬಿಟ್ಟಾರಲ್ಲ
ದಿನ ದಿನಕ ಹುಟ್ಟತಾವ ಅಕಲ ॥

ಅಕಲ ಹೆಚ್ಚಾಗಿ ಹಿಂಗ ದಕಲ ಇಲ್ದ (ಕೂಡನುಡಿ)
ತಿರಗತಾರ ಅಕ್ಕಲ ಹೋಗಿ ಹಕ್ಕಲ
ಆತ ನಾಲ್ಕೂ ಕಡಿ ಹಿಂಗ ಹದಗೆಟ್ಟ
ನಡಬಾರಪ್ಪ ಹಳ್ಳಾಕೂಡಿ
ಬುದ್ಧಿ ಹೇಳಾವ್ರ ಕೇಳಾವ್ರೆಲ್ಲ
ಅತ್ತ ಕಡಿ ಬಲಿಷ್ಟತಾನ ಬಂಡಾಯ ॥ —೨—

ಮತ್ತೊಂದ ಮಾತೇನ ಚಿತ್ತ ಕೊಟ್ಟ ಕೇಳ್ರೆಪಾ
ಹೊತ್ತ ಬಂದಾಗ ಬೆನ್ನ ಕೊಟ್ಟ ಇರಬೇಕಾದಿತ್ತಾ
ಅದಕ ಇದರ ನಿತ್ತ ಯುದ್ಧ ಮಾಡುದಿಲ್ಲ ಸಾಮರ್ಥಾ
ಹಂಗ ಸರಕಾರ ಕಾಯ್ದೆ ಇಟ್ಟಾರಪ್ಪ ಬಂದೋ ಬಸ್ತಾ
ಹೆಂಡ್ರ ಕೂತ ಹಾದರ ಮಾಡಿದ್ರ
ಹೊಡದೀನನ್ನು ಹುಕುಮಿಲ್ಲ ಜಿಂವಾ ಹೊಡದವ್ನ
ಜನ್ಮ ಠೇಪ ಖಚಿತ್ತಾ
ಅದಕ ಅಂಜಿ ಬಿಟ್ಟಾರಪ್ಪ
ಹಾದರ ಹೆಚ್ಚಾದಿತ್ತಾ ॥

ಗುಮ್ಮನ ಗುಸಕ ಮಂದಿ ಈಗ
ಸುಮ್ಮನೆಲ್ಲಿ ಇರತಾರ ಒಳಗಿಂದೊಳಗ

ಮಾಡತಾರ ಒಳ ಬೇತಾ
ಹೆಂಡ್ರ ಛಲೋ ಇದ್ರ ಕರುತಾರ ಅಣ್ಣಾ ಅಂತ
ಮಾಂವಾ ಅಂತಾರ ಮಗಳ ಮ್ಯಾಲ ಮನ ಪೂರ್ತಾ
ತೀರಾ ಬಯಲಿಗಿ ಬರುತನಾ ತಿಳಿಗೋಡಿಸುದಿಲ್ಲಾ
ಅವರು ತಿಪಲ ಭಾಳ ಈಗಿನ ಮಂದಿ ಎಲ್ಲ ಮಸ್ತಾ
ಹಿಂಗ ಆದ ಮ್ಯಾಲ ಹ್ಯಾಂಗ ಹಿಡಿಬೇಕ ಪತ್ತಾ ॥

ಪತ್ತಾ ಇಲ್ಲದವ್ನ ಸನಿ ಮತ್ತೊಬ್ಬ ನಿಲ್ಲುದಿಲ್ಲ
ಗೊತ್ತ ಇಲ್ಲದಂವಗ ಹೇಳತೀನ ಮತ್ತಾ
ತೀರ ಅಡವಿಬಿದ್ದ ನಡೀಬಾರ್ದು ದಣಿವಾದಿತ್ತಾ
ದಾರಿ ಹಿಡಿಬೇಕ ಛಲೋ ಮಾರ್ಗ ಸಿಸ್ತಾ
ಮಾತ ಕೇಳುದಿಲ್ಲ ಈಗ ಮಾದರಚೋದ ಮಂದಿ ಅಂತ
ಹಿರ್ಯಾರ ಹೇಳ್ತಾರ ನಮಗೇನ ಗೊತ್ತಾ
ಅವ್ರು ಹೇಳಿದಂಗ ಕೇಳದಿದ್ರ ಹೇಳಿ ಅನರ್ಥಾ ॥

ಒಣ ಢೋಂಗ ಮಾಡು ಮಂದಿ ಭಾಳ —ಚಾಲ—
ಮನ್ಯಾಗಿರುದಿಲ್ರಿ ಮತ್ತಷ್ಟು ಜ್ವಾಳಾ
ಜ್ವಾಳ ಇದ್ದಾಂತ ಇರತಾನ ಭವಳ
ಶಿವ ಶಿವ ಅಂತ ಹಗಲಿರುಳ
ಹಂತವ್ರು ಆಗುದಿಲ್ಲ ಹಾಳ
ಕಂಕಾಕಿ ಗೆದ್ದತಾರ ಕಾಳ ॥

ಎರಡೂವರಿಯದ ಇಂಥಾ ದಡ್ಡ ಮಂದಿಗೂಡಾ —ಕೂಡನುಡಿ—
ಎನಗ ಕೊಡ್ಡ ಕುಸ್ತಿ ಆಡಿ
ಹಂತ್ಯಾಕ ಯುಕ್ತಿ ಶಕ್ತಿ ಎರಡೂ ಇಲ್ಲ
ಆಗ್ತಾರ ಗಡಿ
ಹುಟ್ಟತಾದ ಅಂದ್ರ ಹುಶಾರಾಗಿ
ಬರತಾರ ಓಡಿ ಬಲಿಷ್ಟತನ ॥ —೩—

ರೊಕ್ಕ ಮಾತ್ರ ಕೈಯಾಗಿದ್ರ
ಸೊಕ್ಕಾಗೆ ಬರತದಪ್ಪಾ
ಝೋಕ ಹೊಡಿಲಾಕ
ನಾಲ್ಕಂಗಿ ಹೊಲಿಸಿ ಕೊಳ್ಳವರ ॥

ವಳೆ ಪಾರ್ಸಿಕೋಟ ಕಾಲಾಗ ಬೂಟ
ಚಡಾವ ಮೆಡಾವರಾ

ಛಲೋ ಮಾಂಜ್ರಪಾಟ ನಾಜೂಕ ಚೀಟ
ನೋಡಿಕೊಳ್ಳವರ ಕೈ ಹೊಲಗಿ ಕಗ್ಗಂಗಿ
ಎಷ್ಟೋ ಮಂದಿ ಬಿಟ್ಟಾರಪ್ಪ
ಛಂದಕಾಗಿ ಚಾರಣೆ ರೊಕ್ಕ ಕೊಟ್ಟಾರು
ಈಗ ಯಂತ್ರ ಮ್ಯಾಲ ಹೊಲಸಿದಂಗಿ
ಎಲ್ಲಾರು ತೊಟ್ಟಾರು ॥

ಸೂಳಿ ಸೋಂಗ ಮಾಡುಮಂದಿ ಭಾಳ ಆದಿತ್ತಾ
ನಾಡಾಗ ಸ್ವಂತ ಹೇಳಿ ಕೇಳಿ
ಮ್ಯಾಳ ಮಾಡಿ ಕಸಬಕ ನಿಂತಾರಾ
ಹಿಂತಾ ಕಾಮ ಚೇಷ್ಟಾ ಮಾಡುದೆಷ್ಟು
ಅಗ್ಗದ ಸೂಳ್ಯಾರು
ಒಂದು ದುಗುಲ ತೊಗೊಂಡ
ಹಗಲು ಇರುಳ ಹಾದರ ಮಾಡವರಾ ॥

ಲಾಡ ಬಂದ ಲಾಯಿಕ ಹುಡುಗನ
ನೋಡಿನಂದ್ರ ಕಾಣವಲ್ದು
ಹೇಡಿ ಹೆಂಗ್ಸರ ಮಾತ ಕೇಳವರಾ
ಹೆಂಡ್ರ ಮಾತ ಮೀರಿದರ
ಮಾಸ ಕಮ್ಮಾತಂತಾರಾ ॥

ದೇಶಕ್ಕಾಳಿ ಬಿರದಾ ಹಚ್ಚಿ
ಮೆರೆದಂತಾ ಪೇಶ್ವೆ ರಾಜನ
ನಿಂತುನಿಂತಲ್ಲೆ ಪಿತೂರ ಮಾಡಿ
ಕುಲ ಕೊಟ್ಟಾರ ಏನ
ಸಂಸೆ ಇಲ್ಲದೆ ದೊಡ್ಡ ಸಂಸ್ಥಾನ
ಅಳದು ಬಿಟ್ಟಾರ ಹಿಂತಾ ಹೇಸಿ ಜನಾ
ಮೋಸ ಮಾಡಿ ದೇಶ ಕೊಟ್ಟಾರಾ ॥

ಘಾತ ಮಾಡೋ ನೇತನಿಟ್ಟು
ಕಾಯ್ದೆ ಕಲ್ತು ಕಾರಭಾರಿ ಆಗಿ
ಗಳಿಸಿ ರೊಕ್ಕಾ ಗಂಟಕಟ್ಟಿ ಹುಗದ ಬಿಟ್ಟಾರಾ
ಎಷ್ಟೋ ಪ್ಲೇಗದಾಗ ಸತ್ರ ದಾನಾ ಧರ್ಮ ಮಾಡೋಲ್ರ ॥

ತುಡಗ ಹಾದರ ಲಂಚದ ರೊಕ್ಕ —ಚಾಲ—
ಒಮ್ಮೆ ಆಗತಾವ್ರಿ ಮಂದಿಯ ಪಾಲಕ
ಹಕ್ಕ ಹಲಾಲ ಮಾಡಿದವ್ನ ಬದ್ಕ
ಹಾಳಾಗೂದಿಲ್ರಿ ಕಡಿ ತನಕಾ
ಮಹಾರಾಷ್ಟ್ರದೊಳಗ ನಮ್ಮ ಸಂಖ
ನಾವು ಇರತೇವ್ರಿ ಗುರುವಿನ ಪಾದಕ ॥

ಗುರುವಿನ ಸೇವಾ ಮಾಡಿನಾವ —ಕೂಡನುಡಿ—
ಅರುವು ತಿಳದ ಇರತೇವ
ಸರ್ವ ಮಾತಿಗಿ ಸಾಂಭ ಹಾನ ನಮ್ಮಕಡಿ
ಏನ ಕಸರ ಇಲ್ದೆ ಹೆಸರ ಹಾಕಿ
ಹೇಳ್ತೇವ ಹಾಡಿ
ಇದು ನೀತಿ 'ತಾತ್ಯಾ—ಬಾಪು'ನ
ಅಕ್ಷರ ಜೋಡಿ
ಬಲಿಷ್ಠತನ ಬಂಡಾಯ ॥ —೪—

****

೭. ಭಣಕ ಫಣಕ ಏನ ಕನಕ ಕಾಲುಂಗರ

ಹೌಸ್ರ ಹೌಸ ಹೇ ದಿವಸ ನಿನ್ನ ಮಾರಿ ಕಳಿ —ಗಂಡು—
ಎಳಿ ಬಾಳಿಸುಳಿ ಹಂತಾ ಹೆಣ್ಣ ॥

ಮುರಕ ಗರಕ ಮಾಡಿ ಸರಕನೆ ಹೊಕ್ಕಾಳ
ಮಾತಾಡೊಲ್ಲದೆ ನಿಂತಾ
ಏ ನಿನ್ನ ನರ್ತ ಜರ್ತ ಏನ ಕಡತ
ಬಿದ್ದಾಂಗ ತಾಳ ಮದ್ದಲಿ ಗತ್ತಾ
ಹೇ ನಿನ್ನ ಯಮಕ ಚಮಕ ಏನ ಧಮಕ
ಹೇಳಲಿ ಪರೇಭಾರ ತುಂಬಿ ನಿಂತಾ ॥

ಭಣಕ ಫಣಕ ಏನ ಕನಕ ಕಾಲುಂಗರ
ಟಣಕ ಟುಣಕನೆ ಕುಣಕೋತ ಹೋಗುದು ಕಂಡು
ಭಣಕ ಫಣಕ ತುಡಿ ಧಾವಿಸಿ ಬಂದೀನಿ
ನೇಮಿಸಿ ನಿನಗಂತಾ ॥

ನಿನ್ನಂಗ ಸುರ್ತಕ ದಾರಿಲ್ಲ ಮರ್ತೇಕ ಮೀರಿದಿ
ನೋಡಿ ಬಂದೆ ಮಸ್ತ
ವಸ್ತು ವಡವಿ ಏನ ಮಸ್ತ
ನಿನ್ನಲ್ಲಿ ಶಿಸ್ತ ಮಾಡಿ ಇಟ್ಟಿ
ರಸ್ತ್ಯಾಗ ಹೊಂಟಿದಿ ಎಳದಾಂಗ
ನೈನ ಮ್ಯಾಗ ತೇರಾ ॥

ನಿನ್ನ ಕಂಡ ಮೆಚ್ಚ ಹುಚ್ಚ
ನಾ ಖಚಿತ ಆದಿನಿ ಸುಳ್ಳಲ್ಲ ಸುಂದರಾ
ನಾನು ಕಾಂತ ಬಂದಿದೇನು
ಶಾಂತ ಮಾಡು ಮನಾ ನಿಂತ ಮಾತಾಡು ಜರಾ ॥

ಭಂಡನಾದಿ ನಾ ನಿನ್ನ ಕಂಡ
ಕಡಕೊಂಡ ಬಿದ್ದ ಮಳಕಾಲ
ಬಡಕೊಂಡು ಒಡಕೊಂಡು ಹಿಡಕೊಂಡು
ಬಂದ ಸುರತಿ ಹಾರೇತೇಳ ತೀರಾ

ನಿನ್ನ ಗುಂಗ ಸೇರಿ ನಾ
ಮಂಗನಾದ್ನೆ ಸಂಗ ಮಾಡ ಜರಾ ॥

ಹಿಂದ ಮುಂದ ಇನ್ನೆಂದ
ಇನ್ನೊಮ್ಮೆ ಮಾಡಿ ನೋಡಿನಂದ್ರ
ಆಗದು ಬ್ರಹ್ಮಗ ಇಕಿ ಜೋಡಿ
ಹೆಣ್ಣಿಲ್ಲ ನಾಡ ಮ್ಯಾಗ ಯಾರಾ
ವಾಲಿ ಬುಗಡಿ ವಸ್ತು ವಡವಿನಿಟ್ಟ
ಪಗಡಿ ಕುಚ್ಚದ ಮ್ಯಾಲ ಕುಪ್ಪಸ ಜರತಾರ ॥

ಸರಗಿ ಸಾಲ ಪುತಳಿ ಕೀಲ
ಡಾಬ ನಡಕ ಬಿಗಿತಾರಾ
ಒಂದೊಂದ ವಸ್ತು ಹೇಳಿದರ
ಎಂದೆಂದಿಗೂ ತೀರದ ಬಾಜುಬಂಧ
ತೋಳಿಗಿ ಮಂದ ಗೆಳತಿಯರೊಳಗ
ಹೊಂದಿ ಹೊಂಟಾಂಗ ದೂರಾ
ನಿನ್ನ ಹುರ್ಪ ದರ್ಪ ಏನ ಸರ್ಪ
ಬೋರ್ಯಾಡಿ ಹ್ವಾದಾಂಗ ನಾಗರಾಟ ॥

-ಚಾಲ-

ಮರ್ತೇನ ಹೇಳ ಮಲಕಟದಾನ ಮಾಯಾ
ಕರಿವಲ್ದೆ ಬರ್ತಿದ್ದಿ ಭಾಳ ಪ್ರೀತಿದ್ದಿ
ಈ ಬುದ್ಧಿ ನಿನ್ನ ಕಲಿಸಿ ಪಿಲಿಸಿ
ಬಿಡಸ್ಯಾರೇನ ಮಂದಿ
ಮಂದಿ ಮಾತ ಕೇಳಿ ಘಾತ ಮಾಡಿ ಹ್ವಾದಿ ॥

-ಕೂಡಪಲ್ಲ -

ಸುಳ್ಳಲ್ಲ ಎಳ್ಳಷ್ಟು ಹೇಳತೀನಿ ಕೂಳ್ನೀರ
ನಿನಗಾಗಿ ಬಿಟ್ಟೀನಿ ನೆರಿಹೊರಿ ಕೇಳ ಹೇಳ್ತಾರ
ಎಲ್ಲ ಸುದ್ಧಿ
ಕುಂತ್ರ ನಿಂತ್ರ ಮಲಗಿದ್ರ ಇಲ್ಲ ಕಣ್ಣಿಗಿ ನಿದ್ದಿ
ಕಾಸ ದೋಷ ನಿನ್ನ ತಟ್ಟಿತ
ಕರ್ಮ ಭೋಗಿಸಿ ಮೋಕ್ಷ ದೊರಿಯಾಕಿಲ್ಲ
ಗಟ್ಟಿ ಹೇಳತೀನಿ ಬಿಟ್ಟರ ನನ್ನ ಪ್ರಾಣ ಆದಿತ ವ್ಯರ್ಥಾ
ಏ ನಿನ್ನ ಮನಕ ದಿನಕ ಬಂದ ಬುದ್ಧಿ
ಹುಟ್ಟಕೇರಿ ಮಾಡಿದಿ ಈ ಬೇತಾ
ಛಣಕ ಫಣಕ ಏನ ಕನಕ ಕಾಲುಂಗರ ॥

ಹೇಳತೀನಿ ಕೇಳಕೋರ —ಹೆಣ್ಣು—
ನಿನ್ನ ಬಾಳ ಹಾಳ ಆಗೂದ್ಯಾಕೋ ಮೂಳಾ
ಕೂಳ್ನೀರ ನನಗಾಗಿ ಬಿಟ್ಟಿದ್ದಿ
ಇದು ಒಳ್ಳೆದಲ್ಲಾ
ನಮ್ಮ ಮನಿ ಸನೆ ಬಂದ
ಧ್ವನಿ ಮಾಡತಿ ಎಷ್ಟರೆ ನಿನ ಗುಲ್ಲಾ ॥

ನೆರಿ ಹೊರಿ ಹೇಳಿ ಕೇಳಿ
ನನ್ನ ಗಂಡಗ ಕಲಿಸ್ಯಾರ
ತಿಳದೈತಿ ಅವರಿಗೆಲ್ಲಾ ॥

ಒಡಕ ಬಾಯಿ ವಾಂಡ ಗಂಡಸ
ನಿನ್ನ ಹೆಡಕ ಮುರದು ಹೆಣಾ ಹೊತ್ತಾರ ಕೂಡಿ
ಸಿಡಕ ಬುದ್ಧಿ ಬ್ಯಾಡಾ ಘಟಿಂಗತನ
ಮುರದಾಗ ನಿನ್ನ ಹಲ್ಲಾ ॥

ಹೆಂತಾ ಮೆಚ್ಚ ಹುಚ್ಚ ನೀ —ಹೆಣ್ಣು—
ಕಚ್ಚಾ ದಗದ ಎಚ್ಚರ ಎಳ್ಳಷ್ಟ ಇಲ್ಲಾ
ಕದ್ದ ಬದ್ದ ಇದ್ದ ವರ್ಷ
ದಿನಾ ಖರೆ ಆದ ಮಾತಾ
ಆಗಿಂದಾಗ ಮುಟ್ಟಿ ಕಟ್ಟಿ
ನಿನ್ನ ಮನದಾಗಿಟಗೋ ಬಿಚ್ಚಿ ಹೇಳೂದಲ್ಲಾ !
ಈ ಮಾತ ನಂದೂ ನಿಂದೂ
ಮನಾ ಒಂದ ಆದರ
ಮಂದೀಗಿ ತಿಳದಿಲ್ಲಾ ॥

ಆಗ ಒಳೆ ಸಲಗಿದಿಂದ
ನನ್ನ ಬಲಿಗಿ ಹಾಕಿದಿ
ಕೊಟ್ಟ ಕೊಬ್ಬರಿ ಬೆಲ್ಲಾ
ತಿನಿಸಿ ಉಣಿಸಿ ಮನಾ
ಒಡಸು ಕೆಡಸು ಬೇತ ಮಾತ ನನಗೆಲ್ಲಾ
ಖೂನಾದ ಇಂತಾ ಗಾತ ಪಾತ
ಮನಷ್ಯಾ ನಂಬಿಗಿ ಚಲೋದಲ್ಲಾ
ಈಗ ನಗನಗತಾ ನನ್ನ

ಒಗತಾನದಾಗ ಇದ್ದಿ ಖುಸಿಯಲ್ಲಾ
ತಿಳದಿ ಉಳದ ಹೋಗ
ಹುಚ್ಚಾ ಹೆಣ್ಣಿನ ಬಲಿ ನೆಲಿ ತಿಳದಿಲ್ಲಾ ॥

ನಿನ್ನ ಹೊಡಸೂದ ಬಡಸೂದ
ಹಿಡಸೂದ ಬಿಡಸೂದ ಎರಡು ನಾ ಬಲ್ಲಾ
ಕೇಳೋ ಹುಮ್ಮ ದಿಮ್ಮ ನಾ ಬಿಡಸಿನ
ನಿನ್ನ ಹಮ್ಮ ದಮ್ಮ ಎಲ್ಲಾ
ನನ್ನ ಮ್ಯಾಲ ಸೊಕ್ಕ ದಕ್ಕ ಪಕ್ಕ ಮಾಡಿದ್ರ
ನಿನ್ನ ಕಡಿಸಿನ ಕೈ ಕಾಲಾ
ಪುಂಡ ಗಂಡಗ ಈ ಮಾತ ಹೇಳಿದ್ರ
ಹಿಂಡಿ ಹಿಪ್ಪಿ ಮಾಡ್ಯಾರ
ಕಂಡ ಕಂಡಲ್ಲಿ ಹೇಳುತ ನಿಂತಿ
ಕೇಳ್ಯಾರ ಜನರೆಲ್ಲಾ
ನಾ ಮುಚ್ಚಿದ ಮುತ್ತೈದಿ ಹಾಂಗ
ಮಾಡುದು ಮಂದಿಗಿ ಖೂನಿಲ್ಲಾ ॥

ಹಾದರ ಹಲಕಟ್ಟ ಇದು ಬಲುಕೆಟ್ಟ —ಚಾಲ—
ಅನಗೆಟ್ಟ ಇನ್ನ ಕುಲಗೆಟ್ಟ ಇದರಾಗೇ ಹೋಗೋದು
ಇಷ್ಟ ತಿಳಿದವರು ಎಲ್ಲಿ ಮಾಡುದಿಲ್ಲ ಎಂದೂ
ರೀತೀಲಿ ಹೇಳಿದ್ರ ಬಾಯಿ ಮಾತೀಲೆ ಹೇಳಿದ್ರ
ಕುಂತಲಿ ನಿಂತಲಿ ಹಿಂಬಾಲ ಬರ್ತಿದಿ ಹುಚ್ಚೆದ್ದು
ಸುರ್ತಿ ಹಾರಿತೇನು ಸುದ್ದಿ ಮ್ಯಾಗಿಂದು ॥

ಎಟ್ಟ ದಿಟ್ಟ ಮನಸ್ಯಾ ನೀನು —ಕೂಡನುಡಿ—
ಕೊಟ್ಟ ಗಂಟ ನನ್ನ ಮ್ಯಾಲ ಆದೇನು
ಹೆಜ್ಜಿ ಹಿಜ್ಜೀಗಿ ಹಿಂಬಾಲ ಬರ್ತಿ
ಹಿಮ್ಮಡ ತುಳಕೊಂತಾ
ಹಿಂಗ ಉರದು ಮೇರದರ
ಮುರದಾರ ಜೋಕ್ಯಾನ ಪ್ರಾಣಾ
ಆದಿತ ವ್ಯರ್ತಾ ॥
ಬಾಯಿ ತೆರೆದ ಕರದ ಬರದ
ಹೆಣ್ಣಿಗೆ ಸೇವಟಿಗಿ ವ್ಯರ್ತಾ
ಭಣಕ ಫಣಕ ಏನ ಕನಕ ಕಾಲುಂಗರ ॥

ಹಂಗ ಬಂಗ ನಾ ಹಾರಿ ನಿಂತೀನಿ ತೀರಾ —ಗಂಡು—
ಸಂಗ ಹಿಂಗ ಮಾಡಲಿ ಜರಾ
ಮಿಡಿಕಿ ತೊಡಕಿ ನಿನ್ನ ಕಾಲಾಗ
ಜೀವ ಆದೀತ ಹೈರಾಣಾ
ನಿನ್ನ ಓಡಿಕಿ ದುಡಿಕಿ ಎಲ್ಲಿತನಾ
ಐತಿ ಹೇಳಾಕ ನಿನ್ನ ಪ್ಯಾನಾ ॥

ಕರುಣ ಬಾರದ ಕಲ್ಲ ಎದಿಗಿ
ಮೆಲ್ಲಾಕ ನಿಲ್ಲಾಕ ನಿನಗ ತಿನ್ನಾಕ
ತಂದೀನಿ ಸವಿ ಸಕ್ಕರಿ ಹೆಣ್ಣಾ
ಜೀವದಿಂದ ಹೊರ್ತ ತುರ್ತ ನಾ ಬೇಕಾದ್ರ
ತರ್ತೀನಿ ಹೊಡದ ಹುಲಿ ಗಿಣ್ಣಾ
ದೂಡ ನೋಡ ಹುಡಗನ ಗುಣಾ
ಕಾಡ ಬೇಡ ಕಡಿಮಿ ಇಲ್ಲ ಬೇಡಿಮ್ಯೆ
ಬೆಳ್ಳಿ ಬಂಗಾರ ಎಣಿಸಿ ರೂಪಾಯಿ ಝುಣ ಝುಣ
ನನ್ನ ಮುಂದ ಉಟ್ಟ ತೊಟ್ಟ ತೋರಿಸ ನೀ
ಅಕ್ಕರತಿಯಿಂದ ಇಡು ಬಂಗಾರ ದಾಗಿನಾ
ಮನಿ ಮಾರ ಜಿಂದಗಿ ಇಂದಿಗಿ ಹಾಳಾಗಲಿ
ನಿನ್ನ ಕಾಲಾಗ ಕಾಲು ನಾ
ಸರ್ದ ಪರ್ದ ನನ್ನ ಮಾತ ಮೀರಿ
ಬರ್ದ ಮುರ್ದ ಹೋದರ
ನಾ ಬಾಯಿ ತೆರ್ದ ಖಾಲಿ ಕುಂಡ್ರಾವಲ್ಲ
ನೋಡರೆ ನೋಡ ಜಾಣಾ
ಜನದೊಳಗ ಅಬ್ರು ತಗೋತಿನಿ
ಗಬ್ರು ಹೋಗಲಿ ಈ ಪ್ರಾಣಾ ॥

ಹುಡುಗ ಗಿಡಗ ಆಡಿದ ಮಾತಿಗಿ —ಹೆಣ್ಣು—
ಅರ್ಥ ಬೆರ್ತ ನಿಂತಾಳ ಬಾ ನಿನ್ನ
ಗುರ್ತ ತುರ್ತ ನಾ ಎಲ್ಲಾ ಬಲ್ಲೇನ
ಸುತ್ತುಳ್ಳ ಸುಖ ಜಾಣಾ ॥

ಸುಮ್ಮನ ಸೋಂಗ ಢೋಂಗ ಮಾಡಿ
ನೋಡಿನ ಮನದೊಳಗ ಇತ್ತಂತ ಕರುಣಾ
ಎಂಥಾ ಒಟ್ಟ ದಿಟ್ಟ ನನ್ನ ಬಿಟ್ಟ

ಇರಲಿಲ್ಲೊ ಅಗಲಿ ಒಂದಕ್ಷಣಾ
ಚದುರ ಇದರ ನೀ ನೆದರ ಮುಂದ
ಬಂದ ನಿಂತ್ರ ಇಂದ್ರ ಚಂದ್ರನ ಕಳಿ
ಪುರುಷ ಮನಷ್ಯಾನರ ಅಲ್ಲ
ನೀ ಪಾಂಡವರ ಅರ್ಜುನಾ
ನಿನ್ನ ಮ್ಯಾಲ ಹಂಬಾಲ ಹಿಂಬಾಲ
ಬರ್ತೀನಿ ಇರುವುದು ಯಾವ ಠಿಕಾಣಾ ॥

–ಚಾಲ–

ಖುಸಿದಿಂದಾ ಕೂಡಿ ಕೂಂತಾರಿಬ್ರು
ಸಂಗ ರಂಗ ಮಹಾಲದಾಗ
ಆತ ಹೋತ ಬೇತ ಮಾತ–ಕತಿ
ಇದ್ದದ್ದಿರಲಿ ಮುಂದ ಬರುದ್ಯಾಂಗ
ನಿನ್ನ ಕಾಣದಿದ್ರ ಕಣ್ಣ ಕಟ್ಟಿದಂಗ
ಬರ್ತ ಬರ್ತನಾ ಬರ್ತಿನ ದಿನಾ
ಮರ್ತ ಬಿಡು ಜನ್ಮ ಹೋಗೂತನಾ
ಆಶ ಪಾಶ ಗಾಶನಾದರ
ಭಾಷಿ ತಗೊ ಇದರಂಗ
ದೇವರಾಣಿ ಕೊಡತಾಳ ಎಂದೂ ಬಿಡದಂಗ ॥

–ಕೂಡನುಡಿ–

ಸದ್ದ ಬದ್ದಿಗಿ ಆಗೋ ಮಾತ
ಖರೆ ಖರೆ ಹೇಳತೀವ
ತುರ್ತ ಗುರ್ತ ಮರ್ತ ॥

ಇರಬ್ಯಾಡ್ರಿ ಸಂಖದ ಸಾಹೇಬನ
ಧ್ಯಾನಸ್ಥ ಇದರಾಗ
ಚಿದ್ರ ಇದ್ರ ಹೋದ್ರ ಬಂದ್ರ
ತಗದಾಂವ ಬುದ್ಧಿವಂತಾ ॥

ತಾತ್ಯಾ–ಬಾಪು ಮಾಡಿದ
ಲಾವಣಿಗೆ ಬುದ್ಧಿ ಕೊಟ್ಟಾನಾ ಗುರುನಾಥ
ಛಣಕ ಫಣಕ ಏನ ಕನಕ ಕಾಲುಂಗುರ ॥

****

೮. ನೆಡತನ ಕೂಡಿದಲ್ಲಿ

ನೆಡತನ ಕೂಡಿದಲ್ಲಿ ಧಡತನ ತಗೋಳಾಂವ
ಭೀಕಾರಿ ಬೀಗೋಬ್ಬ ಇರಬಾರದು ॥

ಮನಸ್ಸೊಂದ ಸರಳಾ ಇರಬೇಕ ನಿರಳಾ
ಕುಭಾಂವ ಕಪಟಿ ಇರಬಾರದು ॥ –ಪಲ್ಲ–

ಹಂಬಲಿಟ್ಟ ಅಳಿಯಾ ಮನೀಗಿ ಹ್ವಾದರ
ಮಾಂವ ಮಾತಾಡಸಲ್ದೆ ಇರಬಾರದು
ಇರಬೇಕ ರೀತಿ ಮನ್ಯಾಗ ಅತ್ತಿ
ಬೀಗೊಂದು ಬಿಕ್ಕೊಂಡು ತಿರಗಬಾರದು ॥

ಎದಿಮ್ಯಾಗ ಮಲಿ ಬಂದಂತ ಬಾಲಿ
ಹಾಸಿಗೀಗಿ ಧ್ಯಾಸತನ ಮಾಡಬಾರದು
ಇರಬೇಕ ಜೋಡಿ ಸತಿ–ಪತಿ ಕೂಡಿ
ಗಂಡನ ಬಿಟ್ಟು ಗಯ್ಯಾಳಾಗಿ ತಿರಗಬಾರದು ॥

ಗೆಣಕಾನ ಕಟ್ಟಿ ಅವನ ಹೆಣ್ತಿಗಿ
ಹೋಗುವ ವಿಶ್ವಾಸ ಘಾತಕ ಇರಬಾರದು
ಇರಬೇಕು ಗಂಡಾ ಮನ್ಯಾಗ ಮಂಡ
ಬಾಡಿಗಿ ತಿನ್ನುವ ಮನಷ್ಯಾ ಇರಬಾರದು ॥

ಸುದ್ದಿ ಇಲ್ಲದೆ ಸ್ವಪ್ನದೊಳಗ
ಹಾಸಿಗ್ಯಾಗ ಉಚ್ಚಿ ಹೊಯ್ಯಾವ್ರು ಇರಬಾರದು
ಸಭಾದಾಗ ಶಭಾಸ್ ಅನಸಗೋಬೇಕ
ರಂಗದಾಗ ಹೂಂಸ ಬಿಡವ್ರ ಇರಬಾರದು ॥

ಕೂಲಿಗಿ ಹ್ವಾದಲ್ಲಿ ಕುಂತ ನಿಂತ ಹೊತ್ತಗಳದ
ಅನೀತಿ ತರವ್ರು ಇರಬಾರದು
ಮಾಡಬೇಕ ಧವತಿ ಬರುಹಂಗ ಮಮತಿ
ಹೆಗ್ಗಳ ಮನಷ್ಯಾ ಇರಬಾರದು ॥

ದಾರಿ ತಪ್ಪಿ ದೂರ ಹೋಗಿ ಘೋರ ಮಾಡಿಕೊಂಡ ಜೀವಾ
ಹಾದಿ ತಪ್ಪಿ ಹಳ್ಳ ತುಳ್ಯಾವ್ರ ಇರಬಾರದು
ಅಡ್ನಾಡಿ ಅಕಲ ತಗದಾಂವ ಶಕಲ
ಶಾಣ್ಯಾ ಹೋಗಿ ಸಿಂತರ ಆಗಬಾರದು ॥

ಗಾಯನ ಕಳದಲ್ಲಿ ಘನಸ್ವರ ಇರಬೇಕು
ಅಪಸ್ವರ ಹಾಡಾವ್ರ ಇರಬಾರದು
ಇರಬೇಕ ಗಟ್ಟಿ ಮೆಟ್ಟಿಗೆ ಅಳತಿ
ತಾಳರಕ ತಾಸಿಲ ಇರಬಾರದು ॥

ಮಹಾರಾಷ್ಟ್ರ ಸಂಖ ಸಾರುವದು ಢಂಕ
ಬಿರದ ಮೆರೆಯದೆ ಇರಬಾರದು
ತಾತ್ಯಾ–ಬಾಪು ತಮ್ಮ ಮನಕ ಹೇಳತಾರ
ವಿದ್ಯೇಕ ವಿಧಿ ಅಡ್ಡ ಬರಬಾರದು ॥

****

೯. ಮಾಡಂಗ ಮಾಡಿದರ

ಭೋಗದ ಮಾತ ನಾ ಬ್ಯಾಗದಿಂದ ಹೇಳ್ತಿನಿ
ಯೋಗ ತತ್ವದೊಳಗಿನ ಕೀಲಾ
ಮಾಡಂಗ ಮಾಡಿದರ ತಾನ
ಆಗಂಗ ಆಗತದ ಭೋಗದ ಮುಂದ
ಯಾರ ಓಡಿಲ್ಲ ॥ -ಪಲ್ಲ-

ಮೊದಲಿಗಿ ಆರು ಶಾಸ್ತ್ರ ಹುಟ್ಟಿದಾವ
ಹದಿನೆಂಟ ಪುರಾಣ ಕಲತಿಲ್ಲಾ
ಪುರಾಣ ಓದಿದಾಂವಗ ಹೈರಾಣ ಆಗುವುದು
ಅಂಥಾವನಿಗ್ಯಾಕ ತಿಳಿದಿಲ್ಲ
ಸುಮ್ಮನೆ ಬ್ರಹ್ಮನು ಶಿರವನು ಕಳಕೊಂಡ
ಸೃಷ್ಟಿಕರ್ತಗ್ಯಾಕ ತಿಳಿಲಿಲ್ಲಾ
ಶನಿಗಂಜಿ ಶಿವ ಸುಡಗಾಡ ಸೇರಿದ
ಸಾಂಭನಿಗ್ಯಾಕ ಅದು ಬಿಡಲಿಲ್ಲ
ಪಂಚ ಪಾಂಡವರು ಪಗಡಿನಾಟವಾಡಿ
ಪಂಥನಾಟವಾಡಿ ಸತಿ ಸೋತಾರಲ್ಲಾ
ಸಾಕ್ಷಾತ ಶ್ರೀಕೃಷ್ಣ ಬೀಗನಾಗತಿದ್ದ
ಮುಂದಾಗುದು ಅವನ್ಯಾಕ ಹೇಳಲಿಲ್ಲಾ
ಮನ ಮೂಡಿನಾಗ ಮುಡಿಮುತ್ತ
ತಪ್ಪ ಮಾಡಿ ಹೋದಾರೊ ಕೆಟ್ಟ
ಅಹಲ್ಯಾದೇವಿ ಮ್ಯಾಲ ಮನಸಿಟ್ಟ ಇಂದ್ರ
ಮೈ ತೂತಾಗಿ ಉಳಿಲಿಲ್ಲ ಒಂದಿಷ್ಟ
ಹದಿನಾಲು ವರ್ಷದ ಆಯುಷ್ಯ ಪಡೆದಿದ್ದ
ಮಾರ್ಕಾಂಡೆ ಮುನಿ ಯಾಕ ಸಾಯಲಿಲ್ಲಾ
ಮಾಡಂಗ ಮಾಡಿದರ ತಾನ ಆಗಂಗ ಆಗತದ ॥ -೧-

ರಾವಣನ ಐಶ್ವರ್ಯ ನಾ ಎಷ್ಟಂತ ಹೇಳಲಿ
ಸೃಷ್ಟಿಕರ್ತ ಅವನ ಮನಿ ಒಳಗ
ಸೀತಾದೇವಿನ ತಂದ ಸುಟಗೊಂಡ ಲಂಕಾ
ಯಾಕ ತಿಳಿಯಲಿಲ್ಲ ಅಂಥಾವಗ

ಸೀತಾದೇವಿ ಪತಿ ರಾಮ ರಾಮ ಅಂತ
ಕೂಗತೀದಿ ಕುಂತ ನಿಂತಾಗ
ಹಂತಾ ರಾಮಗ ಹೆಂತಾದ ವನವಾಸ
ಸತ್ತ ಹುಟ್ಟಿದಾನ ಅದರಾಗ
ಕೃಷ್ಣ ಮೂರುತಿ ಸಾರಥಿ ಆದಾನ
ಮೂರು ಲೋಕದ ಗಂಡ ಅರ್ಜುನಗ
ಹಂತಾ ಅರ್ಜುನನ ಸಿರಾ ತಗದಾನೋ
ಮಗ ಬಬ್ರುವಾಹನ ಕ್ಷಣದಾಗ
ಧರ್ಮರಾಜನ ಕೀರ್ತಿಯು ಭಾಳ
ಸತ್ಯ ವಚನಕ ಆದಾನೋ ಹಾಳ
ಪತಿವ್ರತಾ ದ್ರೌಪತಿದು ಗೋಳ
ದುಶ್ಯಾಸನನು ಆದಾನೋ ಕಾಳ
ನೂರಾ ಒಂದ ಮಂದಿ ಕೌರವರ ದಂಡಾ
ಐದು ಮಂದಿಗಿ ಈಡ ಆಗಲಿಲ್ಲ
ಮಾಡಂಗ ಮಾಡಿದರ ತಾನ ಆಗಂಗ ಆಗತದ ॥ –೨–

ಲಕ್ಷ್ಮೀ ಸರಸ್ವತಿ ಪಾರ್ವತಿ ಮೂವರು ಕೂಡಿ
ಮಾತಾಡತಾರ ಕುಂತ ನಿಂತಾಗ
ಬಂದ ನಾರದನ ಹೊಂದಿ ಕೇಳತಾರ
ತಂದ ಸುದ್ದಿ ಹೇಳ ನಮಗ
ಬೆರಕಿ ನಾರದ ತರಕೀಲೆ ಹೇಳತಾನ
ಅರಗಿಳಿ ಕಂಡಿನೊಂದು ಭೂಮಿಮ್ಯಾಲಾ
ಅನಸೂಯಾದೇವಿದು ನಾ ಎಷ್ಟಂತ ಹೇಳಲಿ
ನೀವೇನ ಅಲ್ಲರೆವ್ವ ಅಕಿಹಂಗ
ಪತಿವ್ರತಾ ಧರ್ಮಕ್ಕ ಅನಸೂಯಾನಂಗ
ಇಲ್ಲ ಸ್ವರ್ಗ ಮತ್ತು ಪಾತಾಳದಾಗ
ನಾವೇ ಹೆಚ್ಚ ಅಂತ ನೀವೇ ಕೂಗತೀರಿ
ನಿಮ್ಮಂತವರ ಅದು ಕೈಲಾಗೂದಿಲ್ಲ
ನಾರದನು ಹ್ವಾದಾನೊ ಹೇಳಿ
ತಲಿ ಕೆಟ್ಟಿತೋ ಮೂವರದು ಕೂಡಿ
ಸಾಂಭ ಶಿವನಿಗಿ ಬಡದಿತ್ತೋ ಗಾಳಿ
ಬ್ರಹ್ಮ ವಿಷ್ಣುಗ ಬಂದಿತ್ತೊ ಧಾಳಿ
ಅವ್ರು ಮೂವರು ಆದಾರೊ ಗ್ವಾಳಿ
ಭೂ ಲೋಕಕ್ಕ ಹೋಗೂದು ನಾಳಿ

ಹೆಂಡರ ಮಾತಕೇಳಿ ಕಂಡಂಗೆ ಕುಣದಾಡಿ
ಭಂಡರಾಗಿ ಹ್ವಾದರೊ ಭೂಮಿ ಮ್ಯಾಲ
ಮಾಡಂಗ ಮಾಡಿದರ ತಾನ ಆಗಂಗ ಆಗತದ ॥ -೩-

ಅನಸೂಯಾ ದೇವಿ ಅಂಗಳದೊಳಗೋಗಿ
ತಿಂಗಳ ಕೂಸಾಗಿ ಆಡ್ಯಾರ
ಜಂಗಮ ರೂಪಿಲ್ಲ ಲಿಂಗಕ್ಕ ನೀರಿಲ್ಲ
ಮಂಗಳ ಮೂರುತಿ ಮಾದೇವಗ
ಬ್ರಹ್ಮ ವಿಷ್ಣು ರುದ್ರ ತ್ರಿಮೂರ್ತಿಗಳು ಕೂಡಿ
ಸತ್ತಾರ ಹೆಂಡರ ಕಾಲಾಗ
ತಾ ಮಾಡಿದ ಮಾತಾ ತಮಗ್ಯಾಕ ತಿಳಿಲಿಲ್ಲ
ಬ್ರಹ್ಮ ಬರದಿದ್ದ ತಮ್ಮ ಹಣಿವಳಗ
ಸಾವಿರಾರು ಮಂದಿ ಎಲ್ಲ ಸಾಧೂರಾಗತಾರ
ಬೋಧ ಹೇಳತಾರ ಬಲ್ಲಂಗ
ಅನುಭಾವ ಶಾಸ್ತ್ರ ಅನುಗಾಲ ಹೇಳತಿರಿ
ಜನ್ಮ ಹೋತ ಗಾಂಜಾ ನಿಶೇದಾಗ
ತಾ ಮಾಡಿದ ಕರ್ಮವು ಕದ್ದು
ದುರ್ಗುಣವು ಹೋಗದು ಎಂದೂ
ಕೆಟ್ಟಬಂದ ಬ್ರಹ್ಮಗೇರಿ ನಿಂದೂ
ಹುಟ್ಟಿ ಬಂದದ್ದು ಸಾವುದು ಒಂದು
ಹಣೆಬರದ ಗೆರಿ ಹರನಿಗಿ ತಪ್ಪಿಲ್ಲ
ನರನಿಗಿ ಯಾವುದೂ ನೆಲಕಿಲ್ಲಾ
ಮಾಡಂಗ ಮಾಡಿದರ ತಾನ ಆಗಂಗ ಆಗತದ ॥ -೪-

ವೇದಾಂತ ಸಿದ್ಧಾಂತ ಓದಿದ ಮನುಜಾ
ಹಾದಿ ಠಾವಿ ಇಲ್ದೆ ಸತ್ತಾರಲ್ಲಾ
ಹುಟ್ಟಾ ಸಮಾಗುಣ ಗಟ್ಯಾಗಿ ಇರುವುದು
ಬಿಟ್ಟೇನಿ ಅಂದ್ರ ಅದು ಹೋಗೂದಿಲ್ಲಾ
ಸತಿ ಪತಿ ಕೂಡಾಗ ಜಾತಕ ನೋಡ್ತಿರಿ
ಪಾತಕ ಅವರನ್ನ ಬಿಟ್ಟಿಲ್ಲಾ
ಮೂರತ ನೋಡಿ ಒಳೆ ಗೋರಾಟ ಬಿಡತೀರಿ
ರಾವಕಂಡಿ ಹುಟ್ಟೂದು ತಪ್ಪುದಿಲ್ಲಾ
ಇದು ಸಂಸಾರದೊಳಗಿನ ಮಾತಾ
ಭಾಳ ಹೇಳಿದರ ಆಗೂದಿಲ್ಲ ಗೊತ್ತಾ

ಲಗ್ನವಾಗುವಾಗ ತಗೂತೀರಿ ಮೂರ್ತಾ
ಶಾಸಿಕಟ್ಟೀ ಮ್ಯಾಲಿ ಹೋಗ್ತಾವ ಸತ್ತಾ
ಹೊನ್ನ ಹೊನ್ನೂಟಗಿ ಹೊನ್ನನ ಲಾವಣಿ
ಚಿನ್ನಿ ಸಕ್ಕರಿ ಕುಡದಾಂಗ ಹಾಲ
ಮಾಡಂಗ ಮಾಡಿದರ ತಾನ ಆಗಂಗ ಆಗತದ ॥ –ಶಿ–

****

೧೧. ಕರಿ ಬರದ ಲಾವಣಿ

ನೀವು ಕುಂತ ಕೇಳರಿ ಒಂದ ತುಸಾ ಹಾಡಿನಾ ರಸ
ಕೆಟ್ಟ ದಿವಸ ಬರತಾವ್ರಿ ಮ್ಯಾಗ ಮ್ಯಾಗ
ಇದು ಬರುವ ಕಾರಣ ಏನ ಪಾಪ ಹೆಚ್ಚಾತು ನಾಡಾಗ ॥

ಹಿಂಗ ಹೇಳತಾರ ಹಿರಿಯರು ಆಗಿನ ಜನರು
ನೋಡಿದ್ದಿಲ್ಲ ಬರ ಹುಟ್ಟಿ ಬಂದಮ್ಯಾಗ
ನಮ್ಮ ಕಾಲ ಕೀರ್ತಿಲೆ ಕಂಡೆವ ನಾಲ್ಕೆರಡ ಹಿಂಗ
ನೋಡ ನೋಡುತ ಬಂತ ಕರಿ ಬರ
ಹ್ವಾದುವ ದನಕರಾ ಉಳಿಯಲಿಲ್ಲ ಕಸರ
ಸುಡಿಗಿ ಬಲ್ಲಂಗ ಎಂಟೆತ್ತ ಹೋಗಿ
ಒಂಟೆತ್ತ ಉಳಿತ ಮನ್ಯಾಗ ॥

ಊರ ಬಡಿತ ನಡಿತ ಮಂದಿ ದೌಡ —ಚಾಲ—
ಹೋಗಿ ಸೇರುನಂತಾರ ಮಲ್ಲಾಡ
ಬೆಳೆದ ಸುದ್ದಿ ಕೇಳತಾರ ನಾಲ್ಕು ನಾಡ
ಕಲ್ಯಾಣ ಕಲಬುರ್ಗಿಕಡಿ ಬೆಳೆದಾವ ಅಂತಾರ ಪಾಡ
ವರ್ತಮಾನ ಪತ್ರದಾಗ ತಿಳಿಸ್ಯಾರ ಸರಕಾರ ದವಡ
ರಾಗಿ ನೆಲ್ಲ ಬೆಳದಾವ ಹುಬ್ಬಳ್ಳಿ ಧಾರವಾಡ
ನಾಡ ಬಿಟ್ಟು ನಾಡಿಗಿ ಹೋಗೂದು ಬಲು ಜಡಾ
ಕುಂತ ಜಾಗದಾಗ ತಿಂದೇವ ಪಲ್ಲಿ ತಾಡ ॥

ಮಗಳ ಮಕಡಾಬ ಇತ್ತ ಒಂದು ಠೀಕ —ಚಾಲ—
ಅದನ್ನ ಕೊಟ್ಟಿನಪ್ಪಾ ಅಡಿಚಶೇರ ಜ್ವಾಳಕ
ಹೋತ ಗುಂಡ ಗುಳದಾಳಿ ಕೊಟ್ಟಿನ ಪದಕ
ಬೆಳ್ಳಿ ಬಂಗಾರ ಕೈತೂಕ
ನಿಕಾಲ ಆದಿತಪ್ಪ ಮಾಡಿದಟ್ಟ ಬದಕ
ಇನ್ನ ದಿನಾ ಭಾಳ ಉಳದಾವಪ್ಪ ಮುಂದಕ ॥

ಹಿಂಗಾಗಿ ಹೋತ ಗಡಾಮುಡಿ ಹಗಿಯ ಮನಿ ಮಾಡಿ —ಕೂಡನುಡಿ—
ಆದಾವ ದರೂಡಿ ಎಷ್ಟೋ ಊರಾಗ
ಇದು ಬರುವ ಕಾರಣ ಏನ ಪಾಪ ಹೆಚ್ಚಾತು ನಾಡಾಗ ॥ —೧—

ಕೊಂಡ ಹಾಕಾಂವಗ ಭಾಳ ತುಟ್ಟಿ ಕಣಿಕಿ
ಸೂಡಗಳ ಎಣಿಕಿ ಹೆಚ್ಚಾಗಿ ಕೊಡುದಿಲ್ಲ ಒಂದ ಗಣಿಕಿ
ಎರಡ ರೂಪಾಯಿ ಕೊಟ್ಟು ತಂದ್ರ ಮೇವ
ಒಂದಕ್ಕ ಸಾಲವಲ್ದು ಪೂರಾ
ಹಿಂಗ ನಡಿದಿತ್ತ ದನಕರಿನ ಅವಸ್ಥಿ
ಹೆಬಟಿ ಕಡಿದಾರ ಗಿಡಗಬಟಿ
ಹಡ್ಡಿ ನೆಲ ಬಗಟಿ ತಗದಾರ ಬೇರ
ಅಟ್ಟು ಎಲ್ಲಾ ತಿಂದ್ರು ವಣಾಗೂಟಕ ನಿಂತಾವ ಮರಾಮರ
ಸಿಗವಲ್ದು ಬೇವಿನ ತಪ್ಪಲ
ಹುಣಸಿನ ಗಿಡಾ ಮದಲ ಆದು ನಿಕಾಲ
ಬಬಲಿ ಸಂಹಾರ ಅಳ್ಳಿ ಹತ್ತಿ ಬಸರಿಗಿಡ
ಸಿಂಧಿ ಘರಿಕಿ ಏಕತ್ರ ॥

ತಪ್ಪಲ ತಿಂದ ಹೋದಾವ ದನದ ಕೈಕಾಲ —ಚಾಲ—
ಕುತ್ತ ಜಾಗ ಬಿಟ್ಟು ಏಳಾಕ ಬರಲಿಲ್ಲ
ಅಡವೀಗಿ ಹೋದ ದನಾ ಕರಾ ಅಡವೀಪಾಲ
ಬಾಲಕ ಕೈ ಹಾಕಿ ಎತ್ತಿದರ ಬಿಡಲಿಲ್ಲ ನೆಲಾ
ಬಿಟ್ಟ ಬಂದ್ರ ಹದ್ದ ಕಾಗಿ ಬಿಡುತ್ತಿಲ್ಲ
ಅವುತ್ರ ಖಂಡ ಆಗೂದು ನಾಯಿ ನರಿ ಪಾಲ
ನಿಂತ್ರಾಟಿಗೆ ಕೊಟ್ಟೇವು ಹೊಲೆಯರಿಗೆ ಬೇಡಿದಂಗ
ಚೌಲ, ಪಾವಲಿಗಿ, ಅಟ್ಟು ದನಕರ ಹಿಡದಾರ ಗುತ್ತಿಗಿಗಿ
ವ್ಯಾಪಾರ ಇದ್ದೀದ್ದಿಲ್ಲ ಕತ್ತಿ ಕುದರೀಗಿ
ಒಯಿದ ಜೀವದರಿಸಿಲೆ ಕೊಯ್ದಾರ ಕುತ್ತಿಗಿ
ಶಿವಾ ವ್ಯಾಳೆ ತಂದ ಆಗಿನ ಹೊತ್ತಿಗಿ ॥

ಎಂಟ ಎತ್ತಿನ ಹೊಯ್ತ ದಾವಣಿ —ಕೂಡನುಡಿ—
ಆದಿತ್ತ ಭಾಳ ದೇಣಿ
ಬಿಟ್ಟೇವ ಅದರ ಹೊಣಿ
ಕೊಟ್ಟೇವ ಬಲ್ಲಾಂಗ ಇದು ಬರುವ ಕಾರಣ ಏನ
ಪಾಪ ಹೆಚ್ಚಾತು ನಾಡಾಗ ॥ —೨—

ಬಡವ ಮಂದಿದು ತುಂಬಲಿಲ್ಲ ಹೊಟ್ಟಿ
ನಡದಾರ ಗುಳೆ ಕಟ್ಟಿ ಕೌದಿ ರಗಟಿ
ಹಾಕ್ಯಾರ ಮೂಲ್ಯಾಗ ಒಳ್ಳ ಓನಕಿ ಬೀಸೂಕಲ್ಲ ಮುಚ್ಚಿ

ಇಟ್ರ ಮನಿಯಾಗ ಸೇರವಲ್ರು ಒಬ್ಬರಕೊಬ್ಬರ
ತಾಯಿ–ತಂದಿಗಿ ಬಿಟ್ರ
ಹೆಂಡರ ಮಂಗ್ಯಾನಂಗ ಆಚಾರ ವಿಚಾರ
ತಪ್ಪಿ ಕೆಟ್ಟ ಹೋದಾರ ಜಾತ್ಯಾಗ ಅಂತಾರ
ಜೀವಾ ಬದಕಲಿ ಹೊಲ್ಯಾರ ಮಾದರಲ್ಲಿ ದುಡದೇವು
ಬೇಕಾದಲ್ಲಿ ತೊತ್ತಿನ ಹಂಗೆ
ಅನ್ನ ಇದ್ದಂವ ಅರಸ
ಇದ್ದೀವ ಅವರ ಮನಿಯಾಗ
ಇದ್ದವಳು ಹಿಡಿದಾವಣಿ
ಕೊಡತಾಳ ದೇವರಾಣಿ
ಬಡಕೊಂಡ್ರು ಹಣಿ ಹಣಿ
ಮಾಡೂನು ಇನ್ನ ಹ್ಯಾಂಗ
ಫಲ್ಲಿ ಹೊಟ್ಟ ತಿಂದು ಹೊಟ್ಟಿ
ಭಗಾ ಭಗಾ ಅಂತಾದ ಒಳಗ ॥

–ಚಾಲ–

ತೆವಿ ತಾಬಂಡಿ ಭಗೋಣಿ
ಹಚ್ಯಾರ ಗಿರಾಕಿ ಯಾರು ಕೇಳವಲ್ರು
ಇದ್ದುಳ್ಳವರು ಬಲು ಬೆರಕಿ
ಕಂಠ ಎತ್ತಿನ ಗಂಟಿ ಸರಪಳಿ
ಮೂರು ಹೆಣಕಿ ಜಗಲಿ ಮ್ಯಾಲಿನ
ದೇವರಿಗೆ ಬಂತು ದುಡ್ಡಕಮ್ಮ ಟೆಂಗ
ಕಬ್ಬಿಣ ಕುಡಗೋಲ ಹಡ್ಡುವ ಸಲಕಿ
ಇದು ಒಂದೂ ಉಳಿಯದ, ಮುಂದೆ
ಮಾಡಿಸೋನು ಅಂತಾರ ಬದುಕಿ ॥

–ಕೂಡನುಡಿ–

ಇಪ್ಪತ್ತು ವರ್ಷ ಗಳಿಸಿದ್ದು
ವರ್ಷದೊಳಗೆ ಹೊಯ್ತು ಎಲ್ಲ
ಉಳಿದ ಇಷ್ಟು ತಿಂದು
ಹೊಟ್ಟೆ ತುಂಬುವಲ್ದು ದಿನಾ
ಅರೆ ಹೊಟ್ಟಿಲೆ ಏಳುವುದು
ಎದೆಗೂಡಗಟ್ಟಿ ಎಲುಬು ತೆರೆದ
ಬೆನ್ನ ಬಗಲಿಸತೈತಿ ಮನಸ್ಯಾಂದು
ರಾಗಿ ರೊಟ್ಟಿ ಹುರಳಿ ಅಂಬಲಿ ತಾಟ ಹೊಟ್ಯಾಗ
ಇನ್ನೀಟ ಬೇಡಿದರ ಇನ್ನೊಂದಿಷ್ಟ ಇಲ್ಲ ಮನಿಯಾಗ
ಇದು ಬರುವ ಕಾರಣ ಪಾಪ ಹೆಚ್ಚಾತ ನಾಡಾಗ ॥ –೩–

ನಮ್ಮನ ಹಿಡಿದ ಇಂಗ್ರಜಿ ಬಹಾದ್ದೂರ ದಯಾಳ
ಸರಕಾರ ಬಡವಗ ಆಧಾರ ನೋಡಿದರಾಗ
ಬಡವ ಮಂದಿನ ಬದುಕು ಹೊರಗ ತಗದಾರ
ಬಲ್ಲಾಂಗ ಆಗಿ ಮಾಡತಾರ ಯಂತ್ರ ಕಂಪನಿ ಸರಕಾರ
ತಿಳಿಸಿ ಮಜಕೂರ ಹೇಳಿದರಾಗ ಬೇಡಿದಷ್ಟು
ರೂಪಾಯಿ ಕೊಟ್ಟು ಖಳವಿದರಾ ಗಾಡಿಯ ವಳಗ
ಆಗ ಹಾಕಸ್ಯಾರ ಭಾವಿ,ಕೆರಿ,ತಳ ಕೂಡ್ಯೆತಿ ಮಂದಿ ಭಾಳ
ಇಂಜೆನ ಹಚ್ಚಿ ನಳಾ ತೆಗೆದು ನೀರ ಹೊರಗ
ಆ ಸೂತ್ರ ನೋಡಿ ವಿಚಿತ್ರ ಆದೇವು ಮನದಾಗ
ಆಗ್ಗನಗಾಡಿ (ರೇಲ್ವೆ)ಹೋಗುವದು ಧಡ ಧಡಕ
ಒಗಸ್ಯಾರ ಸಡಕ ಮಂದಿ ಧಮ ಧಡಕ
ಹೇರಿದ ಮ್ಯಾಗ ಗುದ್ದಲಿ, ಸಲಕಿ, ಬುಟ್ಟಿ,
ಬಂದ ಬಿದ್ದಾವ ಸ್ಟೇಶನದಾಗ ॥

ಹೆಸರ ಕೇಳಕೊಂಡು ಬರಕೊಂಡು —ಚಾಲ—
ಮಾಡುವರು ಗಣಿತ
ಮುಕಾದಮ ಕೈಕೆಳಗ ಮಂದಿ ಐವತ್ತು ಕಾರಕೂನ
ಹಾಜರಿ ತೊಗೊಳಾಂವ ನಿತ್ಯ ಎರಡು ಹೊತ್ತ
ಹಜರಿ ತಪ್ಪಿದರ ಪಗಾರ ಮುಳಗುವದು
ಅಲಬತ್ತ ಮೇಸ್ತ್ರಿ ಕ್ರಿಶರ್ ಕೆಲಸದ ಮ್ಯಾಗ
ತಾಸ ಹೊತ್ತ ಸರದಿತ ಸರವರಿಗೆಲ್ಲ
ಸಮಾನ ನೆದರ ಸುತ್ತ ಮುತ್ತ ॥

ಬಿತ್ತು ಬೀಜ ಎತ್ತಿ ಕೊಟ್ಟಾರ
ದಾನ ಧರ್ಮ ತಗಾಯಿ ತಯಾರ
ಸೀರಿ ಕುಪ್ಪಸ ಬಡವಗ ಧೋತರ
ಸಂರಕ್ಷಣ ಮಾಡಿ ಸಲವಿದರ ಹಿಂಗ
ಆಯಿತ ಬರದ ಮಜಕೂರ ಇದು
ಧುರ್ಮತಿ ನಾಮ ಸಂವತ್ಸರ
ರಹವಾಸ ಸಂಖದ ಊರ ಅಲ್ಲಿ
ನೆಲಸ್ಯಾನ ಭುಜರಿಕ ಪೀರ
ತಾತ್ಯಾ ಬಾಪು ಹೇಳ್ಯಾರ ಹಿಂಗ ಅಂತ
ಕೇಳ್ರಿ ನೀವು ಕೂತ ಖರೆ ಆದ ಮಾತ
ತಪ್ಪಿಲ್ಲ ಇದರಾಗ
ಇದು ಬರುವ ಕಾರಣ ಪಾಪ ಹೆಚ್ಚಾತ ನಾಡಾಗ ॥ —೪—

****

೧೧. ಕುಟಾಳ ಮಂದಿ

ಕುಟಾಳ ಮಂದಿದು ಕಿಟಾಳ ಭಾಳ
ವಟೋಳಿ ಮಾಡು ಉದ್ಯೋಗ ಭಾಳ
ಕೆಟಕಲಿ ಕರ್ಮ ಓಣ್ಯಾಗ ವರ್ಮ
ಸುಳ್ಳ ಸಾಕ್ಷಿ ಈಗ ಹೇಳಾವ್ರು ಭಾಳ ॥

ಮಾತು ಮಾತಿಗಿ ತಗಲ ಆಡಾವ್ರು ಭಾಳ
ಘಳಿಗ್ಯಾಗ ಘಾತಪಾತ ಮಾಡಾವ್ರು ಭಾಳ
ಇಮಾನಿಯಾಡಾವ್ರು ಇರಳಾ ಇರತಾರ
ಕೂಡಗೋಲಿಲ್ದೆ ಕೊರಳ ಕೊಯ್ಯವ್ರು ಭಾಳ ॥

ಉಂಡ ಜಾಗದಾಗ ಉಗಳವ್ರು ಭಾಳ
ಕಂಡ ಜಾಗದಾಗ ತಿರಗವ್ರು ಭಾಳ
ಅಣ್ಣ ತಂಗಿಯಂತ ಮ್ಯಾಲ ಮಾತಾಡತಾರ
ಒಳಗಿಂದೊಳಗೆ ಕಂತ್ರಾಟ ಮಾಡಾವ್ರು ಭಾಳ ॥

ಹೆಂಗಸರ ಮಾತಿಗಿ ಮೆಟ್ಟಾವ್ರು ಭಾಳ
ದಾವೆ ದಫ್ತರಿ ಮಾಡಾವ್ರು ಭಾಳ
ಹೊಡದ ಬಂಟರಲ್ಲ ಕಡದ ಬಂಟರಲ್ಲ
ಬಣವಿಗೆ ಬೆಂಕಿ ಹಚ್ಚಾವ್ರು ಭಾಳ ॥

ಹಳ್ಯಾಗ ತಳ್ಳಿ ಮಾಡವ್ರು ಭಾಳ
ಪ್ಯಾಟ್ಯಾಗ ಅರ್ಜಿ ಕೊಡವ್ರು ಭಾಳ
ದುಡ್ಡ ಇದ್ದಕಡಿ ಮಂದಿ ಹೇಳಾವ್ರು ಭಾಳ
ಉರದಮ್ಯಾಗ ಹುಲ್ಲ ಒಗ್ಯಾವ್ರು ಭಾಳ ॥ –೧–

ಭೂಮಿ ಸೀಮಿ ಹಿಡ್ಯಾವ್ರು ಭಾಳ
ಖಾತೇದ ಹೊಲಕ ಖರ್ಚ ಮಾಡಾವ್ರು ಭಾಳ
ಐಗಳ ಆಗು ಹೊಲಾ ಆರಗಳ ಆದ್ರ
ವರ್ಷಕ್ಕೊಮ್ಮೆ ಏರ ಚಡಾವ ಮಾಡಾವ್ರು ಭಾಳ ॥

ಕರಿ ಹೊಲಕ ಮೇಲ್ಪಟ್ಟಿ ಕೊಡಾವ್ರು ಭಾಳ
ಕೌಲ ಕರಾರ ಹಿಡ್ಯಾವ್ರು ಭಾಳ
ಬಂದಟ ಬದಕ ಮುಚ್ಚಿಟ್ಟ ಮನ್ಯಾಗ
ಹೊಟ್ಟಿ ತಾಪತ್ರ ಸೋಸಾವ್ರು ಭಾಳ ॥

ತಗಾಯಿ ರೂಪಾಯಿ ತಗ್ಯಾವ್ರು ಭಾಳ
ಎರಡ ದುಡ್ಡಿನಂಗ ಬಡ್ಡಿ ಹಚ್ಚಾವ್ರು ಭಾಳ
ಸಾಗಲಾರದಕ ಸಾಲಾ ತಂದ್ರ
ಬಡ್ಯಾಗ ಹೊಲಾನೆಲಾ ತಗೊಳವ್ರು ಭಾಳ ॥

ಲುಚ್ಚಾ ಲಬಾಡ ಮಂದಿ ಹಂಚೇಕಿ ಭಾಳ
ಮುದ್ದಲ ಗಂಟ ಮುಣಗಸೂದು ಭಾಳ
ಬೇಡ್ದಾಗಿನ ಮಾತ ಕೊಡಾಗಿರೂದಿಲ್ಲ
ಅದರಿಂದ ಸ್ಟಾಂಪ ಬರಸೂದು ಭಾಳ ॥

ಕಾಯ್ದೆದ ಬುಕ್ಕಾ ತರಸೂದು ಭಾಳ
ಕನ್ನಡ ಮರಾಠಿ ಬರಸೂದು ಭಾಳ
ಕೆಟ್ಟಕಲಿ ಕರ್ಮ ಓಣ್ಯಾಗ ವರ್ಮ
ಸುಳ್ಳ ಸಾಕ್ಷಿ ಈಗ ಹೇಳಾವ್ರು ಭಾಳ ॥ —೨—

ತಾಳ ಮೆಟಗಿ ಹಾಡಾವ್ರು ಭಾಳ
ಘನಸ್ವರ ಗಾಯನ ಮಾಡವ್ರು ಭಾಳ
ರಾಧಾನಾಟ ಮಾಡ್ಸವ್ರು ಭಾಳ
ಸಿನೇಮಾ ನಾಟಕ ನೋಡವ್ರು ಭಾಳ ॥

ಊರೂರಿಗೆ ಓಕಳಿ ಆಡ್ಸವ್ರು ಭಾಳ
ಜನಾ ನೆರಿಸಿ ಜಾತ್ರಿ ಮಾಡವ್ರು ಭಾಳ
ದುಡ್ಡಿನ ಥಂದ ಎಲ್ಲಾದರಿಂದ
ಖುಸಿಯಿಂದ ಕುಸ್ತಿ ಹಿಡ್ಯಾವ್ರು ಭಾಳ ॥

ವಾಯ ಗೆಟ್ಟ ವಾದಾ ಹಾಕವ್ರು ಭಾಳ
ಸ್ವಾಯ ಗೆಟ್ಟ ಜಗಳಾ ತಗ್ಯಾವ್ರು ಭಾಳ
ಹಾಡೂದು ಆಗುದಿಲ್ಲ ನೋಡೂದು ಆಗುದಿಲ್ಲ
ಹಿಂದ ನಿಂತ ಅಣಕಿಸಿ ಹೋಗಾವ್ರು ಭಾಳ ॥

ಸಿದ್ದನ ತಂಬಾಕ ಸೇದಾವ್ರು ಭಾಳ
ಸುಳ್ಳೆ ಶಿವನ ಧ್ಯಾನ ಮಾಡವ್ರು ಭಾಳ
ಸದ್ಗುಣ ಸಂಪೂರ್ಣ ಅವಗುಣ ಪತಿಪೂರ್ಣ
ಎರಡೂ ಇಟ್ಟು ಸಾಧೂರು ಆಗವ್ರು ಭಾಳ ॥

ಲೋಡ ಪಟ್ಟ ತಿರಗವ್ನ ಕಸಲತ್ತ ಭಾಳ
ಮಾಸ್ತರ ಮಂದೀದು ಮಸಲತ್ತ ಭಾಳ
ಕೆಟ್ಟಕಲಿ ಕರ್ಮ ಓಣ್ಯಾಗ ವರ್ಮ
ಸುಳ್ಳ ಸಾಕ್ಷಿ ಈಗ ಹೇಳಾವ್ರ ಭಾಳ ॥ —೩—

ವಿಲಾಯಿತಿ ವಿಸ್ತಾರ ಹೇಳಾವ್ರು ಭಾಳ
ಕಲ್ಕತ್ತಾ ಮುಂಬೈ ಕಂಡಾವ್ರು ಭಾಳ
ಕಾಶಿ ರಾಮೇಶ್ವರ ಕಾಲ ಹೊಳಿ ಮಾಡ್ಯಾರ
ಅಗ್ಗಾಡಿಯಿಂದ ಅಲ್ಲಿಗಿ ಹೋಗಾವ್ರು ಭಾಳ ॥

ಕಾಟಗಾಯಿ ಮಂದ್ಯಾಗ ಹುಡಗಾಟ ಭಾಳ
ಕೊರವರ ಮದುವ್ಯಾಗ ಬಡದಾಟ ಭಾಳ
ಕಂಚಗಾರ ಬೋಗಾರ ಚಿನಿವಾರ ಪತ್ತಾರ
ತೂಕಾ ಕೊಡುವಲ್ಲಿ ಶಾಣ್ಯಾರು ಭಾಳ ॥

ಧರ್ಮಕ ದೋಷಾ ಕೊಡಾವ್ರು ಭಾಳ
ಕರ್ಮಕ ಕಾಲಾ ಕೆದರವ್ರು ಭಾಳ
ಭಕ್ತಿ ಮಾಡದೆ ಮುಕ್ತಿ ಸಿಗುವದಿಲ್ಲ
ಯಮಪುರ ಪಟ್ಟಣಕ ಹೋಗವ್ರು ಭಾಳ ॥

ಸ್ವತಾ ಕಾರಭಾರ ಮಾಡಾವ್ರು ಭಾಳ
ಹಿರೇರ ಗೂಡ ಬ್ಯಾರಿ ಇರಾವ್ರು ಭಾಳ
ಸತ್ಯ ಮಾತ ನಾ ಸಾರಿ ಹೇಳತೀನಿ
ತಂದಿಗಿ ನಿಂದಾ ಆಡಾವ್ರು ಭಾಳ ॥

ಸಂಖದ ಊರ ಗುಜರಿ ಭಾಳ
ಸಾಯಬನ ಧ್ಯಾನ ಮಾಡಾವ್ರು ಭಾಳ
ಖರೇ ಇದ್ದಂಗ ನಾ ಖರೇ ಹೇಳತಿನಿ
ವರಿಗಿ ಹಚ್ಚಿ ಅಲ್ಲಿ ನೋಡವ್ರು ಭಾಳ ॥

ತಾತ್ಯಾ – ಬಾಪು ಪದ ಮಾಡೊದು ಭಾಳ
ಸಾಧೂರ ಮ್ಯಾಲ ಪ್ರೇಮಾನೆ ಭಾಳ
ಕೆಟ್ಟಕಲಿ ಕರ್ಮ ಓಣ್ಯಾಗ ವರ್ಮ
ಸುಳ್ಳ ಸಾಕ್ಷಿ ಈಗ ಹೇಳಾವ್ರು ಭಾಳ* ॥ –೪–

****

* ಈ ಹಾಡನ್ನು ದಿ!! ಕಲ್ಲಯ್ಯ ಶಾಸ್ತ್ರಿ ಸಂಖ ಇವರು ೨೦೦೦ನೇ ಇಸ್ವಿಯಲ್ಲಿ ಅಮೆರಿಕದ 'ಅಖಿಲ ರಾಷ್ಟ್ರಕೂಟ' ಸಮ್ಮೇಳನದಲ್ಲಿ ಹಾಡಿದಾಗ ಆ ಸಂಘದವರು ಅವರಿಗೆ "ಖ್ಯಾತ ಜಾನಪದ ರತ್ನ" ಎಂಬ ಬಿರುದನ್ನು ನೀಡಿ ಸನ್ಮಾನಿಸಿದ್ದರು ಎಂದು ನನ್ನ ಮುಂದೆ ಶಾಸ್ತ್ರೀ ಅವರು ಹೇಳಿದ್ದರು.

೧೨. ಗುರು ಸ್ತವನ

ಗುರುಗಳು ಇದ್ದಾರ ಇಲ್ಲಿ ಅಮೃತ ದೊರತಾದ
ಹೊಲಸ ಮನಸಿನಲ್ಲಿ ಇರುವ ಕಲ್ಮಶವನು ತೊಳಿಸಿ
ಆತ್ಮ ಶುದ್ಧಿ ಎಂಬ ಭಕ್ತಿಯ ಬೀಜವನ್ನೇ ಬೆಳೆಸಿ
ಯುಕ್ತಿಯಿಂದಲಿ ಮುಕ್ತಿಯ ಮಾರ್ಗಕೆ ಕಳಿಸುವಂಥಾ
ಗುರುಗಳು ಇದ್ದಾರ ಇಲ್ಲಿ ॥ –೧–

ಕಾಲ ಕಳದೇವಲ್ಲ
ಒಂದಿನ ಧ್ಯಾನ ಮಾಡಲಿಲ್ಲ
ಮರವಿನಲ್ಲಿ ಮನವು
ಇದಕೆ ನೀಡುವರು ಅರಿವು
ಗುರು ಬಸವನೇ ಕಾಯುವನೆಂದು
ಸೊಲ್ಲು ಸೊಲ್ಲಿಗೆ ಹೇಳುವಂಥಾ
ಗುರುಗಳು ಇದ್ದಾರ ಇಲ್ಲಿ ॥ –೨–

ವಿಧಿಯು ಕಾಡತ್ತೈತಿ
ಶಿವನ ನೆನೆದರೋಡತ್ತೈತಿ
ಮರತಿ ದಾನ ಧರ್ಮ
ಇದಕ ಕಾಡತ್ತೈತಿ ಕರ್ಮ
ಶಿವನಾಮ ಎಂಬ
ಐದಕ್ಷರ ಕೊಡುವಂಥಾ
ಗುರುಗಳು ಇದ್ದಾರ ಇಲ್ಲಿ ॥ –೩–

ಊರೊಳು ಊರ ಛಂದ
ನಮ್ಮ ಸಂಖದ ಊರ ಮುಂದ
ಭಾವನೆ ಬಲು ಛಂದ
ಭಕ್ತಿಗೆ ಸಂಖದ ಊರ ಮುಂದ
ಗುರುಗಳು ಇದ್ದಾರ ಇಲ್ಲಿ ॥ –೪–

****

ಪಾರಿಭಾಷಿಕ ಪದಕೋಶ

೧. ಗಣಪತಿ ಸ್ತೋತ್ರ

೧. ಗಣರಾಯ = ಗಣಪತಿ, ಗಜಾನನ
೨. ಭಜಿಸುವೆ = ಪ್ರಾರ್ಥಿಸುವೆ
೩. ಸಭಾದೊಳು = ಸಭೆಯೊಳಗೆ
೪. ಮೂಷಕ = ಇಲಿ
೫. ಸ್ತುತಿ = ಆರಾಧಿಸು, ಭಜಿಸು

೨. ಸಾಂಭ ಎರಡಕ್ಷರ

೧. ಸಾಂಭ = ಶಿವ, ಪರಮಾತ್ಮ
೨. ಬ್ಯಾರಿ = ಬೇರೆ
೩. ದೇಹ ಇಳಿತ = ಮುಪ್ಪು
೪. ಎಡವಿದ = ತಪ್ಪುಮಾಡಿದ
೫. ಬೆರಕಿ = ಚಾಲಾಕಿ
೬ ಹುಸ್ಯಾರಿಕಿ = ಜಾಣತನ, ಬುದ್ಧಿವಂತ
೭ ಕುಟಾಳ = ಕೆಟ್ಟ
೮. ಮನಾ = ಮನಸ್ಸು
೯. ಆಳಚ = ತಿಕ್ಕದಿಂದ
೧೦. ಘರ್ಜಿ = ದುಶ್ಚಟ
೧೧. ಧುಮ್‌ಧೂಸರಾಗಿ= ಗಪ್‌ಚುಪ್ ಇರುವುದು, ಗುಮ್ಮನ ಗುಸ್ಯಾ

೩.ಗುರು ಶಿಷ್ಯಾರ ಮಾತ

೧. ಬಿನಮೂಲ = ಕೆಲಸಕ್ಕ ಬಾರದೇ
೨. ಹೆಂಗಿರಬೇಕು = ಹೇಗೆ ಇರಬೇಕು
೩. ಹಂಗಿರಬೇಕು = ಹಾಗೆ ಇರಬೇಕು
೪. ಕಲಿ ಉಪರಾಟಿ = ಕಲಿಯುಗ ಬದಲಾಗಿದೆ
೫. ಕುಣುತಾದ = ಕುಣಿಯುತ್ತಿದೆ
೬ ಹಡ್ಡಿತಗದರ = ಅಗೆದು ನೋಡಿದರೆ
೭ ಹೊಂಡತೈತಿ = ಹೊರಡುತ್ತದೆ, ಸಿಗುತ್ತದೆ
೮. ಜಂಗ = ಆವೇಶ
೯. ಅಕಲ = ಬುದ್ಧಿ, ತಿರುಳು, ತಿಳವಳಿಕೆ

೧೦. ಹಚಗೊಡತಿ = ಕಳಿಸಿಕೊಡುತ್ತಿರಿ
೧೧. ದಿನಸಕ್ಕೆ = ಕೆಲಸಕ್ಕ
೧೨. ಬರ = ಬರಗಾಲ
೧೩. ಕಂದೂರಿ = ಮಾಂಸಾಹಾರದ ಪದಾರ್ಥದಿಂದ ನೈವೇಧ್ಯ ಹಿಡಿಯುವುದು
೧೪. ವಾರಕರಿ = ಪಂಢರಪೂರ ವಿಠ್ಠಲನ ಭಕ್ತರು
೧೫. ಬೆಸ್ತಾರಾ = ಗುರುವಾರ
೧೬. ಪರತ = ತಿರುಗಿ, ವಾಪಸ
೧೭. ಗ್ವಾಳೆ = ಸಂಗ್ರಹಿಸು, ಕೂಡಿಹಾಕು
೧೮. ದೇಣಿ = ಸಾಲ
೧೯. ಥ್ವಾಡೆ = ಸ್ವಲ್ಪ
೨೦. ಕೊರದ = ಗೆರೆಕೊಯ್ದು, ನಿಖರ
೨೧. ಮುಕಳಿ = ಕುಂಡಿ
೨೨. ಸಂಗಾಟ = ಜೊತೆಗೆ
೨೩. ಹೂನ್ನಾರ = ಮಸಲತ್ತ, ಮುಂದಾಲೋಚನೆ

೪. ಡೊಂಬರಾಟಿನಂಗ ಪ್ರಪಂಚದಾಟ

೧. ಹುದುಕಿನಲ್ಲಿ ಹುಟ್ಟಿ= ಗರ್ಭದಲ್ಲಿ ಜನಿಸಿ
೨. ಭಿಕ್ಕಿ = ಭಿಕ್ಷೆ
೩. ದೌಳವ = ಇದ್ದುಳ್ಳವರು, ಅದೃಷ್ಟವಂತರು, ಸಿರಿವಂತರು
೪. ಜಿನಗಾನಿ = ಸಂಪತ್ತು
೫. ಮಟ್ಟಿ ಎತ್ತಿನಂಗ = ಏತ ಹೊಡೆಯುವ ಎತ್ತಿನ ಹಾಗೆ
೬ ಗೊತ್ತಿ = ಕಷ್ಟ, ತ್ರಾಸ
೭ ಉಡಾಳ = ಮೈಗಳ್ಳ, ಸೋಮಾರಿ
೮. ಅಚೂತ = ಅಸ್ಪೃಶ್ಯ

೫. ಕನಸೊಂದ ಬಿತ್ತ ಅದರ ಹಾರಗೆಡಲಿ

೧. ಹಾರಗೆಡಲಿ = ಹಾಳಾಗಲಿ
೨. ಕಂಡಂಗಾತ = ಕಂಡಂತೆ ಆಯಿತು
೩. ಬಂದಂಗಾತ = ಬಂದಂತೆ ಆಯಿತು
೪. ತಂದಂಗಾತ = ತಂದಂತೆ ಆಯಿತು
೫. ಉಂಡಂಗಾತ = ಉಂಡಂತೆ ಆಯಿತು
೬ ನಡುವಿನಂಕಣದಾಗ= ನಡುಮನೆಯಲ್ಲಿ
೭ ಮಸ್ತ = ಭಲೋ, ಒಳ್ಳೆಯದು

೮. ಸ್ವಸ್ತ = ಅರಾಮದಿಂದ
೯. ಲಗೂ = ಬೇಗ
೧೦. ಖೋಡಿ = ದರಿದ್ರ, ಮೋಸ
೧೧. ಮಾರಿ = ಮುಖ
೧೨. ಖಬರಗೆಟ್ಟ = ಅರಿವಿಲ್ಲದವ, ಸ್ವಾದಗೇಡಿ
೧೩. ಗುಲ್ಲಅಂತಾರ = ಪುಕಾರ, ಗಾಳಿಸುದ್ದಿ, ಅವಾಜ್, ಸಪ್ಪಳ
೧೪. ವರದಿ = ಮಾಹಿತಿ, ವಿವರ, ಸುದ್ದಿ
೧೫. ಧಗಿ = ಗದ್ದಲ
೧೬. ಮೂಳಾ = ನಾಚಿಕೆಬಿಟ್ಟವನು
೧೭. ಹಾಂಟ = ಹೊಲಸು ಬೈಗುಳ
೧೮. ಲಂಡ್ಯಾನಹರಿಗಿ = ಗುಡ್ಡದ ಕೊರಲು
೧೯. ಹೆಡಗಿ = ಬುಟ್ಟಿ
೨೦. ಸುಗಜಾಣ = ಅತೀ ಬುದ್ದಿವಂತ
೨೧. ಬಂಡಲತನ = ಸುಳ್ಳು ಮಾತುಗಳು
೨೨. ಹೊರಕಡಿಗೆ = ಬಹಿರ್ದೆಸೆಗೆ
೨೩. ಮಾನಗೇಡಿ = ಮರ್ಯಾದೆ ಇಲ್ಲದವನು
೨೪. ಮಳ್ಳ = ತಿಳುವಳಿಕೆ ಇಲ್ಲದವ, ಅರಿವು ಇಲ್ಲದವ
೨೫. ಅಟ್ಟೇಚಾಳಿಸ = ನಲವತ್ತೆಂಟು
೨೬. ಗುನ್ನಾ = ಗುನ್ನೇಗಾರ, ತಪ್ಪಿತಸ್ಥ
೨೭. ಆಕ್ಕಿತ್ತ = ಆಗತಿತ್ತು
೨೮. ಹೊಯಿಮಲ್ಲಿ = ಸೋಗಲಾಡಿ, ವೈಯಾರಿ

೬. ಈಗಿನ ಮನದಾನ ಮಾತ

೧. ನಿರಂಬಳಾದ = ನಿಶ್ಚಿಂತನಾದ
೨. ಹ್ವಾರೆ = ಕೆಲಸ
೩. ಬೇತಾ = ಹಂಚಿಕೆ, ಸಂಚು
೪. ಕುಪೇಂದ್ರ = ಅಗರ್ಭಶ್ರೀಮಂತ
೫. ದುಸ್ಕಾಲ = ಬರಗಾಲ
೬ ದೇಣಿ = ಬಾಕಿ
೭ ಹೂಂಟ್ಯಾಗ = ಸರಿದಾರಿ
೮. ವಾರಿ ಆಗತಾರಲ್ಲ = ನುಣುಚುವುದು, ತಪ್ಪಿಸಿಕೊಳ್ಳುವುದು
೯. ಭಮಟ್ಯಾರ = ವಲಸೆ, ದೂರಹೋಗಿದ್ದಾರೆ
೧೦. ಒಣಡೌಲ = ಖಾಲಿ ಸೋಗ, ಧೀಮಾಕ
೧೧. ಮಳ್ಳ = ದಡ್ಡ

೧೨.	ಸೋಯಿ	=	ಸಸ್ತಾ, ಕಡಿಮೆ ಬೆಲೆ
೧೩.	ತಗಲಬಾಜಿ	=	ಕುತಂತ್ರಿ
೧೪.	ಅಕಲ	=	ಬುದ್ಧಿಯಿಲ್ಲ
೧೫.	ದಕಲ	=	ಕೆಲಸವಿಲ್ಲದ
೧೬.	ಹಕ್ಕಲ	=	ಖಾಲಿ
೧೭.	ಜನ್ಮಠೇಪ	=	ಜೀವಾವಧಿ ಶಿಕ್ಷೆ
೧೮.	ಒಳಬೇತಾ	=	ಮರ್ಮ
೧೯.	ತಿಪಲ	=	ವಿಚಾರ, ಪ್ಲಾನ್
೨೦.	ಅಡವಿಬಿದ್ದ	=	ಅಡ್ಡದಾರಿ
೨೧.	ಢೋಂಗ	=	ಢೋಂಗಿ, ನಕರಾ
೨೨.	ಮಾಂಜ್ರಪಾಟ	=	ದಪ್ಪಗಿರುವ ಹತ್ತಿ ಬಟ್ಟೆ, ತಿಳುವಾದ ಗಿರಣಿಯ(ಹತ್ತಿ) ಬಿಳಿ ಬಟ್ಟೆ
೨೩.	ಚಾರಾಣೆ	=	ಇಪ್ಪತ್ತೈದು ಪೈಸೆ, ನಾಲ್ಕಾಣೆ
೨೪.	ಕಸಬಕ	=	ಕೆಲಸಕ್ಕ
೨೫.	ಒಂದದುಗುಲ	=	ಒಂದುದುಡ್ಡು
೨೬.	ಬದಕ	=	ಸಂಪತ್ತು, ಜಿನಗಾನಿ, ಆಸ್ತಿ

೭. ಛಣಕ ಫಣಕ ಏನ ಕನಕ ಕಾಲುಂಗರ

೧.	ಹೌಸ್ರ	=	ನೋಡಲು ಖುಷಿ, ಆನಂದ
೨.	ಮಾರಿ ಕಳಿ	=	ಮುಖದ ರೂಪ, ತೇಜ, ಸುಂದರ
೩.	ನರ್ತ	=	ನರ್ತನೆ, ನೃತ್ಯ
೪.	ಜರ್ತ	=	ವೈಯ್ಯಾರ
೫.	ಯಮಕ ಚಮಕ	=	ಗತ್ತು, ಬಿನ್ನಾಣ
೬	ಹರೇಭಾರ	=	ಯೌವನಾವಸ್ಥೆ
೭	ಛಣಕ ಫಣಕ	=	ಕಾಲ್ಗೆಜ್ಜೆ ಸರದ ನಾದ
೮.	ಕನಕ	=	ಬಂಗಾರ
೯.	ಧಾವಿಸಿ	=	ಮನಸಾರೆ, ಇಚ್ಛೆಯಿಂದ
೧೦.	ವಾಲಿ	=	ಓಲೆ
೧೧.	ಡಾಬ	=	ಹೆಂಗಸರ ನಡುಪಟ್ಟಿ
೧೨.	ಬಾಜುಬಂಧ	=	ಹೆಂಗಸರ ತೋಳಿಗೆ ಹಾಕುವ ಆಭರಣ, ತೋಳಬಂದಿ
೧೩.	ಹರ್ಪ ದರ್ಪ	=	ಬಿಂಕ, ಬಿಗುಮಾನ
೧೪.	ಕೂಳ್ನೀರ	=	ಅನ್ನನೀರು
೧೫.	ಸನೆ	=	ಸಮೀಪ, ಹತ್ತಿರ

೧೬. ಗುಲ್ಲಾ = ಗಲಾಟೆ, ಪೂಕಾರ
೧೭. ವಾಂಡ ಗಂಡಸ= ಹಠಮಾರಿ, ಮೊಂಡ ಗಂಡಸು
೧೮. ಘಟಿಂಗತನ = ಮೋಸತನ, ಉಡಾಳತನ
೧೯. ದಗದ = ಕೆಲಸ
೨೦. ಬೆತ = ಒಳ ವಿಚಾರ
೨೧. ಖೂನ = ಗುರುತು, ಪರಿಚಯ
೨೨. ಹಮ್ಮ = ಧಿಮಾಕು, ದರ್ಪ
೨೩. ದಾಗಿನಾ = ಆಭರಣ
೨೪. ಠಿಕಾಣಾ = ಜಾಗ, ಸ್ಥಳ
೨೫. ಸುರ್ತಿ = ಸ್ಮೃತಿ, ಎಚ್ಚರ
೨೬. ಅಬ್ರು = ಮರ್ಯಾದಿ
೨೭. ಗಬ್ರು = ಗಂಡಸ
೨೮. ಸೇವಟಿಗಿ = ಕೊನೆಗೆ
೨೯. ಸೊಂಗ = ಸೋಗ, ವೇಷ
೩೦. ಢೋಂಗಮಾಡಿ= ಢೋಂಗಿತನ

೮. ನೆಡತನ ಕೂಡಿದಲ್ಲಿ

೧. ನೆಡತನ = ಬೀಗತನ, ನೆಂಟಸ್ತಿಕೆ
೨. ಧಡತನ = ಗೈರತನ
೩. ಕುಭಾಂವ = ನೀಚ
೪. ಕಪಟಿ = ಕುಹಿಕಿ
೫. ಹಂಬಲಿಟ್ಟ = ಹಂಬಲದಿಂದ
೬ ಬಿಕ್ಕೊಂಡು = ಬಿಗುವಿನಿಂದ
೭ ಧ್ಯಾಸತನ = ನೆನಪಿಟ್ಟುಕೊಳ್ಳು
೮. ಗಯ್ಯಾಳಿ = ದುಷ್ಟಸ್ವಭಾವದ ಹೆಂಗಸು
೯. ಪುಂಡ = ಬಂಡ, ಸೋಟ
೧೦. ಅನೀತಿ = ಕೆಟ್ಟ ದಾರಿ
೧೧. ಗೆಣತಾನ = ಗೆಳತನ
೧೨. ಧವತಿ = ಕೆಲಸ ಮಾಡುವುದು
೧೩. ಮಮತಿ = ಪ್ರೀತಿ, ವಾತ್ಸಲ್ಯ
೧೪. ಹೆಗ್ಗಳ = ಮೈಗಳ್ಳ, ಮುಗ್ಗಲಗೇಡಿ
೧೫. ಅಡ್ನಾಡಿ = ಹುಂಬ, ಒರಟ
೧೬. ಸಿಂತರ = ಕ್ಷುಲ್ಲಕ, ಸಣ್ಣತನ

೯. ಮೂಡಂಗ ಮಾಡಿದರ

೧. ಕೀಲಾ = ವಿಚಾರ
೨. ಹೈರಾಣ = ಸುಸ್ತು
೩. ಸಾಂಭನಿಗ್ಯಾಕ = ಶಿವನಿಗೆ ಏಕೆ
೪. ತರಕೀಲೆ = ಮರೆಯದೆ, ತಪ್ಪದೆ
೫. ಹಣಿವಳಗ = ಹಣೆಬರದಲ್ಲಿ
೬. ಬೋಧ = ಬುದ್ಧಿ ಹೇಳುವುದು
೭. ನರನಿಗಿ = ನರಮನುಷ್ಯನಿಗೆ
೮. ಬ್ಯಾಗದಿಂದ = ಅವಸರದಿಂದ

೧೦. ಕರಿ ಬರದ ಲಾವಣಿ

೧. ಮ್ಯಾಗ ಮ್ಯಾಗ = ಮೇಲಿಂದ ಮೇಲೆ
೨. ನಾಡಾಗ = ನಾಡಿನಲ್ಲಿ, ನಾಡೊಳಗೆ
೩. ಕರಿಬರ = ಭೀಕರ ಬರಗಾಲ
೪. ಜಡಾ = ದುಸ್ತರ, ತ್ರಾಸ
೫. ಪಲ್ಲಿ = ಶೇಂಗಾ
೬. ಅಡಿಚಶೇರ = ಎರಡೂವರೆಶೇರ
೭. ಸುಡಗಿ = ಸಸ್ತಾ, ಸೋಯಿ
೮. ಮಲ್ಲಾಡ = ಮಲೆನಾಡು
೯. ಪಾಡ = ಛಲೋ, ಒಳ್ಳೆಯದು
೧೦. ಹೆಬಟಿ = ಗಿಡಗಳ ತೊಗಟೆ, ಚರ್ಮ, ಸಿಪ್ಪೆ
೧೧. ಗಿಡಗಬಟಿ = ಗಿಡಗಂಟೆಗಳು
೧೨. ದವಡ = ಬೇಗನೆ
೧೩. ಗಡಾಮುಡಿ = ಅವಸರ
೧೪. ಬಬಲಿ = ಜಾಲಿಗಿಡ
೧೫. ನಿಂತ್ರಾಟಿಗೆ = ನಿಂತಕೂಡಲೇ
೧೬. ದಾವಣಿ = ಎತ್ತುಗಳನ್ನು ಕಟ್ಟುವ ಹಗ್ಗ
೧೭. ಖಳವಿದರಾ = ಕಳಿಸಿದರು
೧೮. ಅಗ್ಗಾಡಿ = ಉಗಿಬಂಡಿ
೧೯. ಮುಕಾದಮ = ಕೆಲಸ ಮಾಡಿಸುವ ಮುಖ್ಯಸ್ಥ, ಗ್ಯಾಂಗಮನ್
೨೦. ತಗಾಯಿ = ಸರಕಾರಿ ಸಾಲ
೨೧. ಚೌಲ = ಎರಡಾಣೆ
೨೨. ಪಾವಲಿ = ನಾಲ್ಕಾಣೆ
೨೩. ದೇಣಿ = ಸಾಲ

೨೪. ಫಲ್ಲಿ ಹೊಟ್ಟ = ಶೆಂಗಾದ ಹೊಟ್ಟ
೨೫. ತಾಬಂಡಿ = ಹಿತ್ತಾಳೆ ತಟ್ಟೆ
೨೬. ಅಲಬತ್ತ = ಜರೂರ, ಬೇಗನೆ

೧೧. ಕುಟಾಳ ಮಂದಿ

೧. ಕುಟಾಳ = ಕಿಡಗೇಡಿ, ದುಷ್ಟ
೨. ಕಿಟಾಳ = ಚಾಡಿತನ, ಬೆಂಕಿ ಹಚ್ಚುವರು
೩. ವಟೋಳಿ = ಕೆಟ್ಟ ಕೆಲಸ
೪. ಕೆಟಕಲಿ = ಕೆಟ್ಟಕಾಲ
೫. ತಗಲ = ಸುಳ್ಳ, ಖೊಟ್ಟಿ ಹೇಳವ್ರು
೬. ಇಮಾನಿ = ಸತ್ಯ, ಖರೆ
೭. ಕಂತ್ರಾಟ = ತಗಲಬಾಜಿ, ಮೋಸ
೮. ಮೆಟ್ಟಾವ್ರು = ತೊಂದರೆ ಕೊಡುವರು
೯. ದಾವೆದಪ್ತರಿ = ನ್ಯಾಯ, ಪತ್ರವ್ಯವಹಾರ
೧೦. ತಳ್ಳಿ = ಕಡ್ಡಿ ಮಾಡುವುದು
೧೧. ಬಂದಟ ಬದಕ = ದೊರೆತಷ್ಟು ಜೀವನ
೧೨. ಲಬಾಡ = ಸುಳ್ಳ
೧೩. ಮುದ್ದಲ = ಮೊದಲಿನ
೧೪. ಸಿದ್ದನ ತಂಬಾಕ = ಗಾಂಜಾ ತಂಬಾಕ

೧೨. ಗುರು ಸ್ತವನ

೧. ದೊರತಾದ = ದೊರೆತಿದೆ, ಸಿಕ್ಕಿದೆ
೨. ಕಲ್ಮಶ = ನಿಷ್ಕಳಂಕ, ನಿರ್ಮಲ
೩. ಒಂದಿನ = ಒಂದು ದಿನ
೪. ಮರವಿನಲ್ಲಿ = ಮರೆತು, ಗೊತ್ತಿಲ್ಲದಂತೆ
೫. ಸೊಲ್ಲು = ಆರಂಭ
೬. ಕಾಡತೈತಿ = ಕಾಡುತ್ತಿದೆ
೭. ಛಂದ = ಸುಂದರ

****

ಅನುಬಂಧ

೧. ಬಾಲ ಹನುಮನೋ

ಬಾಲ ಹನುಮನೋ ನಮ್ಮ ಬಾಲ ಹನುಮನೋ
ಬಾಲ ಭುಜದ ಮ್ಯಾಲ ಗಿಳಿರಾಮನೋ ॥ —ಪ—

ಬಾಲ ಹನುಮ ಏನ ದಿಟ್ಟ
ರಾವಣೇಶ್ವರನ ಲಂಕಾ ಸುಟ್ಟ
ಸೀತಾನ ನೋದ ತಗದ ಬಿಟ್ಟ
ತೆಲಿಮ್ಯಾಲ ಮಳಾ ಜುಟ್ಟ
ಲಂಕಾಕ ಜಿಗದ ಬಿಟ್ಟ
ಬಾಲ ಹನುಮನೋ ॥ —೧—

ಲಂಕಾಧೀಶ ರಾವಣ
ಅವನ ತಮ್ಮ ಕುಂಭಕರ್ಣ
ಮತ್ತೊಬ್ಬ ವಿಭೀಷಣ
ರಘುನಾಥ ಲಕ್ಷ್ಮಣ
ಹಿಡದಾರ ಬಿಲ್ಲ ಬಾಣ
ದಂಡಿನೊಳಗ ಹನುಮಾನ
ಮಾಡ್ಯಾರ ಉಡ್ಡಾಣ
ಬಾಲ ಹನುಮನೋ ॥ —೨—

ರಾಮ ನಾಮ ಒಳೆಯುಕ್ತಿ
ಪ್ರೇಮ ಭಾವ ನಿರ್ಮಳ ಭಕ್ತಿ
ರಾಮನಿಂದ ಝಳ ಝಳ ಮುಕ್ತಿ
ಎಕ್ಕಿ ಹೂವ ಸದಾ ಪ್ರೀತಿ
ಬಾಲಿನಲ್ಲಿ ಭಾಳ ಶಕ್ತಿ
ಬಾಲ ಹನುಮನೋ ॥ —೩—

ವಾರಕ್ಕೊಮ್ಮೆ ಶನಿವಾರ
ವಂದನ ಮಾಡೋ ಭಕ್ತಿಪುರ
ಗ್ರಹ ದೋಷ ಆತ ದೂರ
ಕಲ್ಲಸಕ್ರಿ ಶನಿವಾರ
ಬಂಗಾರದೆಳಿ ಜನಿವಾರ
ಆಂಜನೆಯಕುಮಾರ
ಬಾಲ ಹನುಮನೋ ॥ —೪—

****

೨. ಶ್ರೀಶೈಲ ಮಲ್ಲಿಕಾರ್ಜುನ

ಶಿವಶರಣರ ಸಂಗತಿ ಕಟ್ಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ
ಗುರು ಆಜ್ಞಾ ಹೊತ್ತು ಬಿಟ್ಟಿ
ಬಿಟ್ಟಿ ಧರ್ಮದಿಂದ ಕಂಡಿನೋ ಕಟ್ಟಿ
ಅಂದು ಅಜ್ಞಾನಿ ಎಂದು
ಕರೆದು ಮುಂದಕೆ ಎನ್ನ
ಹಸ್ತ ಮಸ್ತಕದ ಮೇಲಿಟ್ಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೧–

ಒಟ್ಟಿ ಮನ ಒಲ್ಲೆನಂತಿತ್ತು
ರಟ್ಟಿ ಹಿಡು ನೆಟ್ಟಾನ ದಾರೀಗಿತತ್ತು
ಅಮಲ ಆತುರನಾತೋ
ಶಿವಶರಣರ ಮನಿಯಾಗಿನ ದೆವ್ವ ಬಡಿತು
ಪರಿಹರ ಪರವುತ ಗಿರಿಯ ಎನ್ನೊಳಗಾಗಿ
ಸ್ಥಿರವಾಗಿ ನಿಂತು ಘಟ್ಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೨–

ಐವರು ಹೊಂಟಾರ ಕೂಡಿ
ಅವರೊಳು ಪಡದಯ್ಯ ಪರಮಾತ್ಮಾ ಜೋಡಿ
ನೂರಾರ ಕಂಬಿಯ ಕಾವಡಿ
ಕಲಬುರ್ಗಿ ಶರಣಪ್ಪನ ಜಾತ್ರಿ ಮಾಡಿ
ಚಿತ್ತ ಹೋತ ಚಿತ್ತಾಪೂರಕ
ದಂಡನ ದೇಹ ದಂಡವತ ಎಡಕ
ಗುರುಮಟಕಲ ನಾರಾಯಣ ಪ್ಯಾಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೩–

ಪುರ ಅಲ್ಲ ಅಲ್ಲಂಪ್ರಭುನಾ
ರುದ್ರಪಾದ ಬಾವಾನ ವಸ್ತಿಗಿ ಆತೋ ಬಿನ್ನ
ಭೀಮಕಾಗಿ ಮೋಸ ಕೃಷ್ಣ
ತೆಲಂಗಾಣ ತೆಳಗ ತುಂಗಭದ್ರಾ ಗಂಗಾನ ಸ್ನಾನ
ಸೂರ್ಯ ಅಸ್ತಮಾನಕ ಬಂತು
ಹಸ್ತು ಜಂಗಮರು ಕುಂತು

ಶರಣಂದೇ ಖಟಪಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೪–

ಆತಂಪೂರಕ ಆತ ಊರ
ಮುಂದೊಂದು ಹಾಳ ಐತಿ ಸಿದ್ದಾಪೂರ
ಓಂಕಾರ ಮಹಾನಂದೇಶ್ವರ
ಒಂದೇ ಗುಡ್ಡ ಅಗ್ನಿ ಕೋನೆಕೊ ದೂರ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೫–

ಕಡಿಬಾಗಿಲ ಕರವೀರಭದ್ರ
ಗಾಯಮುಖ ತೀರ್ಥ
ಗಿರಿ ಏರಿದರ ಹರಹರ
ಅಂಬಲಿ ಹಳ್ಳ ಗಂಗಾನ ಫಳಿ
ಭೀಮನ ಕೊಳ್ಳ ಮೆಲ್ಲಕ ಇಳಿ
ಮುಗ್ಗಿದರ ಮೂರಾಬಟ್ಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೬–

ಏರಿನ ಕೈಲಾಸ ದ್ವಾರ
ಜಂಗಮ ದಕ್ಷಿಣ ಶರಣಗ ಸಂಪತ್ತ ಪೂರಾ
ಅಡಕೇಶ್ವರ ಶಿಖರೇಶ್ವರ ಬಲಕ ನೋಡೊ
ಪಲ್ಲಾಧಾರಾ ಪಂದಾರಾ
ಕಂಡೇವ ಮಲ್ಲಯ್ಯನ ಶಿಖರ
ನಾಲ್ಕೂ ಬಾಗಿಲ ಗಗನಕೋದಂಥಾ ಗೋಪುರ
ಬ್ಯಾಳಿ ಬಸಪ್ಪ ಮಂಟಪ ಮದ್ಯೆ
ನಿತ್ಯ ನಿಜ ಧ್ಯಾನದಿಂದೆ
ಜ್ಯೋತಿರ್ಲಿಂಗಕ್ಕಿಟ್ಟಿನೋ ದೃಷ್ಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೭–

ಪಾತಾಳ ಗಂಗಮ್ಮನಲ್ಲಿ ಜಳಕೋ
ತೊಳದು ಸಂಶಯ ಬಳ ಹೊರಗಾದೀತೋ ಏಕ
ಮೂನ್ನೂರದ ಅರವತ್ತು ಮಠಕೋ
ತಿರಿಗಿ ಗುಪ್ತ ಕದಳಿ ಬನದೊಳು ಹೊಕ್ಕೊ
ಸಪ್ತ ಸಂಗಮ ಉತ್ತರಕೋ
ಮೂರು ಕೊಳ್ಳ ಮೂಲಂದು ತಿಳಿಯಬೇಕೋ
ನರರಿಗೆ ತೋರಿದ ಪರ ಶಿವ
ಧರ್ಮದಯಾ ಸಂಖಧಿಶಾನೇ ಹುಟ್ಟಿ
ಶ್ರೀಶೈಲ ಮಲ್ಲಿಕಾರ್ಜುನನ ಭೇಟಿ ॥ –೮–

****

೩. ಪಂಢರಪುರ ಯಾತ್ರಾ

ಜಾತರಿ ಮಾಡಿದೆನು ಜಗದೊಳು
ಕ್ಷೇತ್ರವ ನೋಡಿದೆನು
ಯಾತರ ಮಾಡಿದ ಆತುರದಿಂದಲಿ
ಪಾತಕವನು ನೀಗಿ ಪಂಢರಿಗೆ ಹೋಗಿ ನಾ
ಜಾತರಿ ಮಾಡಿದೆನು ॥ —೧—

ಸಂಕಲ್ಪ ಅಂಕಲಗಿ
ಮನಸಿನ ಸಂಸೆಗಳೆಲ್ಲಾ ನೀಗಿ
ಸುಂಕಿತ್ತ ಸೋನ್ಯಾಳ
ಕಡಿದು ಬಬಲಾದಿ ಶಿರನಾಲಿಗಿ
ಶಿವನ ಧ್ಯಾನವ ಮಾಡಾತ
ಜಾತರಿ ಮಾಡಿದೆನು ॥ —೨—

ಸಿದ್ಧನಕೇರಿಗೆ ಹೋಗಿ
ತಿಳಿದು ಬುದ್ಧಿ ಜ್ಞಾನವಾಗಿ
ಕದ್ದು ಮಾತನಲ್ಲ ಕಂಡಿನೋ ಹರನ
ಸುದ್ಧ ದಾರಿ ಸುಜನರೊಳು ಕಂಡಿನಾ
ಜಾತರಿ ಮಾಡಿದೇನು ॥ —೩—

ತಾಳ ಮದ್ದಲಿ ವೀಣಾ
ಗಗನದೊಳು ತುಂಬಿ ನಾದಾ
ಹರಿ ಹರಿ ಎನವುತ
ಹರುಷ ಆದಿತ ಮನಾ
ಹರಿ ದಾಸರ ಕತಿ ಕೀರ್ತನ ಕೇಳುತ
ಜಾತರಿ ಮಾಡಿದೆನು ॥ —೪—

ಜೆಂಡೆ ಪತಾಕಿಯ
ಪುಂಡಲೀಕ ಚಂದ್ರಭಾಗ
ಭಂಡಿಯ ಹಂಚಿಕಿ ನಾಲ್ಕೂವ ಕಂಬ
ಮೇಲೆ ಕಳಸ ಮೆರೆದಾಡುವ ತೇರಿನ
ಜಾತರಿ ಮಾಡಿದೆನು ॥ —೫—

ಆನಂದ ಅರುವುದಲ್ಲಿ
ಇನ್ನೊಂದು ಇರುವದು ಯಾವಲ್ಲಿ
ಆನಂದ ಸದ್ಗುರು ಧರ್ಮ ದಯಾಳನ
ಸಂಖಧೀಶಾನ ಸಾಧುನ ಬಲದಿಂದ
ಜಾತರಿ ಮಾಡಿದೆನು ॥ –೬–

****

೪. ಬಿಳ್ಳೂರ ಶ್ರೀಗುರು ಬಸವ

ಎಲ್ಲಿ ಅಡಗಿದಿ ಶ್ರೀಗುರು ಬಸವ ಬೇಗ ಬಾರೋ ಓಡುತ
ಹಳ್ಳಿ ಗ್ರಾಮದೊಳು ಜನಿಸಿ ಜತ್ತ ಬಿಳ್ಳೂರದೊಳು ಮೆರಿದಿ ॥ –ಪ–

ಜನ್ಮ ತಳಾ ಹಂಗರಗಿ! ಹುಟ್ಟಿ ಬಂದಿ ಉದ್ಧಾರಕ್ಕಾಗಿ
ಬಾಲ್ಯದಲ್ಲಿ ಬಡತನಕಾಡಿ! ಹೋಗಿ ನಿಂತಿ ಮಠ ಸಿಂದಗಿಗಿ ॥ –೧–

ಸಂಖ ಮಠಕ್ಕೆ ಹೋಗಿ ಕೃಷ್ಣನಾಗಿ ಆಕಳಕಾದಿ
ಕಾಲಿಗಿ ಜಂಗವ ಕಟ್ಟಿ ಸೈಪಾಕ ಭಿಕ್ಷವ ತಂದಿ ॥ –೨–

ಬ್ರಹ್ಮಚಾರ ಪಾಲನೆಗಾಗಿ ಘೋರ ಪ್ರತಿಜ್ಞಾ ಮಾಡಿ
ಬ್ರಹ್ಮಚಾರ ಪಾಲನೆಯಿಂದ ಭಕ್ತರಿಗೆಲ್ಲ ಉದ್ಧಾರ ಮಾಡಿ ॥ –೩–

ಬಿಳ್ಳೂರ ಗ್ರಾಮಕೆ ಬಂದು ಯೋಗಿ ಸ್ಥಾನವ ಕಂಡಿ
ಭವ್ಯ ದಿವ್ಯ ಅನ್ನುವಂಥ ಮಠವನ್ನು ಕಟ್ಟಸಿಕೊಂಡಿ ॥ –೪–

ಲಿಂಗ ಪೂಜೆಯ ಮಾಡಿ ಕಷ್ಟಗಳ ದೂರ ಬಿಟ್ಟು
ಅಗಾದ ಲೀಲೆಯ ಮಾಡಿ ಮಹಾಪುರುಷ ಅನಿಸಿಕೊಂಡಿ ॥ –೫–

ಧನ ಸಂಪತ್ತು ಹಣವನ್ನು ಲೇಖಿಯಂತೆ ಬರೆದು ಕೊಟ್ಟಿ
ಮಠದ ಅಧಿಕಾರವನ್ನೆಲ್ಲ ಚೆನ್ನಬಸಪ್ಪಗೆ ಒಪ್ಪಿಸಿ ಬಿಟ್ಟಿ ॥ –೬–

ಒಂದನೂರಾ ಹತ್ತೊಂಭತ್ತು ವರ್ಷ ಆಯುಷ್ಯ ಪಡೆದುಕೊಂಡಿ
ಬಾಲ ಬ್ರಹ್ಮಚಾರಿ ಎಂದು ಜಗದೊಳು ಅನಿಸಿಕೊಂಡಿ ॥ –೭–

ಒಂದು ಐದು ಮುವತ್ತಾರು ಗುರುವಾರ ಸ್ನಾನವ ಮಾಡಿ
ಲಿಂಗದೊಳು ಐಕ್ಯನಾಗಿ ಶಿವನ ಭವನ ಸೇರಿಕೊಂಡಿ ॥ –೮–

ಜನ ಜಾತ್ರಿ ವಾಡಿಯನ ಕಂಡೆ ಪಶುಪಕ್ಷಿ ಕಣ್ಣಾರ ತಂದೆ
ದೇಶ ದೇಶದ ಶರಣರು ಬಂದು ಬಾಜಾ ಭಜನಿ ನಿಮ್ಮ ಮುಂದೆ ॥ –೯–

ಹೊನ್ನಿನಂತೆ ಹೊಳಿತಿತ್ತ ಬಿಳ್ಳೂರ ಯೋಗಿಯ ಮಠಾರಿ
ಅಲ್ಲಿಸಾಬ ಹೇಳಿದ ಸಾರಿ ಭಕ್ತಿಯಿಂದ ಮಠಕನ ಸಿರಿ ॥ –೧೦–

****

೫. ಮೈ ಭೀ ಗಯಿತೇ ಬೇಪಾರಕು

ಮೈ ಭೀ ಗಯಿತೇ ಬೇಪಾರಕು
ಗೋಕುಲ ಬಜಾರ ಕೇ ಮಾ
ಧೈ ಧೋಹಂಡೆ ಭರಪೂರ
ಶಿರಪರ ಲಯಾತೀಗೇ ಮಾ
ಘರ ಘರ ಫಿರಕು ಬೇಪಾರ
ಮೈ ಕರತೀಗೆ ಮಾ
ಆಂಖೋ ಪಕಡೇ ರಸ್ತಾ
ಆಂಖೋ ಪಕಡೇ ರಸ್ತಾ
ಉಸಕೋ ಬೋಲುನ ಕೆತ್ತಾ
ನಹೀ ಸುನತ ಮೇರಾ ಬಾತಾ
ಭರ ಬಾಜಾರ ಮೇ ಆಂಖೋ
ಮಾಥೋ ಅಕಡ್ಯಾಗೇ ಮಾ
ದೋನೋ ಹಾತ ಸೇ ಹಾತ
ಮೇರಿ ಪಕಡ್ಯಾಗೇ ಮಾ
ಮೇರೆ ಲಾಲ ಸಾಡಿಕೋ
ಪಲ್ಲು ಫಾಡ್ಯಾಗೇ ಮಾ
ಮೇರಿ ಚೋ ಭಾರ ಸೇ
ಚೋಳಿ ಝುಟ್ಟೇಗೆ ಮಾ
ದಂಗಲ್ ಕರೆ ಹಂಡೆ
ಮೇರಿ ಫೋಡ್ಯಾಗೇ ಮಾ
ದಯ್ಯಾ ದೂದ ಸೂವ
ಮಟ್ಟಿ ಮಿಲ್ಯಾಗೇ ಮಾ
ಸುನೋ ಸಚ್ ಸಂಖಿವಾಲೇ
ಸುನೋ ಸಚ್ ಸಂಖಿವಾಲೇ
ಉಸಕೋ ಹೆಂವ್ ಕೆಂವ್ ಗಾಲೇ
ತಾತ್ಯಾ ಬಾಪುಕೆ ಖ್ಯಾಲೆ
ಮೈ ಭೀ ಗಯಿತೇ ಬೇಪಾರಕು ॥

****

ಪಾರಿಭಾಷಿಕ ಪದಕೋಶ

೧. ಮೈ ಭೀ = ನಾನು ಸಹ

೨. ಬೇಪಾರಕು= ವ್ಯಾಪಾರಕ್ಕೆ

೩. ಧೈ ದೂದ= ಮೊಸರು, ಹಾಲು

೪. ಫಿರಕು = ತಿರುಗಾಡಿ

೫. ಚೋಳಿ = ಕುಪ್ಪಸ

೬ ಝುಟ್ಟೇಗೆ = ಜಗ್ಗಿದ

೭ ದಂಗಲ್ = ದಂಗಾಮಾಡಿ

೮. ಫೋಡ್ಯಾಗೆ= ಒಡೆದನು

೬. ಪರಾಮರ್ಶನ ಗ್ರಂಥಗಳು

ಕನ್ನಡ ಗ್ರಂಥಗಳು :

೧. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ : 'ವಿಮರ್ಶೆ' ೧೯೫೪.

೨. ದೇವುಡು : ಕರ್ನಾಟಕ ಸಂಸ್ಕೃತಿ. ೧೯೬೧.

೩. ಡಾ. ಹಾ.ಮಾ. ನಾಯಕ : ಜಾನಪದ ಸ್ವರೂಪ. ೧೯೭೧.

೪. ಸಂ, ಕ್ಯಾತನಹಳ್ಳಿ ರಾಮಣ್ಣ : ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು. ಪ್ರಕಾಶಕರು: ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೭೨.

೫. ಡಾ. ಎಲ್. ಬಸವರಾಜು : ಕನ್ನಡ ಛಂದಸ್ಸು. ಗೀತಾ ಬುಕ್ ಹೌಸ್ ಮೈಸೂರು, ೧೯೭೪.

೬ ಸಿಂಪಿ ಲಿಂಗಣ್ಣ : ಉತ್ತರ ಕರ್ನಾಟಕದ ಜಾನಪದ ಗೀತೆಗಳು. ಐ.ಬಿ.ಎಚ್. ಪ್ರಕಾಶನ ಬೆಂಗಳೂರು, ೧೯೭೫.

೭ ಸಂ. ಡಾ. ಆರ್.ಸಿ.ಹಿರೇಮಠ : ಜಾನಪದ ಸಾಹಿತ್ಯದರ್ಶನ ಭಾಗ-೧, ಕನ್ನಡ ಅಧ್ಯಯನ ಪೀಠ. ಕ.ವಿ.ವಿ.ಧಾರವಾಡ. ೧೯೭೪.

೮. ಸಂ.ಡಾ.ಎಂ.ಎಸ್.ಸುಂಕಾಪುರ : ಜಾನಪದ ಸಾಹಿತ್ಯ ದರ್ಶನ ಭಾಗ-೪, ಪ್ರಕಾಶಕರು: ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ.ಧಾರವಾಡ. ೧೯೭೮.

೯. ಡಾ. ಜೀ.ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು. (ಪಿಎಚ್.ಡಿ ಮಹಾಪ್ರಬಂಧ) ಪ್ರಕಾಶಕರು: ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯.

೧೦. ಸಂ.ಡಾ.ಎಂ.ಎಸ್.ಸುಂಕಾಪುರ : ಜಾನಪದ ಸಾಹಿತ್ಯ ದರ್ಶನ ಭಾಗ-೫. ಪ್ರಕಾಶಕರು: ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ.ಧಾರವಾಡ. ೧೯೮೦.

೧೧. ಡಾ.ಎಂ.ಜಿ.ಬಿರಾದಾರ : ಜಾನಪದ ಸಮಾಲೋಚನೆ, ೧೯೮೧.

೧೨. ಡಾ.ನಂ. ತಪಸ್ವೀಕುಮಾರ್ : ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ, (ಪಿಎಚ್.ಡಿ ಮಹಾಪ್ರಬಂಧ) ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧.

೧೩. ಸಂ. ಸಿಂಪಿ ಲಿಂಗಣ್ಣ, ಪಿ.ಧೂಲಾ : *ಜೀವನ ಸಂಗೀತ.* ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ. ೧೯೮೧.

೧೪. ಡಾ. ದೇವೇಂದ್ರಕುಮಾರ ಹಕಾರಿ : *ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದು:ಖಾಂತ ನಿರೂಪಣೆ ಒಂದು ಸಾಂಸ್ಕೃತಿಕ ಅಧ್ಯಯನ.* (ಪಿಎಚ್.ಡಿ ಮಹಾಪ್ರಬಂಧ) ಪ್ರಕಾಶನ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೫.

೧೫. ಕ್ಯಾತನಹಳ್ಳಿ ರಾಮಣ್ಣ : *ಫ್ಲೀಟರು ಸಂಗ್ರಹಿಸಿದ ಲಾವಣಿಗಳು,* (ದ್ವಿತೀಯ ಮುದ್ರಣ) ಮೈಸೂರು ವಿಶ್ವವಿದ್ಯಾಲಯ ಮೈಸೂರು, (ದ್ವಿತೀಯ ಮುದ್ರಣ) ೧೯೯೧.

೧೬. ಡಾ. ಸಂಗಮೇಶ ಬಿರಾದಾರ : *ತೇರದಾಳ ಲಾವಣಿಕಾರರು,* ಪ್ರಕಾಶಕರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. ೧೯೯೫.

೧೭. ಡಾ.ಬಸವರಾಜ ಮಲಶೆಟ್ಟಿ : *ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ,* ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೧೮. ಡಾ. ಹರಿಲಾಲ ಪವಾರ : *ಜಾನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ,* ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೧೯. ಡಾ. ಹರಿಶ್ಚಂದ್ರ ದಿಗ್ಸಂಗಿಕರ್ : *ಲಾವಣಿ ಸವಾಲ್-ಜವಾಬ್ ಪದಗಳು,* ಪ್ರಕಾಶಕರು : ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫.

೨೦. ಡಾ. ಬಿ.ಎಸ್.ಕೋಟ್ಯಾಳ : *ಗೀ ಗೀ ಸಂಪ್ರದಾಯದ ಹರಿಕಾರ ಬೀ ಬೀ ಇಂಗಳಗಿ ಹಸನಸಾಹೇಬ,* ಪ್ರಕಾಶಕರು : ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ.ಧಾರವಾಡ. ೨೦೦೬.

೨೧. ಸಂ. ಡಾ.ಬಿ.ಬಿ.ಹೆಂಡಿ, ಡಾ. ಎಂ.ಜಿ. ಬಿರಾದಾರ, ಡಾ.ಎಂ.ಎಸ್.ಲಠ್ಠೆ : *ಹರದೇಶಿ-ನಾಗೇಶಿ,* ಪ್ರಕಾಶಕರು: ನಿರ್ದೇಶಕರು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. (ದ್ವಿತಿಯ ಮುದ್ರಣ) ೨೦೦೮.

ಮರಾಠಿ ಗ್ರಂಥಗಳು :

೨೨. ಸಂಗ್ರಹ. ಶಿಕ್ಷಕ : *ಪೊವಾಡೆ ಸಂಗ್ರಹ, ಮರಾಠೆ ಶಾಹೀಚೆ ಐತಿಹಾಸಿಕ ಪೊವಾಡೆ ಭಾಗ-೧* ಪ್ರಕಾಶಕರು. ಇಂದೋರ ಬುಕ್ ಡಿಪೋ, ತೋಪಖಾನಾ ಇಂದೂರ ೧೯೪೦.

೨೩. ಶ್ರೀ. ಮ.ವಾ. ಧೋಂಡ : *ಮರಾಟೀ ಲಾವಣೀ,* ಮೌಜ ಪ್ರಕಾಶನ, ಮುಂಬಯಿ, ಪ್ರಥಮ ಮುದ್ರಣ, ೧೯೫೬.

೨೪. ಗಂಗಾಧರ ಮೊರಜೆ : ಮರಾಠಿ ಲಾವಣಿ ವಾಙ್ಮಯ, ಮೊಘೆ ಪ್ರಕಾಶನ, ಕೊಲ್ಹಾಪುರ, ೧೯೭೪.

೨೫. ಪಾಡುರಂಗ ಲಕ್ಷ್ಮಣ ಜಯಿತಾಪಕರ : ತಮಾಶಾ ಕಲಾ ಅಂತರಂಗ ಆಣಿ ತರಂಗ, ಪ್ರಕಾಶಕ, ಮುಂಬಯಿ, ೧೯೮೬.

೨೬. ವಿಶ್ವನಾಥ ಶಿಂಧೆ : ಶಾಹರೀ ವಾಙ್ಮಯಚಾ ಧಾರಾ, ಪ್ರತೀಮಾ ಪ್ರಕಾಶನ, ಪುಣೆ, ೧೯೯೬.

೨೭. ಡಾ. ವಿಶ್ವನಾಥ ಶಿಂಧೆ : ಸಾವಳಜಕರಾಂಚಾ ತಮಾಶಾ ಇತಿಹಾಸ ಆಣಿ ವಾಙ್ಮಯ (ಉಮಾಜಿ ತಾತ್ಯಾ ವ ಶಂಕರ ಯಾಂಚ್ಯಾ ಲಾವಣ್ಯಾ, ವಗ) ಸಂಸ್ಕೃತಿ ಪ್ರಕಾಶನ, ಪುಣೆ. ೨೦೧೩.

ನಮ್ಮ ಪ್ರಕಟಣೆಗಳು

ಕ್ರ.ಸಂ.	ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು *ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧ *ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ *ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್ *ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು *ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು *ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭	ಕರ್ನಾಟಕ ಸಂಶೋಧನ ಜಾನಪದ *ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ *ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ *ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು *ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು ಡಾ. ಮಲ್ಲಿಕಾರ್ಜುನ ಕುಂಬಾರ	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು *ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ ಡಾ. ವೃಷಭಕುಮಾರ	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು ಶ್ವೇತಾ ಎಂ.ಬಿ.	೮೦.೦೦
೧೫.	ನೆಲದ ನೆನಪು *ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦
೧೬.	ನಮ್ಮ ಗಿಡಮರಬಳ್ಳಿಗಳು *ಶಾಂತಿ ನಾಯಕ*	೪೦.೦೦

೧೭. ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು
ಸಂ : ಪ್ರೊ. ಪ್ರಕಾಶ ಕಮ್ಮರಡಿ ೧೦೦.೦೦

೧೮. ಜಾನಪದ ವರ್ಷ–೨೦೧೨
ಸಂ : ಡಾ. ಕೆ.ವಿ. ಮುದ್ದವೀರಪ್ಪ ೧೨೦.೦೦

೧೯. ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೧೦೦೦.೦೦
ಕಾ.ನಿ.ಸಂ : ಪ್ರೊ. ಆರ್ಡಿಯಸ್ ಸುಂದರಂ,
ಸಂ : ಪ್ರೊ. ಸ.ಚಿ. ರಮೇಶ

೨೦. ವಿಸ್ತೃತ ಜಾನಪದ ಗ್ರಂಥಸೂಚಿ
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೭೦೦.೦೦
ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ

೨೧. ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ
ಸಂ : ಡಾ. ಇಂದಿರಾ ಹೆಗ್ಗಡೆ ೧೫೦.೦೦

೨೨. ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು
ಸಂ : ಶಾಂತಿ ನಾಯಕ ೧೨೦.೦೦

೨೩. **Manteswamy Epic Tradition of South Karnataka**
Prof. Ambalike Hiriyanna ೨೮೦.೦೦

೨೪. **Dakshinatya Abhinaya Siddhanta**
Dr. Guru Rao Bapat ೧೦೦.೦೦

೨೫. ನಾಡವರ ಜಾನಪದ ತವನಿಧಿ
: ಪ್ರೊ. ಎನ್.ಆರ್. ನಾಯಕ ೨೬೦.೦೦

೨೬. **The Bayalatas of North Karnataka**
Dr. Basavaraja Malashetty
Translated by: Dr. Parvathi G. Aithal ೧೩೦.೦೦

೨೭. ತಾತ್ಯಾ–ಬಾಪು ಅವರ ಲಾವಣಿಗಳು
ಸಂ : ಡಾ. ಹರಿಲಾಲ ಪವಾರ ೮೦.೦೦

೨೮. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ
ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್ ೧೭೦.೦೦

೨೯. ಬೆಳಗಲ್ಲು ವೀರಣ್ಣ
ಡಾ. ಎಂ.ಎನ್. ವೆಂಕಟೇಶ್

೩೦. ಮಂಜಮ್ಮ ಜೋಗತಿ ೮೦.೦೦
ಡಾ. ಚಂದ್ರಪ್ಪ ಸೊಬಟಿ

೩೧. ಡಾ. ಪಿ.ಕೆ. ರಾಜಶೇಖರ
ಸಂಗಮೇಶ ಎಸ್. ಗಣಿ ೧೨೦.೦೦

೩೨. ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ)
ಸಂಚಿಕೆ–೧, ೨, ೩ & ೪
ಬಿಡಿ ಪ್ರತಿಗೆ ೫೦.೦೦

ತಾತ್ಯಾ-ಬಾಪು ಅವರ ಲಾವಣಿಗಳು

ಜನಪದ ಸಾಹಿತ್ಯ ಚರಿತ್ರೆಯಲ್ಲಿ ಮೌಖಿಕ ಪರಂಪರೆಗೆ ಮಹತ್ವದ ಸ್ಥಾನವಿದೆ. ಮೌಖಿಕ ಸಾಹಿತ್ಯವು ಅನೇಕ ಕವಲುಗಳಲ್ಲಿ ಟಿಸಿಲೊಡೆದಿದೆ. ಅದು ಶಿಷ್ಟ ಸಾಹಿತ್ಯ ಪ್ರಕಾರದಂತೆ ವ್ಯಾಕರಣದ ದೀಕ್ಷೆಯನ್ನು ಪಡೆದುಕೊಂಡು ಅಭಿವ್ಯಕ್ತಿ ಪಡೆಯದಿದ್ದರೂ, ಅನುಭವಜನ್ಯ ಕಾವ್ಯವಾಗಿ ಹೊರಹೊಮ್ಮಿದ್ದು ಅದರ ಅನನ್ಯತೆಗೆ ಸಾಕ್ಷಿಯಾಗಿದೆ. ಜನಪದರು ಸಮಕಾಲೀನ ಸಂಗತಿಗಳಿಗೆ ಸ್ಪಂದಿಸುತ್ತ ಚರಿತ್ರೆಯನ್ನು ಹಾಡಿನ ಮೂಲಕ ಕಟ್ಟಿಕೊಟ್ಟಿರುವುದು ಗಮನಾರ್ಹ. ನಿರೂಪಣಾತ್ಮಕ ಜನಪದ ಪದ್ಯ ಪ್ರಕಾರಗಳಲ್ಲಿ 'ಲಾವಣಿ' ಒಂದು ಮುಖ್ಯ ಪ್ರಕಾರ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದ ಘಟನಾವಳಿಗಳನ್ನು ಪ್ರಮುಖ ವಿಷಯವಸ್ತುವನ್ನಾಗಿಸಿಕೊಂಡ 'ಲಾವಣಿ ಸಾಹಿತ್ಯ' ಚರಿತ್ರೆಯನ್ನು ಅರಿತುಕೊಳ್ಳಲು ಇರುವ ಮೌಖಿಕಮಾರ್ಗ ಎಂಬುದನ್ನು ಯಾರೂ ಬಲ್ಲರು. ಈ ಹಿನ್ನೆಲೆಯಲ್ಲಿ ಲಾವಣಿಕಾರರು ಹಾಡುವ ಲಾವಣಿ ಸಾಹಿತ್ಯವು ಚಾರಿತ್ರಿಕ, ಸಾಹಿತ್ಯಿಕ, ಸಾಮಾಜಿಕ ಅಧ್ಯಯನದ ಅನೇಕ ಸಾಧ್ಯತೆಗಳನ್ನು ಒಳಗೊಂಡಿರುವ ಕಾರಣಕ್ಕೆ ಅವುಗಳ ಸಂಗ್ರಹ, ಸಂಪಾದನೆ, ಅಧ್ಯಯನ ಇತ್ಯಾದಿ ಕಾರ್ಯಗಳು ಮುಖ್ಯವೆನಿಸುತ್ತವೆ. ವಿಜಾಪುರದ ಗಡಿ ಭಾಗದಲ್ಲಿರುವ 'ಸಂಖ' ಗ್ರಾಮದ 'ತಾತ್ಯಾ-ಬಾಪು' ಎಂಬ ಲಾವಣಿಕಾರರು ರಚಿಸಿ, ಹಾಡಿದ ಲಾವಣಿಗಳನ್ನು ಡಾ. ಹರಿಲಾಲ ಪವಾರ ಅವರು 'ತಾತ್ಯಾ-ಬಾಪು ಅವರ ಲಾವಣಿಗಳು' ಸಂಕಲನದಲ್ಲಿ ಸಂಗ್ರಹಿಸಿ ಕೊಟ್ಟಿರುವರು. ಅಧ್ಯಯನಪೂರ್ಣ ಪ್ರಸ್ತಾವನೆಯನ್ನು ಬರೆದಿರುವ ಸಂಪಾದಕರು, ಲಾವಣಿ ಸಾಹಿತ್ಯದ ಸಂಗ್ರಹಕಾರ್ಯ, ಅದು ಬೆಳೆದು ಬಂದ ಬಗೆ, ಅದನ್ನು ಹಾಡುವ ಶೈಲಿ, ನಿರೂಪಿಸುವ ವಿಧಾನ, ಹರದೇಶಿ-ನಾಗೇಶಿ ಲಾವಣಿ ಪ್ರಕಾರ ಇತ್ಯಾದಿ ಅಂಶಗಳನ್ನು ದಾಖಲಿಸಿದ್ದಾರೆ. ಪ್ರಕೃತ ಶೀರ್ಷಿಕೆ ಲಾವಣಿ ಸಾಹಿತ್ಯ ಸಂಗ್ರಹಕ್ಕೆ ಹೊಸ ಸೇರ್ಪಡೆಯಾಗಿದೆ. ಡಾ. ಪವಾರ ಅವರು ಈ ಸಂಕಲನದ ಮೂಲಕ ಲಾವಣಿ ಸಾಹಿತ್ಯಕ್ಕೆ ಮತ್ತೊಂದು ಕೊಡುಗೆಯನ್ನು ನೀಡಿದ್ದಾರೆ. ಅಮೂಲ್ಯ ಕೃತಿಯನ್ನು ಸಂಪಾದಿಸಿಕೊಟ್ಟಿರುವ ಡಾ. ಹರಿಲಾಲ ಪವಾರ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ISBN 978-93-83149-25-4
9 789383 149254

₹ : ೮೦/-